## ಅಧ್ಯಾಯ 1

# ಸೃಷ್ಟಿ

ಆದಿಕಾಂಡವು ವಿಶ್ವವನ್ನು ವ್ಯಾಪಿಸಿರುವಂತಹ ಸೃಷ್ಟಿಯ ಕುರಿತಾದ ಒಂದು ವೈಭವಯುಕ್ತವಾದ, ಅಮೋಘವಾದ, ದೃಶ್ಯಾವಳಿಯಂಥ ನೋಟದೊಂದಿಗೆ ಆರಂಭಗೊಳ್ಳುತ್ತದೆ. ಸಾರ್ವಭೌಮ ಸೃಷ್ಟಿಕರ್ತನ ಸ್ವರವು ಮಾತಾಡಿದಾಗ, ಒಂದು ಕಣ್ಣುಕುಕ್ಕುವಂತಹ ಬೆಳಕು ಕಾರ್ಗತ್ತಲನ್ನು ಸೀಳಿಕೊಂಡು ಬಂದಿತ್ತು ಮತ್ತು ಅದನ್ನು ಬೆಳಕಿನಿಂದ ಬೇರ್ಪಡಿಸಿತ್ತು. ದೊಡ್ಡ ಪಟವನ್ನು ಇಟ್ಟುಕೊಂಡಿರುವ ಚಿತ್ರಕಲೆಗಾರನ ಹಾಗೆ, ಲೇಖಕನು ಹಿನ್ನಲೆಯಲ್ಲಿ ವಿಶ್ವವನ್ನು ಚಿತ್ರಿಸುತ್ತಾನೆ. ಆಕಾಶಮಂಡಲದಲ್ಲಿದ್ದ ನೀರಿನಿಂದ ಭೂಮಿಯ ಮೇಲಿದ್ದ ನೀರನ್ನು ಬೇರ್ಪಡಿಸುವ ಮೂಲಕ, ಒಂದು ವಿಭಜನೆ ಸಂಭವಿಸಿತು. ಇದರ ನಂತರದಲ್ಲಿ ಹೆಚ್ಚುವರಿ ಒಣನೆಲವನ್ನು ಸೇರಿಸಲಾಯಿತು, ಅದರಲ್ಲಿ ಸಮೃದ್ಧಿಯಾಗಿ ಕಾಯಿಪಲ್ಯಗಳು ತುಂಬಿಕೊಂಡಿದ್ದವು. ರಾತ್ರಿಯನ್ನು ಮತ್ತು ಹಗಲನ್ನು ಬೇರೆ ಬೇರೆ ಮಾಡುವಂತೆ ಹಾಗೂ ಕಾಲಗಳನ್ನು ಮತ್ತು ವರ್ಷಗಳನ್ನು ಕ್ರಮವಾಗಿ ತೋರಿಸುವಂತೆ ಆಕಾಶದಲ್ಲಿ, ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳು ಅವುಗಳ ಸ್ಥಳದಲ್ಲಿ ಇಡಲ್ಪಟ್ಟವು.

ಈ ಮಹಾನ್ ಕಲಾಕೃತಿಯ ಮುಂದುಗಡೆಯಲ್ಲಿ, ಸೃಷ್ಟಿಯ ಕುರಿತಾದ ಲೇಖಕನ ದೃಷ್ಟಿಯು ಅತಿ ಚಿಕ್ಕ ಅಂಶಗಳ ಮೇಲೆ ನೆಟ್ಟಿತು. ಕೆಳಗಿನ ಸಮುದ್ರವನ್ನು ತುಂಬಿಕೊಂಡ ಸಕಲ ವಿಧವಾದ ಜಲಚರಗಳನ್ನು ಕುರಿತು ತಿಳಿಯಪಡಿಸುತ್ತಾನೆ, ಅದೇ ವೇಳೆ ಹಲವಾರು ಪಕ್ಷಿಗಳ ಬಾನಿನಲ್ಲಿ ಹಾರಾಡುತ್ತಿದ್ದವು. ಆತನು ಒಣಭೂಮಿಯ ಮೇಲೆ ಗಮನವನ್ನು ನೆಟ್ಟಾಗ, ಲೇಖಕ/ಚಿತ್ರಕಲಾಕಾರನು ಖಾಲಿ ಸ್ಥಳಗಳಲ್ಲಿ ದೇವರು ಸಾಕಷ್ಟು ವಿಧದ ಪ್ರಾಣಿಗಳಿಂದ, ಭೂಮಿಯ ಮೇಲೆ ಜೀವಿಸುವ ಕಾಡುಮೃಗಗಳು, ಮಂದೆ ಮತ್ತು ಹಿಂಡುಗಳು, ಮತ್ತು ಸರಿಸೃಪಗಳು ಸೇರಿದಂತೆ ವಿವಿಧ ಪ್ರಾಣಿಗಳಿಂದ ತುಂಬಿಸುವದನ್ನು ಚಿತ್ರಿಸಿದನು. ಅಂತಿಮವಾಗಿ, ಸೃಷ್ಟಿಯ ಸರ್ವೋಚ್ಛತೆಯ ಕೇಂದ್ರಭಾಗದಲ್ಲಿ, ದೇವರು ತನ್ನ ಸ್ವರೂಪದಲ್ಲಿರುವಂಥ ಒಬ್ಬ ಜೀವಿಯನ್ನು ರೂಪಿಸುವ ಕುರಿತು ಆತನು ಚಿತ್ರಿಸಿದನು: ಆತನ ಸ್ವಂತ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟ ಮನುಷ್ಯನು, ಆತನೊಂದಿಗೆ ಸೃಷ್ಟಿಕರ್ತನು ಒಂದು ವೈಯಕ್ತಿಕ ಸಂಬಂಧವನ್ನಿಟ್ಟುಕೊಳ್ಳಬಹುದಾಗಿತ್ತು. ಮಿಕ್ಕ ಎಲ್ಲಾ ಜೀವಿಗಳಿಂದ ಆತನನ್ನು ಪ್ರತ್ಯೇಕಗೊಳಿಸುವವನಾಗಿ, ದೇವರು ಮನುಷ್ಯನಿಗೆ ತನ್ನ ಅತ್ಯಾಶ್ಚರ್ಯವಾದ ಸೃಷ್ಟಿಯ ಮೇಲೆ ಧೊರೆತನ ನಡಿಸುವಂತೆ ಮತ್ತು ಪೋಷಣೆ ಮಾಡುವಂತೆ ದೊಡ್ಡ ಸದವಕಾಶ ಮತ್ತು ಜವಾಬ್ದಾರಿಯನ್ನು ಕೊಟ್ಟನು.

ಆದಿಕಾಂಡ ಮೊದಲನೆಯ ಅಧ್ಯಾಯದಲ್ಲಿನ ಈ ಸೃಷ್ಟಿಯ ದರ್ಶನವು ಮನಃಸೆಳೆಯುವಂಥದ್ದು ಮತ್ತು ನಿಬ್ಬೆರಗಾಗಿಸುವಂಥದ್ದು. ವಾಚಕನು ವಿಶ್ವದ ಸಾರ್ವಭೌಮ ದೇವರಿಗಿರುವ ಸೃಷ್ಟಿಯ ಚಾತುರ್ಯತೆ, ಜ್ಞಾನ, ಮತ್ತು ಶಕ್ತಿಗಳನ್ನು ಕಂಡು ಭಯಭಕ್ತಿಯನ್ನು ತೋರಿಸುವಂತೆ ಮಾಡುವದು. ಜಗತ್ತುಗಳನ್ನು ಅಸ್ತಿತ್ವಕ್ಕೆ ತರಬೇಕಾದರೆ ದೇವರು ಕೇವಲ ಮಾತಾಡಬೇಕಾಗಿತ್ತಷ್ಟೆ. ಅಂತಹ ಶ್ರೇಷ್ಠ ದೇವರು ದುರ್ಬಲ, ಚಂಚಲವಾದ ಮಾನವ

ಜೀವಿಗಳ ವಾಸಕ್ಕಾಗಿ ಅಷ್ಟೊಂದು ಸುಂದರವಾದ ಲೋಕವೊಂದನ್ನು ಸೃಷ್ಟಿಸಿದ್ದಾನೆ, ಮತ್ತು ಈಗಲೂ ನಿರಂತರವಾಗಿ ಮನುಷ್ಯನನ್ನು ಆಶೀರ್ವದಿಸುವವನಾಗಿ ಆತನ ಪಾಪತನ ಹಾಗೂ ಕೆಲವು ಸಾರಿ ಆತನು ಅವಿಧೇಯತೆಯನ್ನು ತೋರಿಸಿದಾಗ್ಯೂ ಆತನಿಗೆ ಒದಗಿಸಿ ಕೊಡುವವನಾಗಿದ್ದಾನೆ ಎಂಬುದನ್ನು ಅರಿತುಕೊಳ್ಳುವಾಗ ಅದು ಸ್ತೋತ್ರ ಮತ್ತು ದೀನತೆಗಳನ್ನು ಉಂಟು ಮಾಡತಕ್ಕದ್ದು. ಈ ಭಯದಿಂದ ಕೂಡಿ ಭಕ್ತಿಯ ಪ್ರಜ್ಞೆಯು ಎಂಟನೆಯ ಕೀರ್ತನೆಯಲ್ಲಿ ಪ್ರತಿಫಲನಗೊಂಡಿರುತ್ತದೆ:

> ನಿನ್ನ ಕೈಕೆಲಸವಾಗಿರುವ ಆಕಾಶಮಂಡಲವನ್ನೂ ನೀನು ಉಂಟುಮಾಡಿದ ಚಂದ್ರನಕ್ಷತ್ರಗಳನ್ನೂ ನಾನು ನೋಡುವಾಗ - ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ. ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ; ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, ಆಕಾಶಪಕ್ಷಿಗಳು, ಸಮುದ್ರದ ಮೀನುಗಳು, ಅದರಲ್ಲಿ ಸಂಚರಿಸುವ ಸಕಲವಿಧವಾದ ಜೀವಜಂತುಗಳು ಇವೆಲ್ಲವನ್ನೂ ಅವನಿಗೆ ಅಧೀನಮಾಡಿದ್ದೀಯಲ್ಲವೇ. ನಮ್ಮ ಕರ್ತನಾದ ಯೆಹೋವನೇ, ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು (ಕೀರ್ತನೆ 8:3-9).

ಕೀರ್ತನೆಗಾರನು ಈ ವಿಶ್ವವು ಒಂದು ದೈವಿಕ ಸೃಷ್ಟಿಯಾಗಿದೆ ಎಂದು ಮಾನವರು ಅರ್ಥಮಾಡಿಕೊಳ್ಳಬೇಕು, ಅದನ್ನು ಗೊತ್ತುಗುರಿಯಿಲ್ಲದೆ ಉಂಟಾದ ಫಲಿತ ಅಥವಾ ಆಕಸ್ಮಿಕ ಪ್ರಕ್ರಿಯೆಯಿಂದ ಉಂಟಾಗಿದೆ ಎಂಬುದಾಗಿ ಕಾಣಬಾರದು ಎಂಬುದು ದಾವೀದನ ಬಯಕೆಯಾಗಿತ್ತು. ಆದಿಕಾಂಡದಲ್ಲಿ ಸೃಷ್ಟಿಯ ಚರಿತ್ರೆಯು ಕ್ರಮಬದ್ಧವಾಗಿದೆ ಮತ್ತು ಒಟ್ಟಾರೆಯಾದ ವಿನ್ಯಾಸಕ್ಕೆ ಸಮತೋಲನವನ್ನು ಒದಗಿಸುವಂತೆ ಪುನರಾವರ್ತನೆಗೊಳ್ಳುವ ಒಂದು ನಮೂನೆಯನ್ನು ಒಳಗೊಂಡಿರುತ್ತದೆ. ಲೇಖಕನು ಪದ್ಯವನ್ನು ಬರೆಯುತ್ತಿಲ್ಲವಾದರೂ, ಆತನು ಸೃಷ್ಟಿಯ ಆರು ದಿನಗಳ ಕುರಿತು ಬಣ್ಣಿಸುವ ವೇಳೆ ಸಾಮಾನ್ಯ ಇಬ್ರಿಯ ಸಾಹಿತ್ಯದ ತಂತ್ರ, ಪುನರಾವರ್ತನೆ ಇವುಗಳನ್ನು ಬಳಸುತ್ತಾನೆ:

- ಪ್ರತಿಯೊಂದು ದಿನವು ಒಂದು ಪರಿಚಯದೊಂದಿಗೆ ಆರಂಭವಾಗುತ್ತದೆ: "ಆಗ ದೇವರು ... ಅನ್ನಲು" (1:3, 6, 9, 14, 20, 24; ನೋಡಿರಿ 1:11, 26, 29).
- ನಂತರ, ಒಂದು ದೈವಿಕ ಆಜ್ಞೆ ಕೊಡಲ್ಪಡುತ್ತದೆ: "ಉಂಟಾಗಲಿ"; "ಕೂಡಿಕೊಳ್ಳಲಿ"; "ಅದರಲ್ಲಿ ಉಂಟಾಗಲಿ" (1:3, 6, 9, 11, 14, 20, 24, 26).
- ಆ ಬಳಿಕ ಒಂದು ವರದಿಯು ಕೊಡಲ್ಪಡುತ್ತದೆ: "ಹಾಗೆಯೇ ಆಯಿತು" (1:7, 9, 11, 15, 24, 30).
- ಆ ಸೃಷ್ಟಿಸಲ್ಪಟ್ಟ ಸಂಗತಿಯ ಮೌಲ್ಯಮಾಪನವು ಮಾಡಲ್ಪಡುತ್ತದೆ, ಉದಾಹರಣೆಗೆ "ದೇವರು ಒಳ್ಳೇದೆಂದು ನೋಡಿದನು" (1:4, 10, 12, 18, 21, 25, 31).
- ಅಂತಿಮವಾಗಿ, ಒಂದು ಕಾಲದ ಸರಣಿಯು ಮುಂದಿಡಲ್ಪಡುತ್ತದೆ, ಅದರಲ್ಲಿ "ಸಾಯಂಕಾಲವೂ" ಮತ್ತು "ಪ್ರಾತಃಕಾಲವೂ" ಸೇರಿರುತ್ತವೆ (1:5, 8, 13, 19, 23, 31).

ದೇವರು ತನ್ನ ಸೃಷ್ಟಿಯನ್ನು "ಒಳ್ಳೇದು" ಎಂದು ಘೋಷಿಸಿದಾಗ ಮತ್ತು ಅದು "ಬಹಳ

ಒಳ್ಳೇದು" ಎಂಬ ನಿರ್ಣಯಕ್ಕೆ ಬಂದಾಗ, ಆತನು "ಕೆಟ್ಟದ್ದು" ಆಗಿರುವಂಥದ್ದಕ್ಕೆ ವಿರುದ್ಧವಾಗಿ ನೈತಿಕವಾದ ರೀತಿಯಲ್ಲಿ "ಒಳ್ಳೇದು" ಆಗಿರುವ ಒಂದು ಸಂಗತಿ ಎಂಬ ಅರ್ಥದಲ್ಲಿ ಆತನು ಇಬ್ರಿಯ ಭಾಷೆಯ טוֹב (*ಟೊಬ*) ಎಂಬ ಪದವನ್ನು ಬಳಸುತ್ತಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ವ್ಯಕ್ತಪಡಿಸಲ್ಪಟ್ಟ ವಿಚಾರವು ಏನೆಂದರೆ ಕರ್ತನು ತಾನು ಸೃಷ್ಟಿಸಿದ್ದನ್ನು ಪೂರ್ಣವಾಗಿ ಅನುಮೋದಿಸಿದನು ಯಾಕೆಂದರೆ ಅದು ಇರಬೇಕಾಗಿದ್ದ ರೀತಿಯಲ್ಲಿಯೇ ಇತ್ತು, ಸರಿಪಡಿಸುವದರ ಅಗತ್ಯವಿರುವಂತಹ ಯಾವದೇ ಕುಂದುಗಳು ಅಥವಾ ದೋಷಗಳಿಲ್ಲದಂತೆ ಇತ್ತು. ನುರಿತ ಚಿತ್ರಕಲಾಕಾರನಾದ ದೇವರು ಸ್ವಲ್ಪ ಹಿಂದಕ್ಕೆ ಸರಿದು ತನ್ನ ಕೈಕೆಲಸ ಸೌಂದರ್ಯವನ್ನೊಮ್ಮೆ ಪ್ರಶಂಸಿಸುವದಕ್ಕೆ ಬಿಡುವು ಮಾಡಿಕೊಂಡನೇನೋ ಎಂಬಂತಿರುತ್ತದೆ.

ಸೃಷ್ಟಿಯ ಚರಿತ್ರೆಯಲ್ಲಿ ಕಾಣುವ ಇನ್ನೊಂದು ಕಾವ್ಯಾತ್ಮಕ ವೈಶಿಷ್ಟ್ಯತೆಯೆಂದರೆ ಅದರ ಸುಸಂಗತವಾಗಿರುವ ವಿನ್ಯಾಸವೇ ಆಗಿದೆ: ಸಕಲ ನಿಷ್ಪ್ರಾಣದ ಸಂಗತಿಗಳು ಮತ್ತು ಪ್ರಾಣವುಳ್ಳ ಜೀವರಾಶಿಗಳು ಸೇರಿದಂತೆ, ಆಕಾಶ ಮತ್ತು ಭೂಮಿಗಳ ಸೃಷ್ಟಿಯು ಆರು ದಿನಗಳಲ್ಲಿ ಸಂಭವಿಸಿತ್ತು. ಮೊದಲನೆಯ ದಿನದಂದು, ಬೆಳಕು ಮತ್ತು ಕತ್ತಲೆಗಳನ್ನು ಬೇರೆ ಬೇರೆ ಮಾಡಲಾಯಿತು; ಮತ್ತು ನಾಲ್ಕನೆಯ ದಿನದಂದು, ಕ್ರಮಬದ್ಧವಾಗಿ ಹಗಲು ಮತ್ತು ರಾತ್ರಿಗಳನ್ನು ಬೇರೆ ಬೇರೆ ಮಾಡುವಂತೆ ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳನ್ನು ಆಕಾಶದಲ್ಲಿ ಇಡಲಾಯಿತು. ಎರಡನೆಯ ದಿನದಲ್ಲಿ ಮೇಲ್ಭಾಗ ಹಾಗೂ ಕೆಳಭಾಗದಲ್ಲಿರುವ ನೀರನ್ನು ಬೇರ್ಪಡಿಸುವ ಕಾರ್ಯ ನಡೆಯಿತು, ಮತ್ತು ಮೇಲಿನ ಆಕಾಶವನ್ನು ಪಕ್ಷಿಗಳಿಂದ ಮತ್ತು ಕೆಳಗಿನ ಸಮುದ್ರದಲ್ಲಿ ಜಲಚರಗಳನ್ನು ತುಂಬಿಸುವದಕ್ಕಾಗಿ ಐದನೆಯ ದಿನವು ಒದಗಿಸಲ್ಪಟ್ಟಿತು. ಮೂರನೆಯ ದಿನದಲ್ಲಿ ಒಣಭೂಮಿಯನ್ನು ನೀರಿನಿಂದ ("ಸಮುದ್ರ") ಬೇರ್ಪಡಿಸುವಿಕೆ ಮತ್ತು ಸಸ್ಯಗಳ ಪರಿಚಯ ನಡೆದರೆ, ಆರನೆಯ ದಿನವು ಭೂಮಿಯನ್ನೆಲ್ಲಾ ದೇವರು ಎಲ್ಲಾ ವಿಧವಾದ ಪ್ರಾಣಿಗಳಿಂದ ಮತ್ತು ಅಂತಿಮವಾಗಿ ಮಾನವರಿಂದ ತುಂಬಿಸುವ ಕಾರ್ಯವನ್ನು ಒಳಗೊಂಡಿತ್ತು. ಅತಿ ಆರಂಭದಲ್ಲಿದ್ದ ಅಸಂಪೂರ್ಣತೆಯನ್ನು ಸಂಪೂರ್ಣತೆಗೆ ತರಲಾಯಿತು; ಆಕಾರವಿಲ್ಲದಿರುವಿಕೆಗೆ ಒಂದು ವಿನ್ಯಾಸವು ಒದಗಿಸಲ್ಪಟ್ಟಿತು. ದೇವರು ಏಳನೆಯ ದಿನದಂದು "ವಿಶ್ರಮಿಸಿಕೊಂಡನು" (2:2, 3) ಎಂದು ಹೇಳುವ ಮೂಲಕ ಲೇಖಕನು ಮುಕ್ತಾಯಗೊಳಿಸುತ್ತಾನೆ.

## ಸೃಷ್ಟಿಯ ಸುಸಂಗತವಾಗಿರುವ ವಿನ್ಯಾಸ

ಅಸಂಪೂರ್ಣವಾದ ಮತ್ತು "ಕ್ರಮವಿಲ್ಲದ" (1:2) - ಶೂನ್ಯ ಮತ್ತು ಕತ್ತಲೆ

| *ಮಂಡಲಗಳು* | *ತುಂಬಿಸುವ ಕ್ರಮಾನುಗತಿಗಳು* |
|---|---|
| ದಿನ 1: ಕತ್ತಲೆಯೊಳಗಿಂದ ಬೆಳಕು (ಬೆಳಕು ಸೃಷ್ಟಿಸಲ್ಪಟ್ಟಿತು ಮತ್ತು ಕತ್ತಲೆಯಿಂದ ಬೇರ್ಪಡಿಸಲ್ಪಟ್ಟಿತು; 1:3-5) | ದಿನ 4: ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳು (ಹಗಲು ಮತ್ತು ರಾತ್ರಿಗಳನ್ನು ಆಳ್ವಿಕೆ ಮಾಡಲು; 1:14-19) |
| ದಿನ 2: ನೀರಿನಿಂದ ಆಕಾಶವನ್ನು ಬೇರ್ಪಡಿಸುವಿಕೆ (ಮೇಲ್ಭಾಗದ ನೀರನ್ನು ಕೆಳಗಣ ನೀರಿನಿಂದ ಬೇರ್ಪಡಿಸಿದ್ದು; 1:6-8) | ದಿನ 5: ಪಕ್ಷಿಗಳು ಮತ್ತು ಮೀನುಗಳು (ಆಕಾಶದಲ್ಲಿ ಮತ್ತು ಸಮುದ್ರದಲ್ಲಿ ಜೀವಿಸುವದಕ್ಕೆ; 1:20-23) |
| ದಿನ 3: ಒಣನೆಲದಿಂದ ಸಮುದ್ರ (ಮರಗಿಡಗಳನ್ನು ಉತ್ಪಾದಿಸುವ ಭೂಮಿ; 1:9-13) | ದಿನ 6: ಒಣನೆಲದಿಂದ ಸಮುದ್ರದ ಬೇರ್ಪಡಿಸುವಿಕೆ (ಭೂಮಿಯು ಸಸ್ಯಗಳನ್ನು ಉತ್ಪಾದಿಸುವದು; 1:24-31) |

ದಿನ 7: ಸಂಪೂರ್ಣ ಮತ್ತು "ಬಹಳ ಒಳ್ಳೇದು" - ದೇವರು ವಿಶ್ರಮಿಸಿಕೊಂಡನು (2:1-3)

ಸೃಷ್ಟಿಯ ಚರಿತ್ರೆಯು ವಿಶ್ವದ ಕ್ರಮಬದ್ಧತೆ ಮತ್ತು ದೈವಿಕ ವಿನ್ಯಾಸವನ್ನು ತೋರಿಸಿ ಕೊಡುತ್ತದೆ; ಅದೊಂದು ಖಗೋಳ ಆಕಸ್ಮಿಕತೆ ಅಥವಾ ಅಮೂರ್ತವಾದ ನೈಸರ್ಗಿಕ ನಿಯಮಗಳಿಂದಾದ ಒಂದು ಫಲಿತವಾಗಿರುವದಿಲ್ಲ. ಬದಲಾಗಿ, ಅದು ಸಾರ್ವಭೌಮನಾದ ಮತ್ತು ಪ್ರೀತಿಯುಳ್ಳ ದೇವರ ಚಿತ್ತವಾಗಿದ್ದು ಆತನು ಅದನ್ನು ಮಾತಿನಿಂದ ಅಸ್ತಿತ್ವದಲ್ಲಿ ಬರುವಂತೆ ಮಾಡಿದವನು ಮಾತ್ರವೇ ಆಗಿರುವದಿಲ್ಲ, ಆದರೆ ತನ್ನೆಲ್ಲಾ ಸೃಷ್ಟಿಜೀವಿಗಳಿಗೋಸ್ಕರ, ವಿಶೇಷವಾಗಿ ಮನುಷ್ಯನಿಗಾಗಿ ಅದನ್ನು ಪೋಷಣೆ ಮತ್ತು ನವೀಕರಣ ಮಾಡುವದಕ್ಕೆ ನಿರ್ಣಯಿಸಿಕೊಂಡನು (ನೋಡಿರಿ ಕೀರ್ತನೆ 104).

ದೇವರು ಅಸ್ತಿತ್ವದಲ್ಲಿದ್ದಾನೆಂಬ ತತ್ವಜ್ಞಾನದಿಂದ ಕೂಡಿದ ವಾದಗಳೊಂದಿಗೆ ಬೈಬಲ್ ಆರಂಭವಾಗುವದಿಲ್ಲ; ಬದಲಾಗಿ, ಅದು ಸಾರ್ವಭೌಮ ದೇವರು ಇದ್ದಾನೆ ಎಂಬುದನ್ನು ಭಾವಿಸಿಕೊಳ್ಳುವದು ಮಾತ್ರವೇ ಅಲ್ಲ, ಆದರೆ ಆತನು ಬೇರೆ ಎಲ್ಲದರ ಸೃಷ್ಟಿಕರ್ತನೆಂದು ಸಹ ಅಂಗೀಕರಿಸಿಕೊಳ್ಳುತ್ತದೆ. ನಮಗಾಗಿ ಕೊಡಲ್ಪಟ್ಟಿರುವ ದೇವರ ಸಂದೇಶವು ಶಾಸ್ತ್ರಗಳಲ್ಲಿ ಆತನು ಸೃಷ್ಟಿಸುವ ಚಟುವಟಿಕೆಗಳಿಂದ ಆರಂಭಗೊಳ್ಳುತ್ತದೆ.

## "... ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" (1:1, 2)

**[1]ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು. [2]ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು; ಆದಿಸಾಗರದ ಮೇಲೆ ಕತ್ತಲಿತ್ತು; ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು.**

**ವಚನ 1.** ಸೃಷ್ಟಿಯ ಚರಿತ್ರೆಯು בְּרֵאשִׁית *(ಬೆರೆ'ಶಿಥ್)* ಎಂಬುದರಿಂದ ಆರಂಭಗೊಳ್ಳುತ್ತದೆ, ಅದು ದೇವರ ಸೃಷ್ಟಿಯ ಚಟುವಟಿಕೆಯ **ಆದಿ**ಗೆ ಸಂಬಂಧ ಪಟ್ಟದ್ದಾಗಿದೆ. ಸಂಪ್ರದಾಯಿಕ ಅನುವಾದವು, ಅದು ಬೈಬಲಿನ ಎಲ್ಲಾ ಪ್ರಾಚೀನ ಆವೃತ್ತಿಗಳಲ್ಲಿ ಕಂಡು ಬರುವದಾಗಿದ್ದು, 1ನೇ ವಚನವನ್ನು ಒಂದು ಸ್ವತಂತ್ರ ವಾಕ್ಯಸಾಲಾಗಿ ಅನುವಾದಿಸುತ್ತದೆ. ಇದು ಮಸೊರೆಟೆಸರೊಂದಿಗೆ (ಯೆಹೂದಿ ಶಾಸ್ತ್ರಿಗಳು) ಸಮ್ಮತ ಹೊಂದಿರುತ್ತದೆ, ಅವರು ವ್ಯಂಜನದ ಅಂಶಗಳನ್ನು ಸ್ವರಗಳನ್ನು ಕ್ರಿ.ಶ. ೮೦೦ರಲ್ಲಿ ಇಬ್ರಿಯ ವಾಕ್ಯದೊಳಗೆ ಸೇರಿಸಿದರು. NASBಯ ರೀತಿಯಲ್ಲಿಯೇ, ಬಹಳಷ್ಟು ಆಂಗ್ಲ ಆವೃತ್ತಿಗಳು ಸಹ 1ನೇ ವಚನವನ್ನು ಒಂದು ಸ್ವತಂತ್ರ ವಾಕ್ಯಸಾಲಾಗಿ ಅನುವಾದಿಸಿರುತ್ತವೆ (KJV; ASV; RSV; JB; NIV; NKJV; REB; NCV; CEV; NLT; ESV), ಮತ್ತು ಈ ವ್ಯಾಖ್ಯಾನ ಗ್ರಂಥದಲ್ಲಿ ಇದೇ ತಿಳುವಳಿಕೆಯನ್ನು ಅನುಸರಿಸಲಾಗಿರುತ್ತದೆ.[1] ಹಾಗಾದರೆ, 1ನೇ ವಚನವು ಮಿಕ್ಕ ಅಧ್ಯಾಯವನ್ನು (1:2–31) ಸಾರಾಂಶಗೊಳಿಸುವಂತಹ ಒಂದು ಶಿರ್ಷಿಕೆ ಅಥವಾ ಅಧಿಲೇಖನ ಆಗಿರುತ್ತದೆ. ಇದು 5:1; 6:9; 10:1; 11:10ರಲ್ಲಿರುವ ವಂಶಾವಳಿಯ ಹೇಳಿಕೆಗಳೊಂದಿಗೆ ಹೊಂದಿಕೆಯಾಗುತ್ತದೆ. ಪ್ರತಿಯೊಂದು ವಂಶಾವಳಿಯು ಒಂದು ಸ್ವತಂತ್ರ ಪರಿಚ್ಛೇದದೊಂದಿಗೆ ಆರಂಭಗೊಳ್ಳುವದಾಗಿದ್ದು ಅದು ಮುಂದೆ ಬರುವ ಸಂಗತಿಗೆ ಒಂದು ಪರಿಚಯವಾಗಿ ಕಾರ್ಯ ಮಾಡುತ್ತದೆ.[2]

**ದೇವರಿಗೆ** (אֱלֹהִים, *'ಎಲೋಹಿಮ್)* ಪದವು ಬಳಸಲ್ಪಟ್ಟಿದೆ, ಆದರೆ ಅದು ವಾಸ್ತವಿಕದಲ್ಲಿ "ಯೆಹೋವ" ಅಥವಾ "ಎಲ್ ಶಡ್ಡಾಯ್" ರೀತಿಯಲ್ಲಿ ಒಂದು ವೈಯಕ್ತಿಕ ಹೆಸರು ಆಗಿರುವದಿಲ್ಲ. ಈ ಅಧ್ಯಾಯದಲ್ಲಿ, ಇದು ಹೆಚ್ಚು ಸೂಕ್ತವಾಗಿರುತ್ತದೆ ಯಾಕೆಂದರೆ ಕರ್ತೃವು ದೇವರು

*('ಎಲೋಹಿಮ್)*, ವಿಶ್ವದ ಸಾರ್ವಭೌಮ ಸೃಷ್ಟಿಕರ್ತನೇ, ಹೊರತು ಇಸ್ರಾಯೇಲ್ಯರ ವೈಯಕ್ತಿಕ ಒಡಂಬಡಿಕೆಯ ದೇವರಾದ ಯೆಹೋವನು ಅಲ್ಲ.

ವಾಕ್ಯವು ಮುಂದೆ ಹೇಳುವದೇನೆಂದರೆ ದೇವರು **ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು**, ಆತನು ಸಂಪೂರ್ಣ ಜಗತ್ತನ್ನು ಉಂಟುಮಾಡಿದನೆಂದು ಹೇಳುವ ಮತ್ತೊಂದು ವಿಧವಾಗಿದೆ ಅಷ್ಟೆ. ಇಬ್ರಿಯ ಪದ בָּרָא *(ಬಾರಾ')* ಎಂಬುದು ಹಳೆಯ ಒಡಂಬಡಿಕೆಯಲ್ಲಿ ದೇವರನ್ನು ಮಾತ್ರವೇ ಅದರ ಕರ್ತೃವಾಗಿ ತೆಗೆದುಕೊಳ್ಳುವ ಒಂದು ಕ್ರಿಯಾಪದವಾಗಿದೆ; ಅದು ಯಾವಾಗಲೂ ದೇವರ ಸೃಷ್ಟಿಯ ಕ್ರಿಯೆಯನ್ನು ಬಣ್ಣಿಸುವದಾಗಿದೆ, ಮನುಷ್ಯನ ಕ್ರಿಯೆಯನ್ನಲ್ಲ.[3] ಅದು ಯಾವಾಗಲೂ ಒಂದು ಸಂಗತಿಯನ್ನು ಅಸ್ತಿತ್ವಕ್ಕೆ ತರುವದನ್ನು ಸೂಚಿಸುವದಾಗಿದೆ, ಅದು ಈ ಮುಂಚೆ ಇದ್ದ ಸಾಮಗ್ರಿಯಿಂದ ಒಂದನ್ನು ಸೃಷ್ಟಿಸುವದಾಗಿರಬಹುದು (ಯೆಶಾಯ 43:15, 16; 65:18; ಯೆರೆಮೀಯ 31:22ರಲ್ಲಿರುವಂತೆ) ಅಥವಾ ಈ ಮುಂಚೆ ಅಸ್ತಿತ್ವದಲ್ಲಿ ಇಲ್ಲದ ಸಾಮಗ್ರಿಯಿಂದ ಉತ್ಪತ್ತಿ ಮಾಡುವಿಕೆಯಾಗಿರಬಹುದು (ಕೀರ್ತನೆ 89:12; ಯೆಶಾಯ 45:12). ನಿಶ್ಚಯವಾಗಿಯೂ ಆದಿಕಾಂಡ 1ನೇ ಅಧ್ಯಾಯದಲ್ಲಿ ಎರಡನೆಯ ಕಾರ್ಯವು ಸಂಭವಿಸಿರುತ್ತದೆ. ದೇವರು ವಿಶ್ವವನ್ನು *ಎಕ್ಸ್ ನಿಹಿಲೋ* ದಿಂದ ("ಶೂನ್ಯದಿಂದ") ಉಂಟು ಮಾಡಿದನೆಂಬುದಾಗಿ ಈ ವಚನವು ಸ್ಪಷ್ಟವಾಗಿ ನಿರ್ದಿಷ್ಟತೆಯಿಂದ ಹೇಳುವದಿಲ್ಲವಾದರೂ, ಆತನು ಹಾಗೆ ಮಾಡಿದನೆಂಬ ಸೂಚ್ಯಾರ್ಥವನ್ನು ಕೊಡುವದಾಗಿದೆ, ಯಾಕೆಂದರೆ ಆತನು ಆ ಕಾರ್ಯವನ್ನು ಕೇವಲ ಮಾತಾನಾಡುವ ಮೂಲಕ ಅನಾಯಾಸವಾಗಿ ಮಾಡಿದನು. ಈ ವಿಚಾರವು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಹೆಚ್ಚು ಸ್ಪಷ್ಟವಾಗಿರುತ್ತದೆ, ಅಲ್ಲಿ ಹೀಗೆ ಬರೆಯಲ್ಪಟ್ಟಿದೆ, "ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ" (ಇಬ್ರಿಯ 11:3).

**ವಚನ 2.** ಮೊದಲನೆಯ ವಚನದಲ್ಲಿ ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದ್ದರ ಕುರಿತು ಪರಿಚಯಾತ್ಮಕ ಹೇಳಿಕೆಯ ನಂತರ, ಲೇಖಕನು **ಭೂಮಿ**ಯ ಕಡೆಗೆ ಗಮನ ಹರಿಸುತ್ತಾನೆ, ಅದನ್ನು **ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು** (וָבֹהוּ תֹהוּ, *ಥೊಹು ವಾಬೊಹು*) ಎಂದು ಬಣ್ಣಿಸುತ್ತಾನೆ. ಸರಳವಾಗಿ ಹೇಳುವದಾದರೆ, ಅದು ಅಕ್ರಮವಾದ ಒಂದು ಸ್ಥಿತಿಯಲ್ಲಿತ್ತು. ಈ ವಿಧವಾಗಿ ಭೂಮಿಯು ನಿರ್ಜೀವವಾದ ಅಸಂಘಟಿತತೆಯು ಸೃಷ್ಟಿ ಕಾರ್ಯದ ಆರನೆಯ ದಿನದಲ್ಲಿ ಚಿತ್ರಿಸಲ್ಪಟ್ಟಿರುವ ಕ್ರಮ, ಸೌಂದರ್ಯ, ಮತ್ತು ಜೀವಗಳಿಗೆ ವಿರುದ್ಧವಾಗಿರುತ್ತದೆ. ಇಬ್ರಿಯ ಪದಗಳಾದ תֹהוּ (*ಥೊಹು*) ಮತ್ತು בֹהוּ (*ಬೊಹು*) ಎಂಬವುಗಳು ಹಳೆಯ ಒಡಂಬಡಿಕೆಯಲ್ಲಿ ಇನ್ನು ಎರಡು ವಿಭಾಗಗಳಲ್ಲಿ ಮಾತ್ರವೇ ಒಟ್ಟಾಗಿ ಬಳಸಲ್ಪಟ್ಟಿವೆ. ಎರಡೂ ಸ್ಥಳಗಳಲ್ಲಿ, ಅವುಗಳು ದುಷ್ಟ ಜನಾಂಗಗಳ ಮೇಲೆ ದೇವರ ನ್ಯಾಯತೀರ್ಪು ಬರುವದನ್ನು ಬಣ್ಣಿಸುತ್ತವೆ. ಮೊದಲನೆಯ ವಾಕ್ಯಭಾಗವು ಹೇಳುವದೇನೆಂದರೆ ಯೆಹೋವನ "ಖಡ್ಗವು ಮೇಲಿನ ಲೋಕದಲ್ಲಿ ರೋಷಪಾನಮಾಡಿ ನಾನು ಶಪಿಸಿದ ಎದೋಮೆಂಬ ಜನಾಂಗದ ಮೇಲೆ ನ್ಯಾಯತೀರಿಸುವದಕ್ಕೆ ದುಮುಕುವದು" (ಯೆಶಾಯ 34:5) ಎಂಬದೆ, ಮತ್ತು ಯೆಶಾಯನು ದೈವಿಕ ನ್ಯಾಯತೀರ್ಪಿನಿಂದಾದ ಫಲಿತವನ್ನು "ಹಾಳು" (*ಥೋಹು*) ಮತ್ತು "ಪಾಳು" (*ಬೊಹು*) ಎಂಬುದಾಗಿ ಬಣ್ಣಿಸುತ್ತಾನೆ (ಯೆಶಾಯ 34:11).

ಇನ್ನೊಂದು ವಾಕ್ಯಭಾಗವು ಯೆರೆಮೀಯನ ಪುಸ್ತಕದಿಂದ ಬರುತ್ತದೆ. ಪ್ರವಾದಿಯು ಯೆರೂಸಲೇಮ್ ಮತ್ತು ಯೆಹೂದದ ಮೇಳೆ ಅವರ ಅಪರಾಧಗಳು ಹಾಗೂ

ವಿಗ್ರಹಾರಾಧನೆಯ ನಿಮಿತ್ತ ಒಂದು ನಾಶನದ ಸಂದೇಶವನ್ನು ಸಾರುತ್ತಿದ್ದಾನೆ. ಒಂದು ದರ್ಶನದಲ್ಲಿ, ಯೆಹೂದಿ ಸ್ವದೇಶ ಮತ್ತು ರಾಜಧಾನಿಯಲ್ಲಿ ಉಳಿದಿದ್ದನ್ನೆಲ್ಲಾ ಬಾಬೆಲಿನವರ ಸೈನ್ಯವು ಧ್ವಂಸಗೊಳಿಸುತ್ತಾ ಸಾಗಿದಂತೆ, ಆತನು ಅಲ್ಲಿ ಸೃಷ್ಟಿಯ ಹಿಮ್ಮೊಗ ಸಾಗುವಿಕೆಯನ್ನು ಕಂಡನು. ಒಂದು ಪ್ರಬಲವಾದ ಕಾವ್ಯಾತ್ಮಕ ಚಿತ್ರಣದಲ್ಲಿ, ಆತನು ಭೂಮಿಯನ್ನು ಸೃಷ್ಟಿಯ ಮುಂಚೆ ಇದ್ದ ಅದರ ಮೂಲ ಸ್ಥಿತಿಗೆ ಮುಳುಗಿ ಹೋಗುವದಾಗಿ ಬಣ್ಣಿಸುತ್ತಾನೆ. ಎಲ್ಲಾ ಪಟ್ಟಣಗಳು ನಾಶಗೊಳಿಸಲ್ಪಟ್ಟವು, ಮತ್ತು ಅಲ್ಲಿ ಜನರಾಗಲಿ, ಪಕ್ಷಿಗಳಾಗಿ, ಸಸ್ಯಗಳಾಗಲಿ, ಅಥವಾ ಬೆಳಕಾಗಲಿ ಇರಲಿಲ್ಲ. ಭೂಮಿಯು ಮತ್ತೊಂದಾವರ್ತಿ "ಹಾಳು" (*ಥೋಹು*) ಮತ್ತು "ಪಾಳು" (*ಬೋಹು*) ಆಗಿತ್ತು (ಯೆರೆಮೀಯ 4:23). ಈ ನಾಶನದ ಕುರಿತಾದ ಪ್ರವಾದನೋಕ್ತಿಗಳಲ್ಲಿ ಎರಡು ಪದಗಳನ್ನು ಒಟ್ಟಾಗಿ ಬಳಸಿರುವದು ಆದಿಕಾಂಡ 1:2-31ರಲ್ಲಿನ ಅರ್ಥದ ಕುರಿತು ಬೆಳಕನ್ನು ಚೆಲ್ಲುವಂತಹ ಒಂದು ಅರ್ಥನಿರೂಪಣೆಯನ್ನು ಕಟ್ಟುವದಾಗಿದೆ - ಯಾವದೆಂದರೆ, ಕತ್ತಲೆ, ಅಸ್ತವ್ಯಸ್ತತೆ, ಮತ್ತು ಶೂನ್ಯತೆಗಳನ್ನು ಹೋಗಲಾಡಿಸಿ ಅವುಗಳ ಸ್ಥಾನದಲ್ಲಿ ಬೆಳಕು, ಆಕಾರ, ಸೌಂದರ್ಯ, ಮತ್ತು ಅರ್ಥಗಳನ್ನು ತುಂಬುವ ವರೆಗೂ ಯಾವದನ್ನೇ ಆಗಲಿ "ಒಳ್ಳೇದು" ಎಂದು ಘೋಷಿಸುವದಕ್ಕೆ ಸಾಧ್ಯವಿಲ್ಲ ಎಂಬುದೆ.

**ಆದಿಸಾಗರದ ಮೇಲೆ ಕತ್ತಲಿತ್ತು** ಎಂಬ ಹೇಳಿಕೆಯಲ್ಲಿ, "ಕತ್ತಲೆ" ಮತ್ತು "ಆದಿಸಾಗರ" ಎಂಬ ಪದಗಳು ಈ ಶಕ್ತಿಗಳನ್ನು ಪ್ರಾಚೀನ ಜನರು ನೋಡುತ್ತಿದ್ದ ರೀತಿಯ ನಿಮಿತ್ತವಾಗಿ ಒಂದು ಅಶುಭಸೂಚಕದ ವಿಧದಲ್ಲಿ ಜೋಡಣೆಗೊಂಡಿರುವಂತೆ ಕಾಣಿಸುತ್ತದೆ. ಬಹಳಷ್ಟು ಕಾಲದ ವರೆಗೂ, "ಸಾಗರ" ಎಂಬುದಕ್ಕಿರುವ ಇಬ್ರಿಯ ಪದವು (תְּהוֹם, *ಥೆಹೊಮ*) ಅಕ್ಕಾಡ್ ಭಾಷೆಯ *ತಿಯಮತ* ಎಂಬುದರಿಂದ ಬಂದಿರುತ್ತದೆ, ಇದು ಪ್ರಾಚೀನ ಬಾಬೆಲಿನವರ "ಸಾಗರ" ದೇವತೆಯಾಗಿರುತ್ತದೆ. ಪುರಾಣದ ಪ್ರಕಾರ, ಅಸ್ತವ್ಯಸ್ತತೆಯೊಳಗಿಂದ ಕ್ರಮವು ಬರಬೇಕಾದರೆ ಮೊದಲು ತಿಮತನು ಮರ್ದುಕನಿಂದ (ಎಲ್ಲಾ ದೇವರುಗಳ ಮೇಲೆ ಅರಸನಾಗಬೇಕೆಂದು ಆಕಾಂಕ್ಷಿಸುತ್ತಿದ್ದ ಒಬ್ಬ ಕಿರಿಯವನಾದ ದೇವರು) ಕೊಲ್ಲಲ್ಪಡಬೇಕಿತ್ತು.[4] ಹೇಗೂ, ಬಹಳ ಇತ್ತೀಚಿನ ಸಮಯಗಳಲ್ಲಿ, ಈ ಪ್ರಮೇಯದ ವಿರುದ್ಧ ಬಲವಾದ ವಾದಗಳು ಉಂಟಾಗಿರುತ್ತವೆ, ಆದ್ದರಿಂದ "ಭಾಷೆಗೆ ಸಂಬಂಧಪಟ್ಟಂತೆ *ತೆಹೊಮ* ಎಂಬುದನ್ನು ತಮತ ಎಂಬುದರಿಂದ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂಬುನ್ನು ಒಪ್ಪಿಕೊಳ್ಳಲಾಗಿರುತ್ತದೆ,"[5] ಮತ್ತು ಆದಿಕಾಂಡದ ಲೇಖಕನು ತನ್ನ ಪರಿಭಾಷೆಗಾಗಿ ಈ ಬಾಬೆಲಿನ ಪುರಾಣದ ಮೇಲೆ ಅವಲಂಭಿತನಾಗಿರಲಿಲ್ಲ. ವಾಸ್ತವಿಕದಲ್ಲಿ, ಬೈಬಲಿನಲ್ಲಿ *ಥೆಹೊಮ* ಎಂಬುದನ್ನು ಮೂರ್ತೀಕರಣಗೊಳಿಸಿಕೆಯು ಇರುವದಿಲ್ಲ, ಮತ್ತು ದೇವರು ಬೆಳಕು, ಜೀವ, ಮತ್ತು ಒಂದು ಸುಂದರವಾದ ಜಗತ್ತನ್ನು ಉಂಟು ಮಾಡುವದಕ್ಕೆ ಮುಂಚೆ ಸೋಲಿಸಲ್ಪಡಬೇಕಾಗಿದ್ದ ಒಂದು ಪ್ರಬಲವಾದ ಶಕ್ತಿ ಎಂಬುದಾಗಿ ಅದು ಎಂದಿಗೂ ಕಾಣಲ್ಪಟ್ಟಿರುವದಿಲ್ಲ. ಅದಕ್ಕೆ ತದ್ವಿರುದ್ಧದವಾದದ್ದೇ ಸತ್ಯವಾಗಿರುತ್ತದೆ. ಈ ಪದವು ಆಕಾರವಿಲ್ಲದ ಭೂಮಿಯ ಮೇಲಿದ್ದ ಆಳವಾದ, ಕತ್ತಲೆಯಿಂದ ತುಂಬಿದ ಸಾಗರವನ್ನು ಸೂಚಿಸುತ್ತದಷ್ಟೆ. ಇವುಗಳನ್ನು ಬೇರ್ಪಡಿಸಬೇಕು ಮತ್ತು ದೇವರು ಪಕ್ಷಿಗಳನ್ನು, ಭೂಮಿಯ ಮೇಲಿನ ಪ್ರಾಣಿಗಳನ್ನು, ಮತ್ತು ಮನುಷ್ಯನನ್ನು ಜಲಚರಗಳಿಂದ ಬೇರ್ಪಡಿಸುವ ಮೂಲಕ ತನ್ನ ಸೃಷ್ಟಿಯ ಕ್ರಿಯೆಯನ್ನು ಮುಂದುವರೆಸಿದಂತೆ ಇವುಗಳನ್ನು ಮೇರೆಗಳೊಳಗೆ ಇಡತಕ್ಕದ್ದು.

ವಾಕ್ಯಭಾಗವು **ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು** ಎಂದು ಸಹ ಹೇಳುತ್ತದೆ. רוּחַ *(ರೂವಾಚ್)* ಎಂಬ ಇಬ್ರಿಯ ಪದದ ಅರ್ಥವು *'ಎಲೋಹಿಮ್* (ದೇವರು) ಎಂಬುದರೊದಿಗೆ ಸಮ್ಮಿಲನಗೊಳಿಸಿದಾಗ "ಗಾಳಿ" ಅಥವಾ "ಆತ್ಮ" ಎರಡರಲ್ಲೊಂದು ಆಗಿರಬಲ್ಲದು. ಅದನ್ನು "ದೇವರಿಂದ ಬಂದ ಗಾಳಿ" (NRSV) ಎಂದಾಗಲಿ ಅಥವಾ "ಒಂದು

ಬಲವಾದ ಗಾಳಿ" (NAB) ಎಂದಾಗಲಿ ಅನುವಾದಿಸಬಹುದು. ಹೇಗೂ, ಈ ಅನುವಾದಗಳು ಅತ್ಯಂಥ ಅಸಂಭವನೀಯವಾಗಿ ಕಾಣಿಸುತ್ತವೆ ಯಾಕೆಂದರೆ ಹಳೆಯ ಒಡಂಬಡಿಕೆಯೊಳಗೆ ಈ ಪದಗುಚ್ಛವು ಕಾಣಿಸಿಕೊಳ್ಳುವ ಇತರ ಹದಿನೈದು ವಾಕ್ಯಭಾಗಗಳಲ್ಲಿ, ಒಂದಾದರೂ "ಒಂದು ಬಲವಾದ ಗಾಳಿ" ಎಂಬಂತಹ ಅರ್ಥವನ್ನು ಕೊಡುವದೇ ಇಲ್ಲ.

*'ಎಲೋಹಿಮ್* ಎಂಬುದನ್ನು ಆದಿಕಾಂಡ 23:6ರಲ್ಲಿ ಒಂದು ನಾಮಪದಕ್ಕಿಂತಲೂ ಒಂದು ಗುಣವಾಚಕವಾಗಿ ಬಳಸಬಹುದಾಗಿದೆ, ಅಲ್ಲಿ ಅಬ್ರಹಾಮನು "ಮಹಾಪ್ರಭು" (ಅಥವಾ "ದೇವರ ಪ್ರಭು"; ASV) ಎಂದು ಕರೆಯಲ್ಪಟ್ಟಿದ್ದಾನೆ, ಈ ಪದದ ಅಂತಹ ಒಂದು ಅರ್ಥಮಾಡಿಕೊಳ್ಳುವಿಕೆಯು ಆದಿಕಾಂಡ 1ನೇ ಅಧ್ಯಾಯದ ಸನ್ನಿವೇಶಕ್ಕೆ ಸರಿಹೊಂದುವದಿಲ್ಲ. ಮೂಲ ಇಬ್ರಿಯ ವಾಕ್ಯದ ಅನುವಾದಕನು 1:2ರಲ್ಲಿ *'ಎಲೋಹಿಮ್* ಮತ್ತು ಎಲ್ಲವೂ "ದೇವರು" ಎಂದು ಅರ್ಥಕೊಡುವಂತಹ, ಈ ಅಧ್ಯಾಯದಲ್ಲಿ ಕಾಣಿಸಿಕೊಳ್ಳುವ ಇನ್ನೂ ಮೂವತ್ತೊಂದು ಘಟನೆಗಳಲ್ಲಿ ವ್ಯತ್ಯಾಸವನ್ನು ಮಾಡುವನೆಂದು ಹೇಗೆ ನಿರೀಕ್ಷಿಸಲು ಸಾಧ್ಯ?

ರೂವಾಚ್ ಎಲ್ಲಿ ದೇವರ ಪ್ರಸನ್ನತೆಯು ಬಲವಾಗಿ ತೋರಿ ಬರುವಿಕೆಯಾದ ಒಂದು "ಗಾಳಿ" ಎಂಬ ಅರ್ಥ ಬರುವಂತೆ ಬಳಸಲ್ಪಟ್ಟಿರುತ್ತದೋ ಅಲ್ಲಿ ಅದು ಒಂದು ವಿನಾಶಕರ ಶಕ್ತಿಯನ್ನು ವ್ಯಕ್ತಪಡಿಸುತ್ತದೆ. ಉದಾಹರಣೆಗೆ, ವಿಮೋಚನಕಾಂಡ 15:10 ದೇವರ ಬಗ್ಗೆ ಹೀಗೆ ಹೇಳುತ್ತದೆ, "ಆದರೆ ನೀನು ಉಸುರುಗಾಳಿಯಿಂದ ಊದಲು ಸಮುದ್ರವು ಅವರನ್ನು ಮುಚ್ಚಿತು, ಅವರು [ಫರೋಹನ ಸೈನ್ಯ] ಮಹಾಸಾಗರದೊಳಗೆ ಸೀಸದ ಗುಂಡಿನಂತೆ ಮುಳುಗಿಹೋದರು" (ನೋಡಿರಿ ಯೆಶಾಯ 11:15; 40:7; ಹೋಶೇಯ 13:15). ಆದಿಕಾಂಡ 1ರ ಸನ್ನಿವೇಶವು ರೂವಾಚ್ *'ಎಲೋಹಿಮ್* ಎಂಬುದನ್ನು ಆ ರೀತಿಯಲ್ಲಿ ಬಳಸುವದನ್ನು ನಿಷೇಧಿಸುತ್ತದೆ. ಒಂದು ವಿನಾಶಕರ ಶಕ್ತಿಯಾಗಿ ಬಳಸಲ್ಪಡುವದರ ಬದಲಾಗಿ, ರೂವಾಚ್ *'ಎಲೋಹಿಮ್* ಎಂಬುದು ರಚನಾತ್ಮಕ ಶಕ್ತಿಯ ಭಾಗವಾಗಿ, ಆದಿಕಾಂಡದಲ್ಲಿ ಆರಂಭವಾಗುವ ಸೃಷ್ಟಿಯ ಪ್ರಕ್ರಿಯೆಯ ಭಾಗವಾಗಿರುವದಾಗಿ ಕಾಣಿಸುತ್ತದೆ.

ವಾಕ್ಯಭಾಗವು ದೇವರಾತ್ಮನನ್ನು ಭೂಮಿಯ ಜಲಸಮೂಹಗಳ ಮೇಲೆ "ಚಲಿಸುತ್ತಿದ್ದನು" (מְרַחֶפֶת, *ಮೆರಾಚೆಪೆಥ್)* ಎಂದು ಕರೆಯುವಾಗ, ಕ್ರಿಯಾಪದದ ಅರ್ಥವು ಜಲಸಮೂಹಗಳ ಮೇಲೆ ಆತ್ಮನು "ಹಾರಾಡುತ್ತಿದ್ದನು" (NIV; ESV) ಎಂದಾಗಿರಬಲ್ಲದು. ಈ ಅರ್ಥನಿರೂಪಣೆಗೆ ಕಾರಣವು ಏನೆಂದರೆ ಇನ್ನೊಂದು ವಾಕ್ಯಭಾಗವು ಯೆಹೋವನನ್ನು ಮರಿಗಳನ್ನು ಗೂಡಿನೊಳಗಿಂದ ಹೊರಡಿಸಿ ಅವುಗಳ ಬಳಿಯಲ್ಲಿ ಹಾರಾಡು[ತ್ತಿರುವಂತೆ] (יְרַחֵף, *ರಾಚೊಪ*) ಎಂದು ಹೋಲಿಕೆ ಮಾಡುತ್ತದೆ (ಧರ್ಮೋಪದೇಶಕಾಂಡ 32:11). ಆದಿಕಾಂಡ 1ರಲ್ಲಿನ ಹೇಳಿಕೆಯ ಅರ್ಥವು ಇದೇ ಆಗಿರುವದಾದರೆ, ಆಧಿಸಾಗರದಲ್ಲಿನ ಈ ಅಸಂಘಟಿತವೆಂಬಂತೆ ಕಾಣಿಸುವ ಪರಿಸ್ಥಿತಿಯ ಹೊರತಾಗಿಯೂ, ರಕ್ಷಣಾತ್ಮಕವಾಗಿರುವ ದೇವರಾತ್ಮನು ಎಲ್ಲವನ್ನೂ ನಿಯಂತ್ರಣದಲ್ಲಿಟ್ಟುಕೊಂಡಿದ್ದನು ಎಂಬುದನ್ನು ವಚನವು ಒತ್ತಿ ಹೇಳುತ್ತದೆ. ದೇವರು ಯಾವದೇ ಕ್ಷಣದಲ್ಲಿ ಮಾತಾಡುವದಕ್ಕಾರಂಭಿಸಿ ಕ್ರಮವನ್ನು, ಜೀವ, ಮತ್ತು ಸೌಂದರ್ಯಗಳನ್ನು ತನ್ನ ಸೃಷ್ಟಿಯ ಈ ಪ್ರಥಮ ಹಂತದಿಂದ ಉಂಟು ಮಾಡಲಿದ್ದನು.

## ದಿನ 1: ಬೆಳಕು ಸೃಷ್ಟಿಸಲ್ಪಟ್ಟಿತು ಮತ್ತು ಕತ್ತಲೆಯಿಂದ ಬೇರ್ಪಡಿಸಲ್ಪಟ್ಟಿತು (1:3-5)

**3ಆಗ ದೇವರು - ಬೆಳಕಾಗಲಿ ಅನ್ನಲು ಬೆಳಕಾಯಿತು. 4ದೇವರು ಆ ಬೆಳಕನ್ನು ಒಳ್ಳೇದೆಂದು ನೋಡಿದನು. ದೇವರು ಬೆಳಕನ್ನೂ ಕತ್ತಲೆಯನ್ನೂ ಬೇರೆ ಬೇರೆ ಮಾಡಿ ಬೆಳಕಿಗೆ ಹಗಲೆಂದೂ**

**ಕತ್ತಲೆಗೆ ಇರುಳೆಂದೂ ಹೆಸರಿಟ್ಟನು. [5]ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಮೊದಲನೆಯ ದಿನವಾಯಿತು.**

**ವಚನ 3.** ಸೃಷ್ಟಿಯ ಕ್ರಮವಾದ ಪ್ರಕ್ರಿಯೆಯು ಆರಂಭಗೊಂಡ ಹಾಗೆ, ಅದು ದೇವರ ಮೌಖಿಕ ಮಾತಿನಿಂದ ಸಂಭವಿಸಿತು. **ದೇವರು ಅಂದನು** ಎಂಬ ಹೇಳಿಕೆಯು ಒಂದು ಧಾಟಿಯನ್ನು ಆರಂಭಿಸಿ ಕೊಡುತ್ತದೆ ಮತ್ತು ಲೇಖಕನು ಅಧ್ಯಾಯದ ಉಳಿದ ಭಾಗದಲ್ಲಿ ಮತ್ತು ಶಾಸ್ತ್ರಗಳ ಮಿಕ್ಕ ಭಾಗದಲ್ಲೆಲ್ಲಾ ಅನುಸರಿಸಿಕೊಂಡು ಹೋಗುವಂತಹ ಒಂದು ನಮೂನೆಯನ್ನು ಸ್ಥಾಪಿಸುತ್ತದೆ. ಅದಕ್ಕೊಂದು ದೃಷ್ಟಾಂತವೆಂದರೆ, ಕೀರ್ತನೆಗಾರನು ಹೀಗೆ ಹೇಳಿದನು, "ಯೆಹೋವನ *ಅಪ್ಪಣೆ*ಯಿಂದಲೇ ಆಕಾಶವು ಉಂಟಾಯಿತು; ಅದರಲ್ಲಿರುವದೆಲ್ಲವೂ ಆತನ *ಶ್ವಾಸ*ದಿಂದ ನಿರ್ಮಿತವಾಯಿತು ... ಆತನು ನುಡಿದ ಮಾತ್ರಕ್ಕೆ ಸಮಸ್ತವೂ ಉಂಟಾಯಿತು; ಆತನು ಆಜ್ಞಾಪಿಸುತ್ತಲೇ ಸರ್ವವೂ ಸ್ಥಾಪನೆಯಾಯಿತು" (ಕೀರ್ತನೆ 33:6, 9; ಒತ್ತಿ ಹೇಳಿದ್ದು ನನ್ನದು). ಆ ವಾಕ್ಯಭಾಗದೊಳಗೆ "ಅಪ್ಪಣೆ" ಮತ್ತು "ಶ್ವಾಸ" (*ರೂವಾಚ್*, "ಆತ್ಮ") ಎಂಬುವುಗಳ ನಡುವೆ ಒಂದು ಸಮಾನಾರ್ಥಕತೆಯು ಇರುತ್ತದೆ. ದೇವರು ನುಡಿದಾಗ, ಆತನು ನುಡಿದದ್ದು ಸಂಭವಿಸುವಂತೆ ಆತನು ತನ್ನ ಆತ್ಮನ ಸೃಷ್ಟಿಸುವ ಶಕ್ತಿಯನ್ನು ಬಿಡುಗಡೆಗೊಳಿಸಿದನು.

ಮೊಟ್ಟ ಮೊದಲ ಬಾರಿಗೆ ಬರೆಯಲ್ಪಟ್ಟಿರುವಂಥ ಸೃಷ್ಟಿಕರ್ತನ ನುಡಿಯು ಒಂದು ಆಜ್ಞೆಯಾಗಿತ್ತು: **ಬೆಳಕಾಗಲಿ ಅನ್ನಲು ಬೆಳಕಾಯಿತು.** ಹಾಗಾದರೆ ವಿಶ್ವಕ್ಕೆ ಕ್ರಮವನ್ನು ಮತ್ತು ಸೌಂದರ್ಯವನ್ನು ಉಂಟು ಮಾಡುವದರಲ್ಲಿನ ಆರಂಭಿಕ ಕೆಲಸವೆಂದರೆ ಬೆಳಕನ್ನು ಸೃಷ್ಟಿಸುವದಾಗಿತ್ತು. ಇದು ಸ್ವಭಾವಿಕ ಅಥವಾ ಶಾರೀರಿಕ ಬೆಳಕಾಗಿತ್ತು ಯಾಕೆಂದರೆ, ಅದು ಇಲ್ಲದಿದ್ದಲ್ಲಿ, ಎಲ್ಲವೂ ಒಂದು ಕತ್ತಲೆ ಮತ್ತು ಅಸ್ತವ್ಯಸ್ತತೆಯ ಶಾರೀರಿಕ ಮಂಡಲದಿಂದ ತುಂಬಿತ್ತು. ದೇವರು ಸೂರ್ಯನನ್ನು ಉಂಟು ಮಾಡುವದಕ್ಕೆ ಮೂರು ದಿನಗಳ ಮುಂಚೆ ಬೆಳಕನ್ನು ಉಂಟು ಮಾಡಿದನೆಂಬುದು ವಾಚಕನಲ್ಲಿ ಕಳವಳವನ್ನುಂಟು ಮಾಡಕೂಡದು ಯಾಕೆಂದರೆ ಆ ದಿನದಲ್ಲಿ ಸೂರ್ಯನಿಂದಲ್ಲದೆ ಬೇರೆ ಮೂಲದಿಂದ ದೇವರು ಬೆಳಕನ್ನು ಪ್ರಕಾಶಿಸುವಂತೆ ಮಾಡಿದನೆಂಬುದಾಗಿ ಲೇಖಕನು ದೃಡೀಕರಿಸುತ್ತಿದ್ದಾನೆ. ಬೈಬಲಿನಲ್ಲಿ ಬೆಳಕು ಮತ್ತು ಕತ್ತಲುಗಳನ್ನು ಪರಸ್ಪರ ಹೊರತಾದವುಗಳೆಂಬುದಾಗಿ ಸೂಚಿಸುವಂತೆ ಕೆಲವು ಸಾರಿ ಬಳಸಲ್ಪಟ್ಟಿರುತ್ತವೆ; ಉದಾಹರಣೆಗೆ, ಐಗುಪ್ತದ ದೇಶದಲ್ಲೆಲ್ಲಾ ಮೂರು ದಿನಗಳ ಕತ್ತಲೆಯು ಆವರಿಸಿಕೊಂಡಿತ್ತು, ಐಗುಪ್ತ್ಯರ ಮನೆಗಳಲ್ಲಿ ಸಹ ಇತ್ತು; ಆದರೆ ಇಸ್ರಾಯೇಲ್ಯರಿಗೆ ಬೆಳಕು ಇತ್ತು (ವಿಮೋಚನಕಾಂಡ 10:21-23). ಅಲ್ಲದೆ, ಅರಣ್ಯದಲ್ಲಿ, ಇಸ್ರಾಯೇಲ್ಯರ ಬಿಡಾರದ ಸುತ್ತಲು ಕತ್ತಲು ಆವರಿಸಿಕೊಂಡಿತ್ತು; ಆದರೆ ದೇವದರ್ಶನ ಗುಡಾರದ ಮೇಲೆ ಅಗ್ನಿಸ್ತಂಭವು ಇತ್ತು, ಅದು ದೇವರ ಜನರಿಗೆ ಬೆಳಕನ್ನು ನೀಡುತ್ತಿತ್ತು (ಅರಣ್ಯಕಾಂಡ 9:15-18; ವಿಮೋಚನಕಾಂಡ 13:20-22).

ಒಂದು ಆತ್ಮೀಕ ಅರ್ಥದಲ್ಲಿ, ಬೆಳಕು ಕತ್ತಲೆಯಿಂದ ಭಿನ್ನತೆಯನ್ನು ಹೊಂದಿರುವಿಕೆಯು ಒಳ್ಳೇದನ್ನು ಕೆಟ್ಟದ್ದಕ್ಕೆ ವಿರುದ್ಧ ಹೋಲಿಕೆ ಮಾಡುವದರಲ್ಲಿ ವಿಶೇಷವಾಗಿ ಸ್ಪಷ್ಟಗೊಳ್ಳುತ್ತದೆ. ಬೆಳಕು ಅನೇಕ ಸಾರಿ ರೂಪಕೋಕ್ತಿಯ ಅರ್ಥದಲ್ಲಿ ಬಳಸಲ್ಪಡುವದಾಗಿದ್ದು ನೀತಿ ಮತ್ತು ಜೀವದ ಮಂಡಲವನ್ನು ಪ್ರತಿನಿಧಿಸುತ್ತದೆ (ಕೀರ್ತನೆ 37:6; 56:13), ಜ್ಞಾನ ಮತ್ತು ದೇವರ ಕಟ್ಟಳೆಗಳನ್ನು (ಯೋಬನು 12:22; 24:13), ಮತ್ತು ರಕ್ಷಣೆ ಹಾಗೂ ದೇವರ ಪ್ರಸನ್ನತೆಯನ್ನು ಪ್ರತಿನಿಧಿಸುತ್ತದೆ (ಅರಣ್ಯಕಾಂಡ 9:15, 16; ಕೀರ್ತನೆ 27:1; ಯೆಶಾಯ 9:2). ಇನ್ನೊಂದು ಕಡೆಯಲ್ಲಿ, ಕತ್ತಲು ಪಾಪಕ್ಕೆ ಮತ್ತು ದುಷ್ಟತ್ವಕ್ಕೆ (ಯೋಬನು 5:14; ಜ್ಞಾನೋಕ್ತಿ 2:13; ಪ್ರಸಂಗಿ 2:14), ಮೂಢನಂಬಿಕೆ ಮತ್ತು ವಿಗ್ರಹಾರಾಧನೆ (ಯೆಶಾಯ 9:2; ಯೆಹೆಜ್ಕೇಲ 8:12), ಮತ್ತು

ನ್ಯಾಯತೀರ್ಪು ಹಾಗೂ ಮರಣಗಳನ್ನು ಸಂಕೇತಿಸುತ್ತದೆ (ಕೀರ್ತನೆ 105:28; ಯೆಹೆಜ್ಕೇಲ 30:18; ಯೋವೇಲ 2:2).

**ವಚನ 4. ಬೆಳಕನ್ನು** ಉಂಟು ಮಾಡಿದ ಮೇಲೆ, ಪರಿಣಿತ ಚಿತ್ರಕಲಾಕಾರನಾಗಿ, ದೇವರು ಸ್ವಲ್ಪ ಹಿಂದೆ ಸರಿದು ತನ್ನ ಕೆಲಸವನ್ನು ಮೆಚ್ಚಿಕೊಳ್ಳುವವನಾದನು ಮತ್ತು ಬೆಳಕು ಎಷ್ಟು ಸುಂದರವಾದದ್ದೆಂದು **ನೋಡಿದನು**. ಆದದರಿಂದ ಆತನು **ಬೆಳಕನ್ನೂ ಕತ್ತಲೆಯನ್ನೂ ಬೇರೆ ಬೇರೆ ಮಾಡಿದನು** ಮತ್ತು ಅದನ್ನು **ಒಳ್ಳೇದೆಂದು** ಘೋಷಿಸಿದನು. "ಒಳ್ಳೇದು" (*ಟೊಬ*) ಎಂದು ಹೇಳುವ ಮೂಲಕ, ಬೆಳಕು ನೈತಿಕವಾಗಿ ಒಳ್ಳೇದಾಗಿತ್ತೆಂಬುದು ದೇವರ ತಾತ್ಪರ್ಯವಾಗಿರಲಿಲ್ಲ; ಬದಲಾಗಿ, ಆತನು ಯಾವ ಉದ್ದೇಶಕ್ಕಾಗಿ ಅದನ್ನು ಉಂಟು ಮಾಡಿದನೋ, ಅಂದರೆ ಜೀವವು ಪೋಷಿಸಲ್ಪಡಬಹುದಾದ ಒಂದು ವಾತಾವರಣವನ್ನು ಸಾಧ್ಯತೆಗೊಳಿಸುವದಕ್ಕೆ ಚೈತನ್ಯವನ್ನು ಒದಗಿಸುವದು ಮತ್ತು ಆತನ ಸೃಷ್ಟಿಯ ಸೌಂದರ್ಯವನ್ನು ಪ್ರಕಟಗೊಳಿಸುವ ಕೆಲಸವನ್ನು ಮಾಡುವದಕ್ಕೆ ಸಮರ್ಥವಾಗಿತ್ತು ಮತ್ತು ಸರಿಹೊಂದುವಂಥದ್ದಾಗಿತ್ತು. ದೇವರು "ಬೆಳಕನ್ನೂ ಕತ್ತಲೆಯನ್ನೂ ಬೇರೆ ಬೇರೆ ಮಾಡಿ"ದಾಗ, ಆತನು ಕತ್ತಲೆಯನ್ನು ನಾಶಗೊಳಿಸಲಿಲ್ಲ ಅಥವಾ ಈಗಾಗಲೇ ಇದ್ದಂಥ ಕತ್ತಲೆಯನ್ನು ರದ್ದುಗೊಳಿಸಲಿಲ್ಲ. ಬದಲಾಗಿ, ಆತನು ಅವುಗಳನ್ನು ಬೇರೆ ಬೇರೆ ಮಾಡಿದನು, ಅವುಗಳನ್ನು ಭಿನ್ನವಾಗಿಡುವದರ ಸಲುವಾಗಿ ಹಾಗೆ ಮಾಡಿದನು. ಕಾಲದ ಹಂತದಲ್ಲಿ ಪ್ರತಿಯೊಂದಕ್ಕೂ ತನ್ನದೆ ಆದ ವ್ಯಾಪ್ತಿಯು ಇರುವದು, ಒಂದು ಸ್ವಲ್ಪ ಕಾಲದ ತನಕ ಕ್ರಿಯೆ ಮಾಡುವದು ಮತ್ತು ಬಳಿಕ ಇನ್ನೊಂದು ತನ್ನ ಕೆಲಸವನ್ನು ಆರಂಭಿಸುವದು.

**ಬೆಳಕಿಗೆ ಹಗಲೆಂದೂ ಕತ್ತಲೆಗೆ ಇರುಳೆಂದೂ ಹೆಸರಿಟ್ಟನು**. ಆದಿಕಾಂಡದ 1ನೇ ಅಧ್ಯಾಯದುದ್ದಕ್ಕೂ, ಸೃಷ್ಟಿಕರ್ತನು ತಾನು ಉಂಟು ಮಾಡಿದ ಹಲವಾರು ಸಂಗತಿಗಳಿಗೆ ಹೆಸರಿಟ್ಟನು ಎಂಬುದನ್ನು ಲೇಖಕನು ಒತ್ತಿ ಹೇಳುತ್ತಾನೆ. ಆತನು ಬೆಳಕಿಗೆ "ಹಗಲು" ಎಂದು ಮತ್ತು ಕತ್ತಲೆಗೆ "ಇರುಳು" ಎಂದು ಹೆಸರಿಟ್ಟನು (1:4). ದೇವರು ಗುಮಟಕ್ಕೆ "ಆಕಾಶ" ಎಂದು ಹೆಸರಿಟ್ಟನು (1:8), ಒಣನೆಲಕ್ಕೆ "ಭೂಮಿ" ಎಂದು ಮತ್ತು ಜಲಸಮೂಹಕ್ಕೆ "ಸಮುದ್ರ" ಎಂದು ಹೆಸರಿಟ್ಟನು (1:10). ಅದರ ಜೊತೆಗೆ, ಪುರುಷ ಮತ್ತು ಸ್ತ್ರೀಯರನ್ನು "ಮನುಷ್ಯ" (אָדָם, *'ಆದಾಮ*) ಅಥವಾ "ಮನುಷ್ಯರು" ಎಂದು ಕರೆದನು (1:27ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ; 5:1, 2). ಹಳೆಯ ಒಡಂಬಡಿಕೆಯಲ್ಲಿ, ಒಂದು ಸಂಗತಿಗೆ ಹೆಸರನ್ನಿಡುವದೆಂದರೆ ಅದರ ಮೇಲೆ ಧೊರೆತನವನ್ನು ತೋರುವದು ಎಂದಾಗಿತ್ತು (ನೋಡಿರಿ 2:20, 23; 3:20; 4:25; 2 ಅರಸು 23:34; 24:17). ಈ ವಿಧದಲ್ಲಿ, ದೇವರು ಹೆಸರಿಡಲ್ಪಟ್ಟ ಈ ಸೃಷ್ಟಿಗಳು ತನ್ನ ಯೋಜನೆಯಲ್ಲಿ ವಹಿಸಿಕೊಳ್ಳಬೇಕಾದ ಸಮರ್ಪಕವಾದ ಪಾತ್ರಗಳೇನೆಂಬುದನ್ನು ತೋರಿಸಿದನು.

**ವಚನ 5. ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಮೊದಲನೆಯ ದಿನವಾಯಿತು.** ಸೃಷ್ಟಿಯ ಪ್ರತಿಯೊಂದು ದಿನದ ಮುಕ್ತಾಯದ ವೇಳೆ, ಲೇಖಕನು ಪರಿಚ್ಛೇದವನ್ನು ಒಂದೇ ವಿಧವಾದ ಮಾತಿನೊಂದಿಗೆ ಅಂತ್ಯಗೊಳಿಸುತ್ತಾನೆ, ಅದೇ ವೇಳೆ ಹೊಸ ದಿನಗಳಿಗೆ ಕ್ರಮಾನುಗತಿಯಲ್ಲಿ ಸಮರ್ಪಕವಾದ ಸಂಖ್ಯೆಯನ್ನು ಕೊಡುತ್ತಾನೆ (1:8, 13, 19, 23, 31). ಇಬ್ರಿಯರ ಮನಸ್ಸಿಗಾದರೋ, ದಿನವು ಕತ್ತಲೆಯಿಂದ ಆರಂಭಗೊಳ್ಳುತ್ತದೆ (ನೋಡಿರಿ 1:2), ಅದರ ಬಳಿಕ ಬೆಳಕು ಸೃಷ್ಟಿಸಲ್ಪಡುತ್ತದೆ; ಮತ್ತು ಅದು ರಾತ್ರಿಯ ಬರುವ ತನಕವೂ ಮುಂದುವರೆಯುವದು, ಅದು ಮರುದಿನದ ಆರಂಭವಾಗಿರುತ್ತದೆ.

## ದಿನ 2: ಜಲಸಮೂಹವು ಗುಮಟದಿಂದ ಬೇರ್ಪಡಿಸಲ್ಪಟ್ಟಿದ್ದು (1:6-8)

**6ಬಳಿಕ ದೇವರು - ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು ಉಂಟಾಗಲಿ; ಅದು ಕೆಳಗಣ ನೀರುಗಳನ್ನೂ ಮೇಲಣ ನೀರುಗಳನ್ನೂ ಬೇರೆ ಬೇರೆ ಮಾಡಲಿ ಅಂದನು. 7ದೇವರು ವಿಸ್ತಾರವಾದ ಗುಮಟವನ್ನು ಮಾಡಿ ಅದರ ಕೆಳಗಿದ್ದ ನೀರುಗಳನ್ನು ಅದರ ಮೇಲಿದ್ದ ನೀರುಗಳಿಂದ ವಿಂಗಡಿಸಿದನು; ಹಾಗೆಯೇ ಆಯಿತು. 8ದೇವರು ಆ ಗುಮಟಕ್ಕೆ ಆಕಾಶವೆಂದು ಹೆಸರಿಟ್ಟನು. ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಎರಡನೆಯ ದಿನವಾಯಿತು.**

**ವಚನಗಳು 6-8.** ದೇವರು ಪುನಃ ಮಾತಾಡಿದಾಗ, ಅದರ ಫಲಿತವಾಗಿ **ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು ಉಂಟಾಯಿತು; ಅದು ಕೆಳಗಣ ನೀರುಗಳನ್ನೂ ಮೇಲಣ ನೀರುಗಳನ್ನೂ ಬೇರೆ ಬೇರೆ** ಮಾಡಿತ್ತು. ಇಬ್ರಿಯ ಭಾಷೆಯಲ್ಲಿ "ಗುಮಟ" ಎಂಬುದನ್ನು ಅನುವಾದಿಸಿರುವ ಪದವು רָקִיעַ *(ರಾಕಿಯಾ')*, ಮತ್ತು ಅದರ ಮೂಲಭೂತ ಅರ್ಥವು "ವಿಸ್ತರಿಸಲ್ಪಟ್ಟ" ಅಥವಾ "ಹೊಡೆದು ಚಪ್ಪಟೆಗೊಳಿಸಿರುವ" (ಉದಾಹರಣೆಗೆ ಲೋಹದ ತಟ್ಟೆಗಳಂತೆ) ಸಂಗತಿಗೆ ಸಂಬಂಧಿಸಿದ್ದಾಗಿದೆ. ಕೆಲವು ವಾಕ್ಯಭಾಗಗಳು ಅದಕ್ಕೆ ಸಂಬಂಧಪಟ್ಟ רָקַע *(ರಾಕಾ')* ಎಂಬ ಪದವನ್ನು ಗಟ್ಟಿಯಾದ ಲೋಹವನ್ನು ತಟ್ಟುವದು ಎಂಬ ಅರ್ಥದಲ್ಲಿ ಬಳಸಲ್ಪಟ್ಟಿರುತ್ತದೆ (ವಿಮೋಚನಕಾಂಡ 39:3; ಅರಣ್ಯಕಾಂಡ 16:39 [17:4]; ಯೆಶಾಯ 40:19; ಯೆರೆಮೀಯ 10:9; ನೋಡಿರಿ ಯೋಬನು 37:18). ಇದು ಕೆಲವು ಪಂಡಿತರನ್ನು *ರಾಕಿಯಾ* ಎಂಬುದನ್ನು "ಆಕಾಶಗುಮ್ಮಟ ಅಥವಾ 'ಗಗನಮಂಡಲ,' ಇಬ್ರಿಯರು ಅದನ್ನು ಗಟ್ಟಿಯಾದ, ಮತ್ತು ಅದರ ಮೇಲಿನ ಜಲಸಮೂಹಕ್ಕೆ ಆಧಾರವಾಗಿರುವದು ಎಂದು ಪರಿಗಣಿಸಲ್ಪಟ್ಟಿದ್ದು"[6] ಎಂಬದಾಗಿ ವ್ಯಾಖ್ಯಾನಿಸುವಂತೆ ನಡಿಸಿರುತ್ತದೆ (ನೋಡಿರಿ KJV).

ಹೇಗೂ, ಆದಿಕಾಂಡದ ಲೇಖಕನು *ರಾಕಿಯಾ* ಎಂಬುದನ್ನು ಗಟ್ಟಿಯಾದ ಕಮಾನು ಅಥವಾ ಗುಮ್ಮಟವೆಂದು ಅರ್ಥಮಾಡಿಕೊಳ್ಳಲಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ ಯಾಕೆಂದರೆ ಆತನು **ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು** (שָׁמָיִם, *ಶಮಾಯಿಮ್)* ಅಥವಾ "ಆಕಾಶ" (NIV) **ಉಂಟಾಗಲಿ** ಎಂದು ಹೇಳಿದನೆಂಬುದನ್ನು ದೃಢೀಕರಿಸುತ್ತಾನೆ. ಆತನು ಇನ್ನು ಮುಂದುವರೆದು ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳು ಅದರಲ್ಲಿಡಲ್ಪಟ್ಟವು ಎಂದು ಹೇಳಿದನು (1:14–17), ಮತ್ತು ಆತನು ಅದನ್ನು ಪಕ್ಷಿಗಳು ಹಾರಾಡುವಂತ "ಬಾನಂಗಳದ ವಿಸ್ತಾರ" ಎಂದು ಕರೆದನು (1:20), ಅಂದರೆ ಅಂತರಿಕ್ಷ.[7] ಆತನು ಖಂಡಿತವಾಗಿಯೂ ಅದನ್ನು ಲೋಹ ಅಥವಾ ಗಾಜಿನಂತಹ ವಸ್ತುವಿನಿಂದ ರೂಪಿಸಲ್ಪಟ್ಟ ಒಂದು ಗಟ್ಟಿಯಾದ ಗುಮ್ಮಟವೆಂದು ಅರ್ಥಮಾಡಿಕೊಳ್ಳಲಿಲ್ಲ. ಬದಲಾಗಿ, ಆತನು ವಿಸ್ತಾರವನ್ನು ಕುರಿತು ದೃಶ್ಯತ್ವಸಿದ್ಧಾಂತದಂತೆ ವಿವರಿಸಿದನು. ಮನುಷ್ಯನು ಆಕಾಶದಲ್ಲಿರುವ ಸೂರ್ಯ ಮತ್ತು ನಕ್ಷತ್ರಗಳನ್ನು ಕಾಣುತ್ತಾನೆ, ಆದರೆ ಅದೇ ವೇಳೆಯಲ್ಲಿ, ಪಕ್ಷಿಗಳು ಸುಲಭವಾಗಿ ಆಕಾಶಗಳ ಮೂಲಕ ಹಾಯ್ದು ಹಾರಾಡುತ್ತವೆ. ಈ ವಚನಗಳಲ್ಲಿ, ವಿಸ್ತಾರವು ಕೇವಲ ಮೇಲಿನ (ಮೇಘಗಳಲ್ಲಿರುವ) ಜಲಸಮೂಹವನ್ನು ಕೆಳಗಿರುವ (ಭೂಮಿಯ ಮೇಲೆ) ಜಲಸಮೂಹದಿಂದ ಬೇರ್ಪಡುವ ಗೋಡೆಯಾಗಿದೆ ಅಷ್ಟೆ.

ವಿಸ್ತಾರದ (ಅಥವಾ ಅಂತರಿಕ್ಷ) ಕುರಿತಾಗಿ ಬೈಬಲಿನ ದೃಷ್ಟಿಕೋನವು ಪ್ರಾಚೀನ ಬಾಬೆಲಿನವರಲ್ಲಿರುವ ಸೃಷ್ಟಿಯ ಚರಿತ್ರೆಗಿಂತಲೂ ಭಿನ್ನವಾಗಿರುತ್ತದೆ. *ಎನುಮಾ ಎಲಿಶದ* ಪ್ರಕಾರವಾಗಿ, ಮರ್ದುಕ್ ದೇವರು ಸಮುದ್ರ ದೇವತೆಯಾದ ಟಿಯಮಟಳನ್ನು ಕತ್ತರಿಸಿದನು, "ಆತನು ಆಕೆಯನ್ನು ಚಿಪ್ಪು ಮೀನಿನ ರೀತಿಯಲ್ಲಿ ಎರಡು ಭಾಗಗಳಾಗಿ ವಿಭಜಿಸಿದನು."

ಆಕೆಯಲ್ಲಿ ಅರ್ಧವನ್ನು ಆತನು ಭೂಮಿಯ ಮೇಲೆ ಅಂತರ್ಜಲವನ್ನಾಗಿ ಬಿಟ್ಟನು, ಮತ್ತು ಮಿಕ್ಕ ಅರ್ಧವನ್ನು ಆಕಾಶದಲ್ಲಿ ಮೆತ್ತಿಗೆಯಂತಿರುವ ಅಂತರಿಕ್ಷವನ್ನಾಗಿ (ಸೆರೆಮನೆ) ಮಾಡಿದನು. ಆ ಬಳಿಕ ಆತನು ಕಾವಲುಗಾರರನ್ನು ನೇಮಿಸಿದನು, ಮತ್ತು "ಅವರನ್ನು ಆಕೆಯ ಜಲಸಮೂಹ ತಪ್ಪಿಸಿಕೊಳ್ಳುವದಕ್ಕೆ ಬಿಡದಂತ ಮಾಡಿದನು."8 ಈ ಪುರಾಣ ಕಥೆಯಲ್ಲಿ, ಅಂತರಿಕ್ಷವು ಈಗಾಗಲೇ ಅಸ್ತಿತ್ವದಲ್ಲಿದ್ದ ಸಾಮಗ್ರಿಯಿಂದ, ಹೆಸರಿಟ್ಟು ಹೇಳುವದಾದರೆ, ಟಿಯಮಟಳ ಅರ್ಧ ದೇಹದಿಂದ ಸೃಷ್ಟಿಸಲ್ಪಟ್ಟಿತು, ಆಕೆಯು ಸಮುದ್ರದ ದುಷ್ಟ ದೇವತೆಯಾಗಿದ್ದವಳು. ಮರ್ದುಕನು ಆಕೆಯನ್ನು ಬಂಧಿಸಿಟ್ಟು ಆಕೆಯ ನಾಶಕರ ನೀರನ್ನು ಭೂಮಿಯ ಮೇಲೆ ಸುರಿಸದಂತೆ ತಡೆಯುವದಕ್ಕೆ ಕಾವಲುಗಾರರನ್ನು ಒದಗಿಸಬೇಕಾಗಿತ್ತು. ಆದದರಿಂದ, ಈ ಪುರಾಣದಲ್ಲಿ, ಆಕಾಶದಲ್ಲಿರುವ ಜಲಸಮೂಹವನ್ನು ಕೆಟ್ಟವಳಾದ ದೇವತೆಯೆಂಬಂತೆ ಕಾಣಲ್ಪಟ್ಟಿರುತ್ತದೆ, ಆಕೆಯು ಕೊಯ್ಯಲ್ಪಟ್ಟಾಗ್ಯೂ, ಆಕೆಯ ವಿನಾಶಕರ ದಾರಿಗಳಿಂದ ಭೂಮಿಯನ್ನು ಕಾಪಾಡುವದಕ್ಕಾಗಿ ಆಕೆಯನ್ನು ನಿರಂತರವಾದ ನಿಗ್ರಹದಲ್ಲಿಡುವದು ಅಗತ್ಯವಾಗಿತ್ತು. ಇದು ಆದಿಕಾಂಡದ ಲೇಖಕನ ಅಭಿಪ್ರಾಯಕ್ಕಿಂತ ಅಥವಾ ದೇವರನ್ನು "ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುವ" (ಮತ್ತಾಯ 5:45) ಮೂಲಕ ಮಾನವರನ್ನು ಆಶೀರ್ವದಿಸುವಂಥವನು ಎಂಬುದಾಗಿ ದೇವರ ವಿಷಯದಲ್ಲಿ ಮಾತಾಡಿದ ಯೇಸುವಿನ ಅಭಿಪ್ರಾಯಕ್ಕಿಂತ ವ್ಯತ್ಯಾಸವಾಗಿರುತ್ತದೆ.

## ದಿನ 3: ಭೂಮಿ, ಗಿಡಗಳು, ಮತ್ತು ಮರಗಳು ಸೃಷ್ಟಿಸಲ್ಪಟ್ಟಿದ್ದು (1:9-13)

**[9]ಅನಂತರ ದೇವರು - ಆಕಾಶದ ಕೆಳಗಿರುವ ನೀರೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಕೊಳ್ಳಲಿ, ಒಣನೆಲವು ಕಾಣಿಸಲಿ ಅಂದನು; ಹಾಗೆಯೇ ಆಯಿತು. [10]ದೇವರು ಒಣನೆಲಕ್ಕೆ ಭೂಮಿಯೆಂದೂ ಜಲಸಮೂಹಕ್ಕೆ ಸಮುದ್ರವೆಂದೂ ಹೆಸರಿಟ್ಟನು. ಆತನು ಅದನ್ನು ಒಳ್ಳೇದೆಂದು ನೋಡಿದನು.**
**[11]ತರುವಾಯ ದೇವರು - ಭೂಮಿಯು ಹುಲ್ಲನ್ನೂ ಬೀಜಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳೆಸಲಿ; ಮತ್ತು ಬೀಜವುಳ್ಳ ಹಣ್ಣಿನ ಮರಗಳನ್ನೂ ಅವುಗಳ ಜಾತಿಗನುಸಾರವಾಗಿ ಹುಟ್ಟಿಸಲಿ ಎಂದು ಹೇಳಿದನು; ಹಾಗೆಯೇ ಆಯಿತು. [12]ಭೂಮಿಯಲ್ಲಿ ಹುಲ್ಲು ಬೆಳೆಯಿತು; ತಮ್ಮತಮ್ಮ ಜಾತಿಯ ಪ್ರಕಾರ ಬೀಜಬಿಡುವ ಕಾಯಿಪಲ್ಯದ ಗಿಡಗಳು ಉಂಟಾದವು; ತಮ್ಮತಮ್ಮ ಜಾತಿಗನುಸಾರವಾಗಿ ಬೀಜವುಳ್ಳ ಹಣ್ಣಿನ ಮರಗಳು ಕಾಣಿಸಿದವು. ದೇವರು ಅದನ್ನು ಒಳ್ಳೇದೆಂದು ನೋಡಿದನು. [13]ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಮೂರನೆಯ ದಿನವಾಯಿತು.**

**ವಚನಗಳು 9, 10.** ಕಥಾರೂಪದ ಲೇಖಕನು ತ್ವರಿತವಾಗಿ ಮೇಘಗಳಲ್ಲಿನ "ನೀರು" ಕಡೆಯಿಂದ ಭೂಮಿಯ ಮೇಲಿನ **ನೀರೆಲ್ಲಾ** ಕಡೆಗೆ ತಿರುಗಿಕೊಳ್ಳುತ್ತಾನೆ. ಖಂಡಿತವಾಗಿಯೂ, ಭೂಮಿಯು ಮನುಷ್ಯರು ಮತ್ತು ಪ್ರಾಣಿಗಳಿಬ್ಬರಿಗೂ ನಿವಾಸವಾಗುವದಕ್ಕೆ ನೇಮಿಸಿಲ್ಪಟ್ಟಿತ್ತು (1:24–31); ಹೇಗೂ, ಅದು ಪ್ರಾಣಿ ಹಾಗೂ ಮನುಷ್ಯ ಜೀವಿತಕ್ಕೆ ನಿವಾಸವಾಗುವದಕ್ಕೆ ಮುನ್ನ, **ಒಣನೆಲವು ಜಲಸಮೂಹ**ದಿಂದ ಬೇರ್ಪಡುವದು ಅಗತ್ಯವಾಗಿತ್ತು. ಭೂಮಿಯ ಮೇಲೆ ವಾಸಿಸುವವರ ಅಸ್ತಿತ್ವಕ್ಕಾಗಿ ದೇವರು ಮೇರೆಗಳನ್ನು ಒದಗಿಸಿದನು. ದೇವರು ಒಣನೆಲಕ್ಕೆ **ಭೂಮಿ** ಎಂದು ಹೆಸರಿಟ್ಟನು ಮತ್ತು ಒಟ್ಟಾಗಿ ಸೇರಿಸಲ್ಪಟ್ಟ ಜಲಸಮೂಹಕ್ಕೆ **ಸಮುದ್ರ** ಎಂದು ಕರೆದನು. ಮತ್ತೊಂದಾವರ್ತಿ, ದೇವರು ತನ್ನ ಕೆಲಸವನ್ನು **ಒಳ್ಳೇದೆಂದು** ಘೋಷಿಸಿದನು.

**ವಚನಗಳು 11-13.** ಭೂಮಿಯ ಪ್ರಾಣಿಗಳ ಮತ್ತು ಮನುಷ್ಯನ ಸೃಷ್ಟಿಗೆ ಒಣನೆಲವು ಕಾಣಿಸಿಕೊಳ್ಳುವದು ಅಗತ್ಯವಾಗಿದ್ದದ್ದು ಮಾತ್ರವೇ ಅಲ್ಲ, ಆದರೆ ಅವರ ಪೋಷಣೆಗೋಸ್ಕರ ಎಲ್ಲಾ ವಿಧವಾದ ಹಸಿರು **ಹುಲ್ಲು** ಇರುವದು ಅಗತ್ಯವಿತ್ತು **ದೇವರು** ಸಮೃದ್ಧವಾಗಿ **ಗಿಡಗಳನ್ನು** ಉಂಟಾಗಿಸಲಿ ಎಂದು **ಭೂಮಿಗೆ** ಆಜ್ಞಾಪಿಸಿದನು. ಈ ಸೃಷ್ಟಿಸಿಕೊಳ್ಳುವ ಶಕ್ತಿಯಿಂದಾಗಿ ನಿಸರ್ಗವು ದೇವತೆಯಾಗಿ (ಭೂತಾಯಿ) ಆಗಿ ಬಿಡಲಿಲ್ಲ, ಕೆಲವರು ಹಾಗೆ ಹೇಳುವುದುಂಟು. ಹಸಿರು ಗಿಡಮರಗಳನ್ನುಂಟು ಮಾಡಿಕೊಳ್ಳುವ ಶಕ್ತಿಯು ಸ್ವತಃ ಭೂಮಿಗೆ ಇರಲಿಲ್ಲ; ಬದಲಾಗಿ, ದೇವರು ಮಾತ್ರವೇ ತನ್ನ ವಾಕ್ಯದ ಸೃಷ್ಟಿಸುವ ಶಕ್ತಿಯ ಮೂಲಕವಾಗಿ, ಜೀವವು ಹೊರಹೊಮ್ಮುವಂತೆ ಗಿಡವನ್ನು ಶಕ್ತಗೊಳಿಸಿದನು. ಇದು ಕೀರ್ತನೆಗಾರನ ಮಾತುಗಳಿಗೆ ಸರಿಹೊಂದುವದಾಗಿದೆ, ಆತನು ಹೀಗೆ ಹೇಳಿದನು, "ಪಶುಗಳಿಗೋಸ್ಕರ ಹುಲ್ಲನ್ನು ಮೊಳಿಸುತ್ತೀ; ಮನುಷ್ಯರಿಗೋಸ್ಕರ ಪೈರುಗಳನ್ನು ಹುಟ್ಟಿಸುತ್ತೀ. ಅವರು ಭೂವ್ಯವಸಾಯಮಾಡಿ ಆಹಾರವನ್ನೂ" ಸಂಪಾದಿಸಿಕೊಳ್ಳುತ್ತಾರೆ (ಕೀರ್ತನೆ 104:14).

ಅಲ್ಲದೆ ದೇವರು **ಬೀಜವುಳ್ಳ ಹಣ್ಣಿನ ಮರಗಳನ್ನೂ ಅವುಗಳ ಜಾತಿಗನುಸಾರವಾಗಿ ಹುಟ್ಟಿ**ಸುವ ಮೂಲಕವಾಗಿ ಗಿಡದ ಜೀವವು ಮುಂದುವರೆಯುವಂತೆ ಮತ್ತು ಹೆಚ್ಚಳಗೊಳ್ಳುವಂತೆ ಏರ್ಪಾಡು ಸಹ ಮಾಡಿದನು, ಹೀಗೆ ಪ್ರಾಣಿಗಳಿಗೂ ಮನುಷ್ಯರಿಗೂ ಸಮೃದ್ಧವಾಗಿ ಆಹಾರವು ದೊರಕುವದಾಗಿತ್ತು. ಇದು ಗಿಡದ ಜೀವಿತವನ್ನು ಭೂಮಿಯ ಮೇಲಿನ ಅನೇಕ ಬೇರೆ ಬೇರೆ ವಾತಾವರಣಗಳಿಗೆ ಹೊಂದುವ ಕುರಿತು ಮುಂಚೆಯೇ ತಿಳಿಯುವಂತೆ ಮತ್ತು ಹೊಂದಿಕೆಯಾಗುವಂತೆ ನಡಿಸಿತು.

ಖಂಡಿತವಾಗಿಯೂ, ಇದೆಲ್ಲಾ ಪೂರ್ವದ ಹತ್ತಿರದ ಪ್ರಾಚೀನ ಬಾಬೆಲಿನವರ ಪುರಾಣಗಳಿಗೆ ತದ್ವಿರುದ್ಧವಾಗಿರುತ್ತದೆ. ಉದಾಹರಣೆಗೆ, ಕಾನಾನಿನಲ್ಲಿ ಬಾಳ (ಫಲವತ್ತತೆಯ ದೇವರು) ದೇವರು ವರ್ಷದ ಕೊನೆಯಲ್ಲಿ ಮೋಟನ ("ಮರಣ" ದೇವರು) ಸತ್ತನು ಎಂದು ನಂಬಲಾಗಿತ್ತು, ಹೀಗೆ ಬೆಳೆಗಳು ಮುದುಡಿಕೊಂಡು ಬೇಸಿಗೆ ಸುಗ್ಗಿಯ ಬಳಿಕ ಸತ್ತುಹೋಗುವಂತೆ ಕಾರಣವಾಗಿತ್ತು. ಆ ಬಳಿಕ ಬಾಳ ಮರಣದ ದೇವರಿಂದ ಕೆಳಕ್ಕೆ ಅಧೋಲೋಕಕ್ಕೆ ಕರೆದೊಯ್ಯಲ್ಪಟ್ಟನು; ಆದರೆ ವರ್ಷದ ವಸಂತಕಾಲದಲ್ಲಿ, ಬಾಳ ದೇವರ ಹೆಂಡತಿಯಾದ ಅನಾಥ ದೇವತೆಯು ರಕ್ತಸಿಕ್ತ ಕದನದಲ್ಲಿ ಮೋಟನನ್ನು ಕೊಲ್ಲುವ ಮೂಲಕ ಬಾಳನನ್ನು ಬಿಡಿಸಿಕೊಂಡಳು, ಮತ್ತು ಅವರ ಲೈಂಗಿಕ ಸಂಭೋಗದಿಂದಾಗಿ ಭೂಮಿಯು ಹೊಸ ಬೆಳೆಗಳನ್ನು ಕೊಡುವಂತಾಯಿತು ಮತ್ತು ಮನುಷ್ಯರೊಳಗೆ ಹಾಗೂ ಪ್ರಾಣಿಗಳಲ್ಲಿ ಹೊಸ ಜೀವ ಉಂಟಾಗುವಂತೆ ಕಾರಣವಾಗಿತ್ತು.[9]

ಅನೇಕ ಪ್ರಾಚೀನ ಧರ್ಮಗಳಲ್ಲಿ ಇಂತಹದ್ದೇ ಪುರಾಣಗಳು ಮತ್ತು ಫಲವತ್ತತೆಯ ಕಥೆಗಳಿರುತ್ತವೆ-ಆರಾಧಕರು ಮತ್ತು ಪವಿತ್ರ ವೇಶ್ಯೆಯರ ಮಧ್ಯದಲ್ಲಿ ಲೈಂಗಿಕ ಸಂಭೋಗಗಳನ್ನೊಳಗೊಂಡ ಧಾರ್ಮಿಕ ಆಚಾರಗಳು (ನೋಡಿರಿ ಹೋಶೇಯ 4:11-14). ಈ ಭ್ರಷ್ಟಗೊಂಡಿರುವ ಆಚಾರಗಳು ದೇವತೆಗಳಲ್ಲಿ ಅಂತಹ ಕ್ರಿಯೆಗಳುಂಟಾಗುವಂತೆ ಮಾಡುವದು ಮತ್ತು ಆ ಮೂಲಕ ಸಮೃದ್ಧಿಯಾದ ಬೆಳೆ ಹಾಗೂ ಫಲಗಳು, ಮಾತ್ರವಲ್ಲದೆ ಪ್ರಾಣಿ ಹಾಗೂ ಮನುಷ್ಯರಿಬ್ಬರಲ್ಲಿಯೂ ಸಾಕಷ್ಟು ಸಂತಾನಗಳುಂಟಾಗುವಂತೆ ಆಗಬೇಕೆಂಬುದೇ ಆಗಿತ್ತು. ಅಂತಹ ಭ್ರಷ್ಟಗೊಂಡ ಫಲವತ್ತತೆಯ ಚರಿತ್ರೆಗಳಿಗೆ ತದ್ವಿರುದ್ಧವಾಗಿ, ಆದಿಕಾಂಡದ ವಾಕ್ಯವು ವಿಶ್ವದ ಸಾರ್ವಭೌಮ ದೇವರು ಒಣನೆಲ ಕಾಣಿಸಿಕೊಳ್ಳುವಂತೆ ಮಾಡುವ ಮೂಲಕ ಸಮುದ್ರವನ್ನು ಬೇರ್ಪಡಿಸಿದನು, ಮತ್ತು ಬಳಿಕ ಆತನು ಎಲ್ಲಾ ವಿಧವಾದ ಬೆಳೆ ಮತ್ತು **ಹಣ್ಣು**ಗಳುಂಟಾಗುವ ಹಾಗೆ ಒಂದು ಫಲವತ್ತಾದ ಭೂಮಿಯನ್ನು (ಸಂಪೂರ್ಣ ಪೌಷ್ಟಿಕಗಳುಳ್ಳ)

ಉಂಟು ಮಾಡಿದನು. ಅಷ್ಟುಮಾತ್ರವಲ್ಲದೆ, ಭೂಮಿಯ ಫಲವತ್ತತೆಯು ಜೀವವನ್ನೊಳಗೊಂಡ ಸಾಕಷ್ಟು ಪ್ರಮಾಣದ ವಿವಿಧ ಬೀಜಗಳ ಪ್ರಕ್ರಿಯೆಯ ಮೂಲಕ ಸ್ವಯಂ-ಶಾಶ್ವತಗೊಳಿಸಿಕೊಳ್ಳುವಂತೆ ಕಟ್ಟಪ್ಪಣೆ ಕೊಟ್ಟನು - ಮತ್ತು ಇದೆಲ್ಲವೂ ಸೃಷ್ಟಿಯ ಏಕ ದೇವರಿಂದಾಗಿತ್ತು, ಆತನು ಜೀವದ ಸತ್ಯವಾದ ಕರ್ತನು. ತರುವಾಯ, **ಮೂರನೆಯ ದಿನದ** ಅಂತ್ಯದಲ್ಲಿ, ದೇವರು ತಾನು ಸಾಧಿಸಿದ್ದೆಲ್ಲವನ್ನು **ಒಳ್ಳೇದು** ಎಂದು ಘೋಷಿಸಿದನು.

## ದಿನ 4: ಆಕಾಶದಲ್ಲಿ ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳು ಇಡಲ್ಪಟ್ಟವು (1:14-19)

**14ಬಳಿಕ ದೇವರು - ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ ದಿನಸಂವತ್ಸರಗಳನ್ನೂ ತೋರಿಸಲಿ; 15ಮತ್ತು ಭೂಮಿಯ ಮೇಲೆ ಬೆಳಕುಕೊಡುವದಕ್ಕೆ ಅವು ಆಕಾಶಮಂಡಲದಲ್ಲಿ ದೀಪಗಳಂತಿರಲಿ ಅಂದನು; ಹಾಗೆಯೇ ಆಯಿತು. 16ದೇವರು ಹಗಲನ್ನಾಳುವದಕ್ಕೆ ದೊಡ್ಡ ಬೆಳಕನ್ನೂ ಇರುಳನ್ನಾಳುವದಕ್ಕೆ ಚಿಕ್ಕ ಬೆಳಕನ್ನೂ, ಈ ಎರಡು ದೊಡ್ಡ ಬೆಳಕುಗಳನ್ನು ಉಂಟುಮಾಡಿದನು. ಆತನು ನಕ್ಷತ್ರಗಳನ್ನು ಸಹ ಉಂಟುಮಾಡಿದನು. 17ದೇವರು ಆ ಬೆಳಕುಗಳನ್ನು ಆಕಾಶದಲ್ಲಿಟ್ಟು ಭೂಮಿಯ ಮೇಲೆ ಬೆಳಕು ಕೊಡುವದಕ್ಕೂ 18ಹಗಲಿರುಳುಗಳನ್ನು ಆಳುವದಕ್ಕೂ ಬೆಳಕನ್ನು ಕತ್ತಲನ್ನು ಬೇರೆ ಬೇರೆ ಮಾಡುವದಕ್ಕೂ ಅವುಗಳನ್ನು ನೇಮಿಸಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು. 19ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ನಾಲ್ಕನೆಯ ದಿನವಾಯಿತು.**

**ವಚನಗಳು 14, 15.** ಆಕಾಶಕಾಯಗಳ - ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ - ಸೃಷ್ಟಿಯ ಕುರಿತು ಈ ಅಧ್ಯಾಯದಲ್ಲಿ, ಮಾನವ ಸೃಷ್ಟಿಯನ್ನು ಹೊರತು ಪಡಿಸಿ ಬೇರೆ ಯಾವದಕ್ಕಿಂತಲೂ ಅತ್ಯಧಿಕ ವಿಸ್ತಾರದೊಂದಿಗೆ ಬಣ್ಣಿಸಲ್ಪಟ್ಟಿದೆ, ಮಾನವ ಸೃಷ್ಟಿಯ ಕುರಿತ ಕಥನವು ಪುನರಾವರ್ತನೆಯಾಗಿರುತ್ತದಷ್ಟೆ. ನಾಲ್ಕನೆಯ ದಿನದ ಬಣ್ಣನೆಗಾಗಿ ಅಷ್ಟೊಂದು ಸ್ಥಳಾವಕಾಶವು ಕೊಡಲ್ಪಟ್ಟಿರುವದು ಬಹುಶಃ ಪ್ರಾಚೀನ ಜಗತ್ತಿನಲ್ಲಿದ್ದ ಜನರ ಮನಸ್ಸುಗಳಲ್ಲಿ ಆಕಾಶಕಾಯಗಳು ಬಹಳಷ್ಟು ಪ್ರಾಮುಖ್ಯತೆಯನ್ನು ಹೊಂದಿದ್ದವೆಂಬ ಕಾರಣಕ್ಕಾಗಿಯೇ ಆಗಿರಬಹುದು. ಮೆಸಪೊಟಾಮ್ಯದ, ಫಿಲಿಷ್ಟಿಯ, ಮತ್ತು ಐಗುಪ್ತಗಳಲ್ಲಿ, ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳನ್ನು ಮನುಷ್ಯರ ದೈನಂದಿನ ಜೀವಿತಗಳ ಮೇಲೆ ಮತ್ತು ಅವರ ಅಂತ್ಯಾವಸ್ಥೆಗಳ ಮೇಲೆ ಹಿಡಿತವನ್ನು ಹೊಂದಿರುವ ದೇವರುಗಳೆಂದು ಆರಾಧಿಸಲಾಗುತ್ತಿತ್ತು.

ಹೇಗೂ, ಆದಿಕಾಂಡದ ಲೇಖಕನು ಅವುಗಳನ್ನು ಮೂರು ಕೆಲಸಗಳನ್ನು ಮಾಡುವದಕ್ಕೋಸ್ಕರ ದೇವರಿಂದ ನಿರ್ಮಿಸಲ್ಪಟ್ಟ **ಬೆಳಕುಗಳು** ಎಂದಷ್ಟೆ ಕರೆದನು: (1) ಅವುಗಳು **ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ** ಎಂಬುದಕ್ಕಾಗಿ. (2) ಅವುಗಳನ್ನು ಕಾಲಮಾನವನ್ನು ಸೂಚಿಸುವವುಗಳಾಗಿ **ಸಮಯಗಳನ್ನೂ ದಿನಸಂವತ್ಸರಗಳನ್ನೂ ತೋರಿಸಲಿ** ಎಂದಾಗಿತ್ತು. (3) ಅವುಗಳು **ಭೂಮಿಯ ಮೇಲೆ ಬೆಳಕುಕೊಡುವದಕ್ಕೆ** ರೂಪಿಸಲ್ಪಟ್ಟಿದ್ದವು. ಪ್ರಾಚೀನ ಜನರು ಈ ಆಕಾಶಕಾಯಗಳಿಗೆ ನೀಡುತ್ತಿದ್ದ ಧಾರ್ಮಿಕ ಭಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವುಗಳು ದೇವರುಗಳಾಗಿರಲಿಲ್ಲ ಎಂಬುದನ್ನು ಬೈಬಲಿನ ಚರಿತ್ರೆಯು ಸ್ಪಷ್ಟವಾಗಿ ತಿಳಿಸುತ್ತದೆ, ಅವುಗಳು ಸ್ವತಂತ್ರ ಕಾಯಗಳು ಸಹ ಆಗಿರಲಿಲ್ಲ. ಅವುಗಳು ನಿತ್ಯವಾದವುಗಳು ಸಹ ಆಗಿರುವದಿಲ್ಲ; ಅದಕ್ಕೆ ತದ್ವಿರುದ್ಧತೆಯು ಏನೆಂದರೆ, ಅವುಗಳು ಏಕ

ಸಾರ್ವಭೌಮ ದೇವರು ಸೃಷ್ಟಿಸಿರುವಂಥ ವಸ್ತುಗಳಾಗಿದ್ದವು - ಸೇವೆಯನ್ನು ಹೊಂದಿಕೊಳ್ಳಲು ಅಲ್ಲ, ಆದರೆ ಸೇವೆಯನ್ನು ಮಾಡುವದಕ್ಕೆ, ತಮ್ಮನ್ನು ಉಂಟು ಮಾಡಿದಾತನ ಚಿತ್ತವನ್ನು ನೆರವೇರಿಸುವದಕ್ಕಾಗಿ ರೂಪಿಸಲ್ಪಟ್ಟವುಗಳು (ನೋಡಿರಿ ಕೀರ್ತನೆ 104:19–23).

**ವಚನಗಳು 16-19.** ಲೇಖಕನು ಆಕಾಶಕಾಯಗಳನ್ನು ದೇವರುಗಳಾಗಿ ಮಾಡುವಂತಹ ಸಮಕಾಲೀನ ಅಭಿಪ್ರಾಯಗಳ ಸನ್ನಿವೇಶವೊಂದರಲ್ಲಿ ಬರೆಯುತ್ತಿದ್ದನು ಎಂಬುದು ಆತನು ಬಳಸಿದ ಪರಿಭಾಷೆಯಿಂದಾಗಿ ಈ ವಚನಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಮೊಟ್ಟಮೊದಲನೆಯದಾಗಿ, ಆತನು ಒಂದು ಅಸಹಜವಾದ ಪದವೊಂದನ್ನು ಬಳಸುತ್ತಾನೆ, **ದೊಡ್ಡ ಬೆಳಕು**, ಸೂರ್ಯನು ಎಂಬುದಕ್ಕಿರುತ್ತಿದ್ದ ಸಹಜವಾದ ಪದವನ್ನು ಆತನು ಬಳಸಲಿಲ್ಲ: שֶׁמֶשׁ *(ಶೆಮೆಶ್)*. ಎರಡನೆಯದಾಗಿ, ಚಂದ್ರನು ಎಂಬುದಕ್ಕಿರುತ್ತಿದ್ದ ಸಹಜವಾದ ಪದದ - יָרֵחַ *(ಯಾರೀಚ್)* - ಬದಲಾಗಿ, ಆತನು **ಚಿಕ್ಕ ಬೆಳಕು** ಎಂದು ಬರೆದನು. ಬಹುಶಃ, ಇತರೆ ಯೆಹೂದಿ ಭಾಷೆಗಳಲ್ಲಿ, ಈ ಪದಗಳು ದೇವರುಗಳ ಹೆಸರುಗಳಾಗಿದ್ದ ಕಾರಣದಿಂದಾಗಿ ಆತನು "ಸೂರ್ಯ" ಮತ್ತು "ಚಂದ್ರ" ಎಂಬುದಕ್ಕಿರುವ ಸಹಜವಾದ ಪದಗಳ ಬದಲಾಗಿ ಈ ಪದಗಳನ್ನು ಬಳಸಿರಬಹುದಾಗಿದೆ. ಕೆಲವೊಂದು ಕಾನಾನ್ಯರ ಪಟ್ಟಣಗಳು, ಉದಾಹರಣೆಗೆ ಬೆತ್ಸೆಮೆಶ ಮತ್ತು ಯೆರಿಕೋಗಳು ತಮ್ಮ ಹೆಸರುಗಳಲ್ಲಿನ ಅನ್ಯಧರ್ಮಿಯ ಮಹತ್ವತೆಯನ್ನು ಉಳಿಸಿಕೊಂಡಿದ್ದವು.[10]

ಈ ಅನ್ಯಧರ್ಮಿಯ ಹೆಸರುಗಳೊಳಗೆ ಅನೇಕ ಹೆಸರುಗಳು ಮುಂಬರುವ ಅನೇಕ ಶತಮಾನಗಳ ವರೆಗೆ ವಾಗ್ದಾನ ದೇಶದಲ್ಲಿ ಬದುಕುಳಿಯಲಿದ್ದವಾದರೂ, ಆದಿಕಾಂಡದ ಲೇಖಕನು ತನ್ನ ಜನರ ಭವಿಷ್ಯವು ಈ ಸೂರ್ಯ, ಚಂದ್ರ, ಮತ್ತು **ನಕ್ಷತ್ರಗಳ** ಮೇಲೆ ಆಧಾರವಾಗಿಲ್ಲ, ಆದರೆ ಸಮಸ್ತವನ್ನೂ ಸೃಷ್ಟಿಸಿದ ಏಕ ಸತ್ಯ ದೇವರ ಕೈಯಲ್ಲಿಯೇ ಇರುತ್ತದೆಂಬುದನ್ನು ಅವರು ನೆನಪಿಟ್ಟುಕೊಳ್ಳಬೇಕೆಂದು ಬಯಸಿದ್ದನು. ಆಕಾಶಕಾಯಗಳು **ಹಗಲಿರುಳುಗಳ** ಮೇಲೆ ಪ್ರಾಬಲ್ಯತೆಯನ್ನು ("ಆಳು" ಅಥವಾ "ದೊರೆತನ ಮಾಡು"; KJV; ASV) ಹೊಂದಿರುತ್ತವೆಂಬ ಅರ್ಥದಲ್ಲಿ ಮಾತ್ರವೇ **ಆಳುತ್ತವೆ** ಮತ್ತು ನಿಶ್ಚಿತ ಕಾಲಗಳಿಗೆ (ದಿನಗಳು ಮತ್ತು ಸಂವತ್ಸರಗಳಿಗೆ) ಸೂಚನೆಗಳಾಗಿರುತ್ತವೆ. ಪ್ರಾಚೀನ ಜನರು ಈ ಆಕಾಶಕಾಯಗಳನ್ನು ಪೂಜಿಸಬಾರದಿತ್ತು; ಬದಲಾಗಿ, ಅವುಗಳು ಸೃಷ್ಟಿಕರ್ತನ ಮಹಿಮೆಗೋಸ್ಕರ ಸಾಕ್ಷಿಯನ್ನು ಕೊಡುವವುಗಳಾಗಿ ಸೃಷ್ಟಿಯ ಭಾಗವಾಗಿರಬೇಕಾಗಿತ್ತಷ್ಟೆ (ಕೀರ್ತನೆ 19:1–6).

ಹಿಂದಿನ ದಿನಗಳಲ್ಲಿ ದೇವರು ಮಾಡಿದ ಕೆಲಸದ ಕುರಿತಾದ ಹೇಳಿಕೆಗಳಿಗನುಗುಣವಾಗಿ, ವಾಕ್ಯಭಾಗವು **ನಾಲ್ಕನೆಯ ದಿನ**ದಂದು ಸೃಷ್ಟಿಸಲ್ಪಟ್ಟಿದ್ದು **ಒಳ್ಳೇದು** ಆಗಿತ್ತೆಂಬುದಾಗಿ ವರದಿ ಮಾಡುತ್ತದೆ. ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳನ್ನು (ಬೆಳಕು-ಧಾರಕರು) ನಾಲ್ಕನೆಯ ದಿನದಲ್ಲಿ ಸೃಷ್ಟಿಸಲ್ಪಟ್ಟಿದ್ದು ಒಂದನೆಯ ದಿನದಲ್ಲಿ ಬೆಳಕಿನ ಸೃಷ್ಟಿಸಿ ಅದನ್ನು ಕತ್ತಲೆಯಿಂದ ಬೇರ್ಪಡಿಸಿದ್ದಕ್ಕೆ ಸರಿಹೊಂದುತ್ತದೆ.

## ದಿನ 5: ನೀರು ಹಾಗೂ ಆಕಾಶಗಳಲ್ಲಿ ಜಲಚರಗಳು ಮತ್ತು ಪಕ್ಷಿಗಳು ತುಂಬಿಸಲ್ಪಟ್ಟವು (1:20-23)

**[20]ತರುವಾಯ ದೇವರು - ಗುಂಪುಗುಂಪಾಗಿ ಚಲಿಸುವ ಜಲಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಅಂತರಿಕ್ಷದೊಳಗೆ ಹಾರಾಡಲಿ ಎಂದು ಹೇಳಿದನು.**
**[21]ಹೀಗೆ ದೇವರು ಮಹಾಜಲಚರಗಳನ್ನೂ ನೀರಿನಲ್ಲಿ ತುಂಬಿರುವ ಸಕಲವಿಧವಾದ ಜೀವಿಗಳನ್ನೂ**

**ರೆಕ್ಕೆಗಳುಳ್ಳ ಸಕಲವಿಧವಾದ ಪಕ್ಷಿಗಳನ್ನೂ ಅವುಗಳ ಜಾತಿಗನುಸಾರವಾಗಿ ಉಂಟುಮಾಡಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು. [22]ಇದಲ್ಲದೆ ದೇವರು ಅವುಗಳಿಗೆ - ನೀವು ಅಭಿವೃದ್ಧಿಯಾಗಿ ಹೆಚ್ಚಿರಿ; ಜಲಚರಗಳು ಸಮುದ್ರದ ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಹೆಚ್ಚಲಿ ಎಂದು ಹೇಳಿ ಆಶೀರ್ವದಿಸಿದನು. [23]ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಐದನೆಯ ದಿನವಾಯಿತು.**

**ವಚನ 20.** ಎರಡು ಮತ್ತು ಐದನೆಯ ದಿನಗಳ ನಡುವಿರುವ ಸಂಬಂಧವು ಗಮನಕ್ಕೆ ಬರತಕ್ಕದ್ದಾಗಿದೆ. ಎರಡನೆಯ ದಿನದಂದು, ದೇವರು ವಿವಿಧ ಜೀವಿಗಳಿಗೆ ಸೂಕ್ತವಾದ ನಿವಾಸ ಮತ್ತು ವಾತಾವರಣಗಳನ್ನು ಒದಗಿಸುವದಕ್ಕೋಸ್ಕರ ಅಂತರಿಕ್ಷವನ್ನುಂಟು ಮಾಡುವ ಮೂಲಕ ಮೇಲಿನ ಮತ್ತು ಕೆಳಗಣ ಜಲಸಮೂಹವನ್ನು ಬೇರ್ಪಡಿಸಿದನು. ತರುವಾಯ, ಐದನೆಯ ದಿನದಂದು, ಆತನು ಬಾನಿನಲ್ಲಿ (**ಅಂತರಿಕ್ಷದೊಳಗೆ**) ವಾಸಿಸುವ **ಪಕ್ಷಿಗಳನ್ನು** ಮತ್ತು ಸಾಗರ, ಸಮುದ್ರ, ಮತ್ತು ನದಿಗಳಲ್ಲಿ (ಕೆಳಗಣ **ನೀರಿನಲ್ಲಿ**) ವಾಸಿಸಲಿದ್ದ ಜಲಚರಗಳನ್ನು ಉಂಟು ಮಾಡಿದನು.

**ನೀರು ತುಂಬಿರುವ ಸಕಲವಿಧವಾದ ಜೀವಿಗಳಿಂದ** ತುಂಬಿರಬೇಕಾಗಿತ್ತೆಂದು ಚರಿತ್ರೆಯು ತಿಳಿಸುತ್ತದೆ. "ತುಂಬಿರು" (שָׁרַץ, *ಶರಾಟ್ಸ*) ಎಂಬ ಕ್ರಿಯಾಪದವು ಸಜಾತಿಯ ನಾಮಪದದೊಂದಿಗೆ ಬಳಸಲ್ಪಟ್ಟಿದ್ದು - ಒಂದು ಸಮುದಾಯವಾಚಕ ಬಹುವಚನ - "ಜಂತುಗಳ ಗುಂಪು" (שֶׁרֶץ, *ಶೆರೆಟ್ಸ*) ಎಂದರ್ಥವಾಗಿದೆ, ಇಲ್ಲಿ ಅದರ ಅರ್ಥವು "ಜಂತುಗಳು"[11] ಎಂದಾಗಿದೆ. ವೈಶಿಷ್ಟ್ಯವಾಗಿ, *ಶೆರೆಟ್ಸ* ಎಂಬುದು ವೇಗವಾಗಿ ಹರಿದಾಡುವ ಜೀವಿಗಳನ್ನು ಸೂಚಿಸುತ್ತದೆ, ಉದಾಹರಣೆಗೆ ಕೀಟಗಳು, ಇಲಿ, ಚಿಕ್ಕ ಸರಿಸೃಪಗಳು, ಹಲ್ಲಿಗಳು ಇತ್ಯಾದಿ. ಈ ಸನ್ನಿವೇಶದಲ್ಲಿ, ಪದವು ಸಾಮಾನ್ಯವಾಗಿ ಜಲಚರಗಳನ್ನು ಸೂಚಿಸುತ್ತದೆ ಮತ್ತು ಅದು 21ನೇ ವಚನದಲ್ಲಿನ "ಮಹಾ ಜಲಚರಗಳನ್ನು" ಸಹ ಒಳಗೊಂಡಿರಬಹುದಾಗಿದೆ.

"ಜೀವಜಂತುಗಳು" (נֶפֶשׁ חַיָּה, *ನೆಪೆಶ ಎಕಯ್ಯಾಹ)* ಎಂಬುದು "ಜಂತುಗಳು" ಎಂಬುದಕ್ಕೆ ವಿರುದ್ಧವಾಗಿರುತ್ತದೆ. ಈ ಪದಗುಚ್ಛವು ಸಕಲವನ್ನೊಳಗೊಂಡದ್ದಾಗಿದೆ; ಅದು 1:20, 21ರಲ್ಲಿ ಜಲಚರಗಳಗೆ, 1:24ರಲ್ಲಿನ ಭೂಮಿಯ ಮೇಲಿನ ಪ್ರಾಣಿಗಳಿಗೆ, 9:10ರಲ್ಲಿನ ಪಕ್ಷಿಗಳು ಹಾಗೂ ಭೂಪ್ರಾಣಿಗಳಿಗೆ, 2:7ರಲ್ಲಿ ಮನುಷ್ಯನಿಗೆ, ಮತ್ತು 9:16ರಲ್ಲಿನ ಪ್ರಾಣಿಗಳಿಗೆ ಅನ್ವಯವಾಗುತ್ತದೆ. ಅದು ಜೀವಶ್ವಾಸವುಳ್ಳ ಸಕಲ ಜೀವಿಗಳನ್ನು ಸೂಚಿಸುತ್ತದೆ (2:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನಗಳು 21-23.** *ಬಾರಾ* ("ಸೃಷ್ಟಿಸು") ಎಂಬ ಪದವು 1ನೇ ವಚನವನ್ನು ಬಿಟ್ಟರೆ ಇಲ್ಲಿಯ ವರೆಗೂ ಈ ಅಧ್ಯಾಯದಲ್ಲಿ ಕಂಡು ಬಂದಿರುವದಿಲ್ಲ, ಆದರೆ ಅದು 21ನೇ ವಚನದಲ್ಲಿ ಕಂಡು ಬರುತ್ತದೆ, ಅದು **ಉಂಟುಮಾಡಿದ** ಮೂರು ವಿಧವಾದ ಪ್ರಮುಖ ಪ್ರಾಣಿಗಳನ್ನು ಪಟ್ಟಿ ಮಾಡುತ್ತದೆ. ನೀರುಗಳಲ್ಲಿ ನುಸಳಾಡುವ ಚಿಕ್ಕ ಮೀನುಗಳಿರುತ್ತವೆ ಮತ್ತು ಸಮುದ್ರದ ತಳಗಳುದ್ದಕ್ಕು ಜೀವಿಗಳು ಇರುತ್ತವೆ. ತರುವಾಯ, ಅಂತರಿಕ್ಷಗಳಲ್ಲಿ ಹಾರಾಡುವ **ಪಕ್ಷಿಗಳು** ಇದ್ದವು. ಅಂತಿಮವಾಗಿ ಮೂರನೆಯ ಗುಂಪಿನಲ್ಲಿ, ಲೇಖಕನು ನಿರ್ದಿಷ್ಟವಾಗಿ **ಮಹಾಜಲಚರಗಳು** (הַתַּנִּינִם הַגְּדֹלִים, *ಹಥ್ಥನ್ನಿನಿಮ ಹಾಗ್ಗೆಡೊಲಿಮ*) ಎಂದು ಉಲ್ಲೇಖಿಸುತ್ತಾನೆ.

"ಮಹಾಜಲಚರಗಳು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದದ ಮೂಲ ಪದವು תַּנִּין *(ಥನ್ನಿನ)*, ಅದರ ಅರ್ಥವು ಒಂದು "ಸರ್ಪ" ಅಥವಾ "ಘಟಸರ್ಪ"[12] ಎಂದು ಸಹ ಇರುತ್ತದೆ ಮತ್ತು ಅದು ಹಾವನ್ನು (ವಿಮೋಚನಕಾಂಡ 7:9), ಒಂದು ಮೊಸಳೆಯನ್ನು (ಯೆಹೆಜ್ಕೇಲ 29:3),

ಅಥವಾ ಬೇರೆ ಯಾವದಾದರೂ ವಿಧವಾದ ಶಕ್ತಿಶಾಲಿ ಜೀವಿಯೊಂದನ್ನು (ಯೆರೆಮೀಯ 51:34) ಸೂಚಿಸಬಹುದಾಗಿದೆ. ಅದು ಕಾವ್ಯಾತ್ಮಕ ಅಥವಾ ಪ್ರವಾದನಾತ್ಮಕ ಸಾಹಿತ್ಯದಲ್ಲಿ ಒಂದು ಸಾಂಕೇತಿಕ ರೀತಿಯಲ್ಲಿ, ದೇವರು ತನ್ನ ವೈರಿಗಳ ಮೇಲೆ ಜಯಗಳನ್ನು ಹೊಂದುವದನ್ನು ಬಣ್ಣಿಸುವದಾಗಿ ಬಳಸಲ್ಪಡಬಹುದು (ಯೋಬ 7:12; ಕೀರ್ತನೆ 74:13; ಯೆಶಾಯ 27:1; 51:9). ಸೃಷ್ಟಿಯ ಚರಿತ್ರೆಯಲ್ಲಿ, ಲೇಖಕನು ಅದನ್ನು ಎರಡನೆಯ ರೀತಿಯ ಅರ್ಥದಲ್ಲಿ ಬಳಸುವವನಾಗಿರಲಿಲ್ಲ, ಆದರೆ ತಿಮಿಂಗಲಗಳು, ನೀರ್ಗುದುರೆಗಳು, ಮೊಸಳೆಗಳು, ಮತ್ತು ಸಮುದ್ರದಲ್ಲಿ ಅಥವಾ ಸಮುದ್ರದ ಸಮೀಪ ಸಿಕ್ಕುವ ಇತರ ಬೃಹತ್ತಾಕಾರದ ಪ್ರಾಣಿಗಳಂತಹ ನಿಜವಾದ ಜಲ ಪ್ರಾಣಿಗಳೆಂಬ ಅರ್ಥದಲ್ಲಿ ಬರೆದನು.

*ಥನ್ನಿನಿಮ* ("ಮಹಾಜಲಚರಗಳು"), ಪುರಾಣಗಳಲ್ಲಿರುವ ಪ್ರಕಾರ, ದೇವರು ಸೋಲಿಸಬೇಕಾಗಿದ್ದ ವೈರಿಗಳಾಗಿರಲಿಲ್ಲ; ಬದಲಾಗಿ ಅವುಗಳು ಆತನ ಸೃಷ್ಟಿಯ ಭಾಗವಾಗಿದ್ದವು ಮತ್ತು ಅವುಗಳು **ಒಳ್ಳೇದು** ಎಂದು ಘೋಷಿಸಲ್ಪಟ್ಟವು. ಬೇರೆ ಪ್ರಾಣಿಗಳ ಹಾಗೆಯೇ, ಅವುಗಳಿಗೆ **ಅಭಿವೃದ್ಧಿಯಾಗಿ ಹೆಚ್ಚಿರಿ; ಜಲಚರಗಳು ಸಮುದ್ರದ ನೀರಿನಲ್ಲಿ ತುಂಬಿಕೊಳ್ಳಲಿ** ಎಂಬುದಾಗಿ ಪುನರುತ್ಪತ್ತಿಯ ಶಕ್ತಿಗಳನ್ನು ನೀಡಿ ಆಶೀರ್ವದಿಸಲಾಗಿತ್ತು. **ಐದನೆಯ ದಿನ**ವು ಮುಕ್ತಾಯವಾದಂತೆ, ಆದಿಕಾಂಡದ ಮಿಕ್ಕ ಭಾಗದುದ್ದಕ್ಕೂ ಕಾಣಿಸಿಕೊಳ್ಳುವ ದೈವಶಾಸ್ತ್ರೀಕವಾದ ವಿಷಯವಾಗಿ "ಆಶೀರ್ವಾದ"ದ ಭಾವನೆಯು ಪರಿಚಯಿಸಲ್ಪಡುತ್ತದೆ. ಪುಸ್ತಕವು ಅನೇಕ ಸಾರಿ ತನ್ನ ಸೃಷ್ಟಿಜೀವಿಗಳನ್ನು ಆಶೀರ್ವದಿಸುವನೆಂಬ ವಾಗ್ದಾನಗಳನ್ನು ದೇವರು ನೆರವೇರಿಸಿದ ಕಥೆಯಾಗಿ ಬಣ್ಣಿಸಲ್ಪಟ್ಟಿದೆ.

## ದಿನ 6: ಪ್ರಾಣಿಗಳು ಮತ್ತು ಮಾನವನು ಸೃಷ್ಟಿಸಲ್ಪಟ್ಟಿದ್ದು (1:24-31)

ಈ ಹಂತದಲ್ಲಿ, ಸೃಷ್ಟಿಯ ಅಂತಿಮ ದಿನದ ಕುರಿತಾದ ಒಂದು ಬಣ್ಣನೆಯು ಕೊಡಲ್ಪಟ್ಟಿದೆ. ಹಿಂದಿನ ಐದು ದಿನಗಳಿಗಿಂತಲೂ ಅಧಿಕವಾಗಿ ಆರನೆಯ ದಿನದ ಕುರಿತು ಹೆಚ್ಚು ವಿವರಗಳು ಕೊಡಲ್ಪಟ್ಟಿವೆ ಯಾಕೆಂದರೆ ಭೂಪ್ರಾಣಿಗಳ ಮತ್ತು ಮಾನವ ಜೀವದ ಸೃಷ್ಟಿಯಲ್ಲಿ ದೇವರ ಪರಾಕ್ರಮದ ಕ್ರಿಯೆಗಳು ತಮ್ಮ ಪರಾಕಾಷ್ಠೆಯನ್ನು ತಲುಪಿದವು. ಮೂರನೆಯ ದಿನದಂದು, ಒಣಭೂಮಿ ಮತ್ತು ಎಲ್ಲಾ ವಿಧವಾದ ಹಸಿರು ಗಿಡಮರಗಳು ಕಾಣಿಸಿಕೊಂಡವು, ಆದ್ದರಿಂದ ಆರನೆಯ ದಿನವು ಭೂಮಿಯಲ್ಲೆಲ್ಲಾ ತುಂಬಿಕೊಳ್ಳುವಂತೆ ಪ್ರಾಣಿಗಳ ಸೃಷ್ಟಿ (1:24, 25) ಮತ್ತು ಮಾನವನ ಸೃಷ್ಟಿಯೊಂದಿಗೆ (1:26–28) ತನ್ನನ್ನು ಸಂಬಂಧಪಡಿಸಿಕೊಳ್ಳುತ್ತದೆ. ಅದರ ಜೊತೆಯಲ್ಲಿ, ಒಂದು ಕೃಪಾಭರಿತ ವರದಾನವಾಗಿ, ದೇವರು ಅವುಗಳ ಪೋಷಣೆಗೋಸ್ಕರ ಆಹಾರವನ್ನುಂಟು ಮಾಡುವ ಕಾಯಿಪಲ್ಯಗಳ ಬೆಳೆಗಳನ್ನು ಒದಗಿಸಿದನು (1:29, 30). ಮೊದಲನೆಯ ಅಧ್ಯಾಯದ ಜೊತೆಯಲ್ಲಿ, ಈ ವಿಭಾಗವು ತಾನು ಸೃಷ್ಟಿಸಿದ್ದೆಲ್ಲವನ್ನು ದೇವರು "ಬಹು ಒಳ್ಳೇದು" ಎಂದು ಮೌಲ್ಯಮಾಪನ ಮಾಡುವದರೊಂದಿಗೆ ಅಂತ್ಯಗೊಳ್ಳುತ್ತದೆ (1:31).

### ಭೂಮಿಯ ಮೇಲಿನ ಪ್ರಾಣಿಗಳ ಸೃಷ್ಟಿ (1:24, 25)

**[24]ಮತ್ತು ದೇವರು - ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶುಕ್ರಿಮಿಗಳೂ ಕಾಡುಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ ಅಂದನು; ಹಾಗೆಯೇ ಆಯಿತು. [25]ದೇವರು ಕಾಡುಮೃಗಗಳನ್ನೂ ಪಶುಗಳನ್ನೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳನ್ನೂ ಅವುಗಳ ಜಾತಿಗನುಸಾರ ಉಂಟುಮಾಡಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು.**

**ವಚನಗಳು 24, 25.** ಈ ಎರಡು ವಚನಗಳಲ್ಲಿ, ದೇವರು ಸೃಷ್ಟಿಸಿದ ಮೂರು ವಿಧವಾದ ಭೂಪ್ರಾಣಿಗಳನ್ನು (**ಜೀವಜಂತುಗಳು**) ಲೇಖಕನು ಬಣ್ಣಿಸುತ್ತಾನೆ. (1) **ಪಶು** ಎಂಬುದರಲ್ಲಿ ಬಹುಶಃ ಹುಲ್ಲು ಮತ್ತು ಗಿಡಮೂಲಿಕೆಗಳನ್ನು ತಿಂದು ಬದುಕುವ ಸಾಕು ಪ್ರಾಣಿಗಳನ್ನು ಒಳಗೊಂಡಿರುತ್ತದೆ (2) **ಕ್ರಿಮಿಕೀಟಗಳು** ಆಯಾ ಕೀಟಗಳು, ಹಾವುಗಳು, ಸರಿಸೃಪಗಳು, ಮತ್ತು ಚಿಕ್ಕ ಚತುಸ್ಪಾದಿಗಳು ಇತ್ಯಾದಿ ಆಗಿರುತ್ತವೆ. (3) **ಕಾಡುಮೃಗಗಳು** ಎಂಬುದಾಗಿ ಪ್ರತಿಯೊಂದು ವಿಧವಾದ ಕಾಡಿನ ಪ್ರಾಣಿಗಳನ್ನು ಸೂಚಿಸಬಹುದಾಗಿದೆ. ದೇವರು ಅವುಗಳನ್ನು **ಜಾತಿಗನುಸಾರವಾಗಿ** ಉಂಟು ಮಾಡಿದನು. ಆತನು ಹೇಗೆ ಗಿಡಗಳನ್ನ, ಮರಗಳನ್ನು, ಜಲಚರಗಳನ್ನು, ಮತ್ತು ಪಕ್ಷಿಗಳನ್ನು ವ್ಯವಸ್ಥೆಗೊಳಿಸಿದ್ದನೋ, ಹಾಗೆಯೇ ಈಗ ಆತನು ಸಕಲ ವಿಧವಾದ ಭೂಪ್ರಾಣಿಗಳನ್ನು ವಿನ್ಯಾಸಗೊಳಿಸಿದನು. ಸೃಷ್ಟಿಕರ್ತನು ಸೃಷ್ಟಿಗಾಗಿ ಮೇರೆಗಳನ್ನು ಹಾಕಿದನು ಮತ್ತು ಮಿತಿಗಳನ್ನು ನೇಮಿಸಿದನು. ಬಳಿಕ, ಸ್ವಶಾಸ್ವತೀಕರಣಗೊಳಿಸುವಂತೆ ಮಾಡುವದರಲ್ಲಿ, ಆತನು ಪ್ರತಿಯೊಂದು ವಿಧವಾದ ಗಿಡ ಹಾಗೂ ಪ್ರಾಣಿಗಳ ಜೀವಿತದಿಂದ ಸೃಷ್ಟಿಕರ್ತರನ್ನಾಗಿ ಮಾಡಿದನು. ಆತನು ತನ್ನ ಕೆಲಸವನ್ನು ನೋಡಿದಾಗ, ದೇವರು **ಅದನ್ನು ಒಳ್ಳೇದೆಂದು ನೋಡಿದನು.**

## ದೇವರ ಸ್ವರೂಪದಲ್ಲಿ ಮಾನವನ ನಿರ್ಮಾಣ (1:26-28)

**[26]ಆಮೇಲೆ ದೇವರು - ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು. [27]ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು. [28]ಇದಲ್ಲದೆ ದೇವರು ಅವರನ್ನು ಆಶೀರ್ವದಿಸಿ - ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನಮಾಡಿರಿ ಅಂದನು.**

**ವಚನ 26. ಮಾನವನ** ಸೃಷ್ಟಿಯೊಂದಿಗೆ, ಆರಂಭಗಳ ಚರಿತ್ರೆಯು ತನ್ನ ಉಚ್ಛಘಟ್ಟವನ್ನು ತಲುಪುತ್ತದೆ ಯಾಕೆಂದರೆ ದೇವರು ಆತನನ್ನು ತನ್ನ ಸ್ವಂತ **ಸ್ವರೂಪ**ದಲ್ಲಿ (צֶלֶם, *ಟ್ಸಲೆಮ*) ಮತ್ತು **ಹೋಲಿಕೆಗೆ** [דְּמוּת, *ಡೆಮೂತ್*] **ಸರಿಯಾಗಿ** ಉಂಟು ಮಾಡಿದನು. ಮನುಷ್ಯನು ಶಾರೀರಿಕ ವಿಧದಲ್ಲಿ ದೇವರಂತೆ ಇರುವದಿಲ್ಲ; ಆದರೆ ಆತನ ಸೃಷ್ಟಿಯೊಳಗೆ, ಜನರು ಆತನ ಆತ್ಮೀಕ, ಬುದ್ಧಿಯ, ಮತ್ತು ನೈತಿಕ ಗುಣಗಳಲ್ಲಿ ವಿಶಿಷ್ಟವಾಗಿ ಪಾಲುಗಾರರಾಗಿರುತ್ತಾರೆ.

**ದೇವರು** ಎಂಬುದಕ್ಕೆ ಇಬ್ರಿಯ ಪದವು (אֱלֹהִים, *'ಎಲೋಹಿಮ್)* ಬಹುವಚನ ರೂಪದಲ್ಲಿರುತ್ತದೆ. ಆದಿಕಾಂಡದ ಲೇಖಕನು, ಅನ್ಯಧರ್ಮಿಯ ಪುರಾಣಗಳಲ್ಲಿರುವ ಪ್ರಕಾರವಾಗಿ ಬಹು ದೇವರುಗಳಲ್ಲಿ ನಂಬಿಕೆಯನ್ನು ಹೊಂದಿರಲಿಲ್ಲವಾದರೂ, ಆತನು **ಮಾಡೋಣ** ಎಂಬ ಕ್ರಿಯಾಪದದ ಉತ್ತಮ ಪುರುಷ ಬಹುವಚನವನ್ನು ಬಳಸಿದನು. ನಿಸ್ಸಂದೇಹವಾಗಿ ಆತನು ಕ್ರಿಯಾಪದವು ಬಹುವಚನ ಕರ್ತೃವಾದ, "ದೇವರು" ಎಂಬುದಕ್ಕೆ ಸಂಬಂಧಿಸುವಂತೆ ಹೀಗೆ ಮಾಡಿದನು. ಹಾಗಿದ್ದಾಗ್ಯೂ, ಇದಕ್ಕಿರುವ ಕಾರಣದ ಕುರಿತು

ಬಹಳವಾಗಿ ವಿವಾದ ನಡೆದಿರುತ್ತದೆ, ವಿಶೇಷವಾಗಿ ಆದಿಕಾಂಡ 1ನೇ ಅಧ್ಯಾಯದ ಬೇರೊಂದು ಭಾಗದೊಳಗೆ *ಎಲೋಹಿಮ್*[13] ಎಂಬ ಬಹುವಚನದ ನಾಮಪದದೊಂದಿಗೆ ಏಕವಚನದ ಕ್ರಿಯಾಪದಗಳು ಬಳಸಲ್ಪಟ್ಟಿವೆ ಎಂಬುದರ ಬೆಳಕಿನಲ್ಲಿ ಇದು ವಿವಾದಕ್ಕೊಳಪಟ್ಟಿರುತ್ತದೆ.

ಒಂದು ಜನಪ್ರಿಯವಾದ ಸಲಹೆಯು ಏನೆಂದರೆ ಪ್ರಾಚೀನ ಲೇಖಕನು ದೇವರ ಗುಣಗಳು ಮತ್ತು ಶಕ್ತಿಗಳು ದೇವತ್ವದಲ್ಲಿ ಐಕ್ಯಗೊಂಡಿವೆ ಎಂಬುದಾಗಿ ಪ್ರಾಚೀನ ಜನರು ಕಲ್ಪಿಸಿಕೊಂಡಿದ್ದರೆಂಬ ಅರ್ಥದಲ್ಲಿ ಆತನ ಭವ್ಯತೆಯನ್ನು ಒತ್ತಿಹೇಳುವದಕ್ಕಾಗಿ 1:26ರಲ್ಲಿ ಬಹುವಚನಗಳನ್ನು ಬಳಸಿದನು. ಹೇಗೂ, ಮೇಲಿನ ವಾಕ್ಯಭಾಗ ಸಾಧ್ಯತೆಯನ್ನು ದಾಟಿ, ಶಾಸ್ತ್ರಗಳು ಎಲ್ಲಿಯೂ ಶಾಸನವೊಂದನ್ನು ನೀಡುವದರಲ್ಲಿ ಸಾರ್ವಭೌಮನೊಬ್ಬನು ಬಳಸಬಹುದಾದ ಬಹುವಚನದ ರೂಪವನ್ನು ಪ್ರದರ್ಶಿಸುವದಿಲ್ಲ.[14] ಅಷ್ಟುಮಾತ್ರವಲ್ಲದೆ, ಇಲ್ಲಿ ದೇವರಿಗೆ ಸಲ್ಲತಕ್ಕ ರಾಜವಂಶೀಯ ಗೌರವವನ್ನು ಎತ್ತಿ ತೋರಿಸುವದಕ್ಕಾಗಿ ಬಹುವಚನವು ಅನ್ವಯಿಸಲ್ಪಟ್ಟಿದೆ ಎಂಬ ವಿಚಾರವು ಮನವರಿಕೆಯುಂಟು ಮಾಡುವಂಥದ್ದಾಗಿರುವದಿಲ್ಲ, ಯಾಕೆಂದರೆ ವಾಕ್ಯಭಾಗವು ತಿಳಿಸುವ ಅಂಶವು ದೇವರು ಮತ್ತು ಮಾನವನ ನಡುವೆ ಇರುವ ವಿಶೇಷವಾದ ಸಂಬಂಧವೇ ಆಗಿರುತ್ತದೆ. ಇಲ್ಲಿ ಮುಖ್ಯ ಗಮನವು ಸೃಷ್ಟಿಜೀವಿಯು ತನ್ನ ಸೃಷ್ಟಿಕರ್ತನ ಸ್ವರೂಪದಲ್ಲಿ ನಿರ್ಮಿಸಲ್ಪಡುತ್ತಿರುವದೇ ಆಗಿರುತ್ತದೆ, ಹೊರತು ದೇವರ ಗುಣಗಳ ಭವ್ಯತೆಯು ಅಲ್ಲ.

ಮೇಲ್ಕಂಡ ಅಭಿಪ್ರಾಯದ ಜೊತೆಯಲ್ಲಿ, ಇತರರು ದೇವರನ್ನು ಸೂಚಿಸುವದಕ್ಕೆ ಉತ್ತಮ ಪುರುಷ ಬಹುವಚನದ (**ನಮ್ಮ**) ಬಳಕೆಯನ್ನು, ಹಳೆಯ ಒಡಂಬಡಿಕೆಯಲ್ಲಿ ತ್ರೈಯೇಕತ್ವದ ಸಿದ್ಧಾಂತಕ್ಕೆ ಪುರಾವೆಯಾಗಿ ಮುಂದಿಡುತ್ತಾರೆ. ಹೇಗೂ, ಕ್ರಿ.ಪೂ. ಎರಡನೆಯ ಶತಮಾನದ ವರೆಗೂ ಕ್ರೈಸ್ತರು ಆದಿಕಾಂಡ 1:26ನ್ನು ದೇವತ್ವದಲ್ಲಿನ ತಂದೆ, ಮಗ, ಪವಿತ್ರಾತ್ಮರನ್ನು ಸೂಚಿಸುವ ಬಹುವಚನವೆಂದು ಬಳಸುವದಕ್ಕೆ ಆರಂಭಿಸಿರಲಿಲ್ಲ. ಖಂಡಿತವಾಗಿಯೂ, ಈ ಸಿದ್ಧಾಂತಕ್ಕೆ ಹೊಸ ಒಡಂಬಡಿಕೆಯಲ್ಲಿ ಸಾಕಷ್ಟು ಪುರಾವೆಯು ಸಿಕ್ಕುತ್ತದೆ.[15] ಹಾಗಿದ್ದರೂ, ಯಾವ ಪ್ರೇರಿತ ಲೇಖಕನು ಸಹ ಸೃಷ್ಟಿಯ ಚರಿತ್ರೆಯಲ್ಲಿನ "ನಮ್ಮ" ಎಂಬ ಪದವನ್ನು ಒಬ್ಬ ತ್ರೈಯೇಕ ದೇವರನ್ನು ಸೂಚಿಸುತ್ತದೆಂಬುದಾಗಿ ಎಂದಿಗೂ ಬಳಸಲಿಲ್ಲ. ಪ್ರತಿಯಾಗಿ, ಅಂತಹ ಅರ್ಥನಿರೂಪಣೆಗೆ ಬೈಬಲಿನ ಪೂರ್ವನಿದರ್ಶನವು ಇಲ್ಲದಿರುವಾಗ, ಇದು ನಮ್ಮನ್ನು ಅಂತಹ ಹಕ್ಕೋತ್ತಾಯಗಳನ್ನು ಮಾಡುವದಕ್ಕೆ ಸಂಕೋಚ ಪಡುವಂತೆ ಮಾಡತಕ್ಕದ್ದು.

ಗಂಭೀರವಾದ ಆಲೋಚನೆಗೆ ಯೋಗ್ಯವಾಗಿರುವಂಥ 1:26ರ ಅಂತಿಮ ತಿಳುವಳಿಕೆಯು ಏನೆಂದರೆ ಸ್ವತಃ ಹಳೆಯ ಒಡಂಬಡಿಕೆಯಲ್ಲಿ ದೇವರನ್ನು ಅನೇಕ ಸಾರಿ ದೇವದೂತರ ಒಂದು ಪರಲೋಕದ ಸಮಾಲೋಚನಾ ಸಭೆಯಿಂದ ಸುತ್ತುವರೆಯಲ್ಪಟ್ಟು ಸಿಂಹಾಸನದಲ್ಲಿ ಆಸೀನನಾಗಿರುವ ಒಬ್ಬ ಮಹಾ ಅರಸನು ಎಂದು ಕರೆಯಲ್ಪಟ್ಟಿರುತ್ತಾನೆ. ಪ್ರವಾದಿಯಾದ ಮೀಕಾಯೆಹುವಿನ ಮಾತುಗಳಲ್ಲಿ ನೋಡುವದಾದರೆ, "ಯೆಹೋವನು ತನ್ನ ಸಿಂಹಾಸನದ ಮೇಲೆ ಕೂತುಕೊಂಡದ್ದನ್ನೂ ಪರಲೋಕ ಸೈನ್ಯಗಳು ಆತನ ಎಡಬಲಗಡೆಗಳಲ್ಲಿ ನಿಂತದ್ದನ್ನೂ ಕಂಡೆನು." ಬಳಿಕ ಯೆಹೋವನು ಪರಲೋಕದ ಸೈನ್ಯಕ್ಕೆ ಕರೆ ಕೊಡುವವನಾಗಿ, ಹೀಗೆ ಹೇಳಿದನು, "ಅಹಾಬನು ಹತನಾಗಿ ಬೀಳುವಂತೆ ಅವನನ್ನು ರಾಮೋತ್‌ಗಿಲ್ಯಾದಿನ ಯುದ್ಧಕ್ಕೆ ಯಾರು ಪ್ರೇರಿಸುವಿರಿ" (1 ಅರಸು 22:19, 20). ತಕ್ಷಣವೇ, ದೇವದೂರಲ್ಲೊಬ್ಬನು ಮುಂದಕ್ಕೆ ಬಂದನು ಮತ್ತು ಇಸ್ರಾಯೇಲಿನ ಉತ್ತರ ರಾಜ್ಯದ ಅರಸನಾಗಿದ್ದ ದುಷ್ಟ ಆಹಾಬನ ಮೇಲೆ ನ್ಯಾಯತೀರ್ಪನ್ನು ಬರಮಾಡುವ ಧ್ಯೇಯವನ್ನು ನಡಿಸಲು ಸ್ವಯಂ ಒಪ್ಪಿಕೊಂಡನು. ದೇವರನ್ನು ತನ್ನ ಸುತ್ತಲು ಪರಲೋಕದ ಸಮಾಲೋಚನಾ ಸಭೆಯನ್ನು ಕೂಡಿಸಿಕೊಂಡು

ಆಸೀನನಾಗಿರುವ ಸಾರ್ವಭೌಮ ಅರಸನೆಂಬಂತೆ ಚಿತ್ರಿಸುವ ಇನ್ನೊಂದು ವಾಕ್ಯಭಾಗವು ಕೀರ್ತನೆ 89:5-7. ಕೀರ್ತನೆಗಾರನು ಹೇಳಿದ್ದೇನೆಂದರೆ ಪರಲೋಕದಲ್ಲಿ "ಪರಿಶುದ್ಧರ ಸಭೆ"ಯು ಯೆಹೋವನನ್ನು ಸ್ತುತಿಸುವದು ಎಂಬುದೆ, ಮತ್ತು ಬಳಿಕ "ಪರಾಕ್ರಮಶಾಲಿಗಳ ಮಕ್ಕಳಲ್ಲಿ" ("ದೇವದೂತರಲ್ಲಿ ಯೆಹೋವನಿಗೆ ಸರಿಯಾದವರು"; NIV; NRSV) ಯಾವನೂ ಯೆಹೋವನಿಗೆ ಸಮಾನನಾಗಲಾರನು ಯಾಕೆಂದರೆ ಆತನು "ಪರಿಶುದ್ಧರ ಸಭೆಯಲ್ಲಿ ಭಯಂಕರನಾದ ದೇವರು" ಎಂದು ಘೋಷಿಸುತ್ತಾನೆ.

ಅಂತಿಮವಾಗಿ, ಯೆಶಾಯ 6:1-8 ವಚನಗಳು ದೇವರನ್ನು "ಕರ್ತನು ಉನ್ನತೋನ್ನತ ಸಿಂಹಾಸನಾರೂಢನಾಗಿರುವದನ್ನು ಕಂಡೆನು. ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿತ್ತು." ಎಂದು ಬಣ್ಣಿಸುತ್ತಾನೆ. ಆತನನ್ನು ಸ್ತುತಿಸುವದಕ್ಕೆ ಮತ್ತು ಆತನ ಚಿತ್ತವನ್ನು ಮಾಡಲು ಸಿದ್ಧರಾಗಿ ಆತನ ಸುತ್ತ ಸೆರಾಫಿಯರು (ದೇವದೂತರು) ಇದ್ದರು ಹೇಳಲಾಗಿರುತ್ತದೆ (ಯೆಶಾಯ 6:1-3, 6, 7). ಯೆಶಾಯನು ಯಾವ ಕಥನದಲ್ಲಿ ದೇವರು, "ಯಾವನು ನಮಗೋಸ್ಕರ ಹೋಗುವನು" ಎಂದು ಹೇಳುವದನ್ನು ಯೆಶಾಯನು ಕೇಳಿಸಿಕೊಂಡನೋ (ಯೆಶಾಯ 6:8), ಆ ದರ್ಶನದಲ್ಲಿನ ಯೆಹೋವನ ಪ್ರಶ್ನೆಯು ದೇವದೂತರ ಪರಲೋಕದ ಸಭೆಯನ್ನೊಳಗೊಂಡಿದ್ದು, ಅದರಲ್ಲಿ "ನಮ್ಮ" ಎಂಬ ಉತ್ತಮ ಪುರುಷ ಬಹುವಚನವು ಇರುತ್ತದೆ.

ಮೇಲ್ಕಂಡ ವಾಕ್ಯಭಾಗಗಳ ಬೆಳಕಿನಲ್ಲಿ, ಆದಿಕಾಂಡ 1:26ರನ್ನು ತ್ರೈಯೇಕತ್ವ ಸೂಚಿಸುವ ವಾಕ್ಯವೆಂದು ಅರ್ಥಮಾಡಿಕೊಳ್ಳುವದರ ಬದಲಾಗಿ, ಅದು ದೇವರನ್ನು ತನ್ನ ಪರಲೋಕದ ಸಭೆಯೊಂದಿಗೆ ಹೊಂದಿಕೆಯಾಗಿ ಕ್ರಿಯೆ ಮಾಡುತ್ತಿದ್ದಾನೆಂಬುದಾಗಿ ಚಿತ್ರಿಸುತ್ತದೆ. ಆದದರಿಂದ, ದೇವದೂತರು ಸೃಷ್ಟಿಯಲ್ಲಿ ಭಾಗಿಯಾದರು - ಸಹ-ಸೃಷ್ಟಿಕರ್ತರಾಗಿ ಅಲ್ಲ, ಆದರೆ ದೇವರು ಮಾಡುವದನ್ನೆಲ್ಲಾ ನೋಡುವವರಾಗಿ ಅದರ ನಿಮಿತ್ತ ಆತನನ್ನು ಸ್ತುತಿಸುವವರಾಗಿ ಪಾಲ್ಗೊಂಡರು. ದೇವರು ಯೋಬನಿಗೆ ಕಾವ್ಯಾತ್ಮಕ ಪ್ರಶ್ನೆಗಳನ್ನು ಕೇಳಿದ ವೇಳೆ ಈ ಜೀವಿಗಳನ್ನು ಪ್ರಸ್ತಾಪಿಸಿದನು, "ನಾನು ಲೋಕಕ್ಕೆ ಅಸ್ತಿವಾರಹಾಕಿದಾಗ ನೀನು ಎಲ್ಲಿದ್ದಿ? … ಅದರ ಮೇಲೆ ನೂಲುಹಿಡಿದವರು ಯಾರು? ಮುಂಜಾನೆ ನಕ್ಷತ್ರಗಳು ಒಟ್ಟಾಗಿ ಉತ್ಸಾಹ ಧ್ವನಿಯೆತ್ತುತ್ತಾ ದೇವಕುಮಾರರೆಲ್ಲರೂ ಆನಂದಘೋಷಮಾಡುತ್ತಾ ಇರಲು ಭೂಲೋಕದ ಸುಣ್ಣಪಾದಗಳು ಯಾವದರಲ್ಲಿ ನೆಲೆಗೊಂಡವು? ಅದರ ಮೂಲೆಗಲ್ಲನ್ನು ಹಾಕಿದವರು ಯಾರು?" (ಯೋಬ 38:4-7).[16]

**ವಚನ 27.** 26ನೇ ವಚನವು ದೇವರ ಮಾತುಗಳ ಒಂದು ಪ್ರಶ್ನೆಯಾದರೆ, 27ನೇ ವಚನವು ಲೇಖಕನ ವರದಿಯಾಗಿದೆ. ಆತನು ತಾನು ಹೇಳಲು ಬಯಸುವ ಅಂಶವನ್ನು ಒತ್ತಿ ಹೇಳುವದಕ್ಕೆ ABBA ನಮೂನೆಯೊಂದರಲ್ಲಿ ಪುನರಾವರ್ತನೆಯನ್ನು ಬಳಸಿದನು:

A1: **ದೇವರು ಮನುಷ್ಯನನ್ನು**
  B1: **ತನ್ನ ಸ್ವರೂಪದಲ್ಲಿ ಉಂಟುಮಾಡಿದನು,**
  B2: **ದೇವಸ್ವರೂಪದಲ್ಲಿ**
A2: **ಆತನನ್ನು ಉಂಟುಮಾಡಿದನು.**

ದೇವರ "ಸ್ವರೂಪ" *(ಟ್ಸೆಲೆಮ್)* ಮತ್ತು "ಹೋಲಿಕೆ" (*ಡೆಮುಥ್*; 1:26) ಇವುಗಳನ್ನು ಆತನು ಉಂಟುಮಾಡಿದ ಮಾನವರಲ್ಲಿ ಹೇಗೆ ಕಾಣಬಹುದು? ಈ ಭಾವನೆಯು ವಿವಿಧ ರೀತಿಗಳಲ್ಲಿ ಅರ್ಥಮಾಡಿಕೊಳ್ಳಲ್ಪಟ್ಟಿದೆ.

ಮೊದಲನೆಯ ಪದವಾದ *ಟ್ಸೆಲೆಮ್* ಎಂಬುದು, ಸಾಮಾನ್ಯವಾಗಿ ವಿಗ್ರಹಗಳನ್ನು ಸೂಚಿಸುತ್ತದೆ. ಈ ವಿಧವಾದ ಪ್ರತಿಮೆಗಳನ್ನು ಯೆಹೋವನ ಧರ್ಮಶಾಸ್ತ್ರದಲ್ಲಿ ಕಟ್ಟುನಿಟ್ಟಾಗಿ ನಿಷೇಧಿಸಲ್ಪಟ್ಟಿದ್ದವು[17] (ಅರಣ್ಯಕಾಂಡ 33:51, 52). ಹೇಗೂ, ಬಹುಪಾಲು ಹಳೆಯ ಒಡಂಬಡಿಕೆಯ ಇತಿಹಾಸದುದ್ದಕ್ಕೂ, ದೇವರ ಜನರು ತಮ್ಮ ಸುಳ್ಳು ದೇವರುಗಳನ್ನು ತೊಲಗಿಸಿಕೊಳ್ಳಲು ನಿರಾಕರಿಸಿದರು. ಆ ಕಾರಣದಿಂದಲೇ ದೇವರು ಯೆರೂಸಲೇಮ್ ಮತ್ತು ಯೆಹೂದಗಳಿಗೆ ಒಂದು ಅಂತ್ಯವನ್ನು ಕಟ್ಟಪ್ಪಣೆಗೊಳಿಸಿದನು, ಆತನ ವಿಗ್ರಹಾರಾಧಕ ಜನರು ಅವರ ವಿಗ್ರಹಗಳ ಸಮೇತವಾಗಿ ನಾಶಗೊಳ್ಳುವಂತೆ ಅನುಮತಿಸಿದನು (ಯೆಹೆಜ್ಕೇಲ 7:3, 20, 24–27).

ಆದಿಕಾಂಡ 5:3 ಶಾರೀರಕ ತದ್ರೂಪತೆಯ ಬೇರೊಂದು ಅರ್ಥದಲ್ಲಿ *ಟ್ಸೆಲೆಮ್* ("ಸ್ವರೂಪ") ಎಂಬ ಪದವನ್ನು ಬಳಸುತ್ತದೆ, ಮತ್ತು ಅದು 1:26ರಲ್ಲಿ ಕಂಡು ಬರುವ *ಡೆಮುಥ್* ("ಹೋಲಿಕೆ") ಎಂಬ ಪದವನ್ನು ಸಹ ಒಳಗೊಂಡಿರುತ್ತದೆ. ಆದಾಮನ ಸಂತತಿಯವರ ಕುರಿತು ಚರ್ಚಿಸುವ ವೇಳೆ, ಲೇಖಕನು ಹೀಗೆ ಹೇಳಿದನು, "ಆದಾಮನು ನೂರಮೂವತ್ತು ವರುಷದವನಾದಾಗ ರೂಪದಲ್ಲಿ ತನ್ನ ಹೋಲಿಕೆಗೆ *[ಡೆಮುಥ್]* ಸರಿಯಾದ ಮಗನನ್ನು ಪಡೆದು ಅವನಿಗೆ ಸೇತನೆಂದು ಹೆಸರಿಟ್ಟನು" (5:3). ಈ ಹೇಳಿಕೆಯ ಅತ್ಯಂಥ ಸ್ವಾಭಾವಿಕ ಅರ್ಥವು ತಂದೆ ಮತ್ತು ಮಗನ ಶಾರೀರಿಕ ರೂಪದಲ್ಲಿ ಕಣ್ಸೆಳೆಯುವಂತಹ ಸಾಮ್ಯತೆಯು ಇತ್ತು ಎಂಬುದೆ. *ಟ್ಸೆಲೆಮ್* ಮತ್ತು *ಡೆಮುಥ್* ಎಂಬ ಎರಡೂ ಪದಗಳು ತಂದೆಯಂತೆಯೇ ಮಗನು ತದ್ರೂಪತೆಯನ್ನು ಹೊಂದಿದ್ದನು ಎಂಬ ವಿಚಾರವನ್ನು ತಿಳಿಸುವದಕ್ಕೆ ಬಳಸಲ್ಪಟ್ಟಿರುತ್ತವೆ.

ಬೇರೆ ವಾಕ್ಯಭಾಗಗಳಲ್ಲಿ, *ಟ್ಸೆಲೆಮ್* ಒಂದು ಬಲವಾದ ಅರ್ಥವನ್ನು ಹೊಂದಿರುವದಿಲ್ಲ, ಆದರೆ ಸ್ವಭಾವದಲ್ಲಿ ಹೆಚ್ಚು ಆತ್ಮೀಕವಾಗಿರುವಂಥದ್ದನ್ನು ಸೂಚಿಸುತ್ತದೆ. ಒಬ್ಬ ಕೀರ್ತನೆಗಾರನು, ಜೀವನದ ಸಂಕ್ಷಿಪ್ತಕಾಲವನ್ನು ಕುರಿತು ವ್ಯಾಖ್ಯಾನಿಸುತ್ತಾ, ದೇವರ ದೃಷ್ಟಿಯಲ್ಲಿ ಜೀವನ-ಕಾಲವು ಏನೂ ಅಲ್ಲ ಎಂಬುದಕ್ಕಾಗಿ ಪ್ರಲಾಪಿಸಿದನು:

> ಮನುಷ್ಯನೆಂಬವನು ಎಷ್ಟು ಸ್ಥಿರನೆಂದು ಕಂಡರೂ ಬರೀ ಉಸಿರೇ [הֶבֶל, *ಹೆಬೆಲ*]. ಸೆಲಾ. ನರರು ನಿಜವಲ್ಲದ ಮಾಯಾರೂಪದಿಂದ *[ಟ್ಸೆಲೆಮ್]* ಸಂಚರಿಸುವವರು; ಅವರು ಸುಮ್ಮ ಸುಮ್ಮನೆ [*ಹೆಬೆಲ*] ಗಡಿಬಿಡಿಮಾಡುವವರು; ಆಸ್ತಿಯನ್ನು ಕೂಡಿಸಿಟ್ಟುಕೊಳ್ಳುತ್ತಾರೆ, ಆದರೆ ಅದು ಯಾರ ಪಾಲಾಗುವದೋ ತಾವೇ ತಿಳಿಯರು (ಕೀರ್ತನೆ 39:5, 6).

ಕೀರ್ತನೆ 39ರಲ್ಲಿ, "ನಿಜವಲ್ಲದ ಮಾಯಾರೂಪ" ಎಂದು ಅನುವಾದಿಸಲ್ಪಟ್ಟಿರುವ, *ಟ್ಸೆಲೆಮ್* ಎಂಬುದು *ಹೆಬೆಲ*ಗೆ ಸಮಾನಾರ್ಥವುಳ್ಳದ್ದಾಗಿದೆ ಎಂಬುದು ಸ್ಪಷ್ಟವಾಗಿರುತ್ತದೆ, ಇದು "ಉಸಿರು" ಮತ್ತು "ಸುಮ್ಮಸುಮ್ಮನೆ" ಎಂದು ಅನುವಾದಿಸಲ್ಪಟ್ಟಿದೆ. ಎರಡೂ ಪದಗಳು ಶಾರೀರಿಕವಲ್ಲದ ಸಂಗತಿಯನ್ನು ಸೂಚಿಸುತ್ತವೆ.

ಅದೇ ರೀತಿಯಲ್ಲಿಯೇ, ಕೀರ್ತನೆ 73:20ರಲ್ಲಿ, ಒಬ್ಬ ಕೀರ್ತನೆಗಾರನು ದುಷ್ಟನನ್ನು "ಎಚ್ಚರವಾದವನು ಕನಸನ್ನು [חֲלוֹם, *ಚಾಲೊಮ*]" ಕಾಣುವ ಹಾಗೆ ಎಂದು ಹೋಲಿಸುತ್ತಾನೆ ಮತ್ತು ದೇವರು "ಅವರನ್ನು ಮಾಯಾರೂಪರೆಂದು *[ಟ್ಸೆಲೆಮ್]* ಭಾವಿಸುತ್ತಾನೆ." ಇಲ್ಲಿ, "ಕನಸು" (*ಚೊಲೆಮ*) ಎಂಬುದು "ರೂಪ" *(ಟ್ಸೆಲೆಮ್)* ಎಂಬುದಕ್ಕೆ ಸಮಾನಾರ್ಥವುಳ್ಳದ್ದಾಗಿದೆ, ಇದು "ಮಾಯಾರೂಪ" (NRSV) ಮತ್ತು "ಕಲ್ಪನೆಗಳು" (NIV) ಎಂದು ಅನುವಾದಿಸಲ್ಪಟ್ಟಿದೆ. ಇದು ಸೂಚಿಸುವದೇನೆಂದರೆ, ಕನಿಷ್ಠ ಕೆಲವೊಂದು ವಾಕ್ಯಗಳಲ್ಲಿ, *ಟ್ಸೆಲೆಮ್* ಎಂಬುದು ಅಭೌತಿಕವಾದದ್ದನ್ನು ಅಥವಾ ಅಮೂರ್ತವಾದದ್ದನ್ನು ಸೂಚಿಸುತ್ತದೆ, ಯಾವದೇ

ಸಾರಭೂತವಾದ ರೂಪವಿಲ್ಲದ್ದು, ಆದರೆ ಸ್ವಭಾವದಲ್ಲಿ ಆತ್ಮೀಕವಾಗಿರುವಂತದ್ದು.

ಮಾನವನಲ್ಲಿರುವ ದೇವರ ಸ್ವರೂಪವನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿರುವ ಇನ್ನೊಂದು ಪದವು "ಹೋಲಿಕೆ" (*ಡೆಮುಥ್*; 1:26). ಇದು ಸಹ ಶಾರೀರಿಕ ತದ್ರೂಪತೆ ಎಂಬ ವಿಚಾರವನ್ನೊಳಗೊಂಡಿದೆ. ಇದು ಯೆಶಾಯ 40:18, 19ರಲ್ಲಿ ಒಂದು ಪ್ರಶ್ನೆಯೊಳಗೆ ಕಂಡು ಬರುತ್ತದೆ, ಅಲ್ಲಿ ದೇವರು ಪರಲೋಕದಲ್ಲಾಗಲಿ ಅಥವಾ ಭೂಮಿಯಲ್ಲಾಗಲಿ ಯಾದನ್ನೂ ತನ್ನೊಂದಿಗೆ ಹೋಲಿಕೆ ಮಾಡುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ಆತನು ದೃಢವಾಗಿ ಹೇಳಿದನು. ಈ ಸನ್ನಿವೇಶದಲ್ಲಿ, דָּמָה *(ಡಮಾಹ)* ಎಂಬ ಕ್ರಿಯಾಪದ ಮತ್ತು ಅದೇ ಮೂಲಪದದಿಂದ (ಡೆಮುಥ್) ತೆಗೆದುಕೊಳ್ಳಲಾಗಿರುವ ನಾಮಪದ ರೂಪ ಇವೆರಡೂ ಕ್ರಮಾನುಸಾರವಾಗಿ ಕಾಣಿಸಿಕೊಳ್ಳುತ್ತವೆ:

> ಹೀಗಿರಲು ದೇವರನ್ನು ಯಾರಿಗೆ ಹೋಲಿಸೀರಿ *[ಡಮಾಹ]?* ಯಾವ ರೂಪವನ್ನು *[ಡೆಮುಥ್]* ಆತನಿಗೆ ಸಮಮಾಡೀರಿ? ವಿಗ್ರಹವಾದರೋ ಶಿಲ್ಪಿಯು ಅದನ್ನು ಎರಕಹೊಯ್ಯುವನು, ಅಕ್ಕಸಾಲಿಗನು ಅದಕ್ಕೆ ಚಿನ್ನದ ಕವಚವನ್ನು ಬಡಿದು ಬೆಳ್ಳಿಯ ಸರಪಣಿಗಳನ್ನು ಮಾಡುವನು.

ಸರಳವಾಗಿ ಹೇಳುವದಾದರೆ, ಮನುಷ್ಯನಿಂದ ರಚಿಸಲ್ಪಟ್ಟಿರುವ ಯಾವ ಪ್ರತಿಮೆ ಅಥವಾ ಸ್ವರೂಪವಾಗಲಿ ದೇವರ ನಿಜಸ್ವಭಾವವನ್ನು ತಿಳಿಸುವದಕ್ಕೆ ಸಾಧ್ಯವಿಲ್ಲ.

ದಶಾಜ್ಞೆಗಳಲ್ಲಿ, ದೇವರ ಯಾವ ಕೆತ್ತಿದ ಪ್ರತಿಮೆಯನ್ನಾಗಿ ಮಾಡಬಾರದೆಂದು ಅಥವಾ ಆಕಾಶದಲ್ಲಾಗಲು ಭೂಮಿಯಲ್ಲಾಗಲಿ ಇರುವ ಯಾವ ಶಾರೀರಿಕ ರೂಪದಿಂದ ಸಹ ಆತನನ್ನು ಚಿತ್ರಿಸುವದಕ್ಕೆ ಪ್ರಯತ್ನಿಸಬಾರದೆಂದು ಇಸ್ರಾಯೇಲ್ಯರಿಗೆ ನಿಷೇಧಿಸಲಾಗಿತ್ತು (ವಿಮೋಚನಕಾಂಡ 20:3-5; ಧರ್ಮೋಪದೇಶಕಾಂಡ 5:7-9). ಇಸ್ರಾಯೇಲ್ಯರು ವಾಗ್ದಾನ ದೇಶದೊಳಗೆ ಪ್ರವೇಶಿಸುವ ಮುನ್ನ, ಇದರ ಬಗ್ಗೆ ಎಚ್ಚರದಿಂದಿರಬೇಕೆಂದು ಮೋಶೆಯು ಅವರನ್ನು ಪ್ರಭೋದಿಸಿದನು: "ಹೋರೇಬಿನಲ್ಲಿ ಯೆಹೋವನು ಬೆಂಕಿಯ ಜ್ವಾಲೆಯೊಳಗಿಂದ ನಿಮ್ಮ ಸಂಗಡ ಮಾತಾಡಿದಾಗ ನಿಮಗೆ ಯಾವ *ಆಕಾರವೂ* ಕಾಣಿಸಲಿಲ್ಲವಷ್ಟೆ. ಆದದರಿಂದ ನೀವು ನಿಮ್ಮ ನಿಮ್ಮ ಮನಸ್ಸುಗಳನ್ನು ಬಹು ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು" (ಧರ್ಮೋಪದೇಶಕಾಂಡ 4:15; ಒತ್ತಿ ಹೇಳಿದ್ದು ನನ್ನದು). ಅವರು ಮನುಷ್ಯರ ರೂಪದಲ್ಲಾಗಲಿ (ಪುರುಷ ಅಥವಾ ಸ್ತ್ರೀ), ಪ್ರಾಣಿಗಳ (ಮೃಗಗಳು, ಹರಿದಾಡುವ ಸಂಗತಿಗಳು, ಪಕ್ಷಿಗಳು, ಅಥವಾ ಮೀನುಗಳು) ರೂಪವನ್ನಾಗಲಿ, ಅಥವಾ ಆಕಾಶಕಾಯಗಳ ರೂಪವನ್ನಾಗಲಿ (ಸೂರ್ಯ, ಚಂದ್ರ, ಅಥವಾ ನಕ್ಷತ್ರಗಳು) ಮಾಡಿಕೊಳ್ಳಬಾರದಿತ್ತು (ಧರ್ಮೋಪದೇಶಕಾಂಡ 4:16-19).

ಹಾಗಿದ್ದರೂ, ದೇವರು ಅನೇಕ ಸಾರಿ ಸಿಂಹಾಸನದ ಮೇಲೆ ಆಸೀನನಾಗಿರುವ ಅರಸನಾಗಿ (ಯೆಶಾಯ 6:1) ಕೈಗಳನ್ನು (ಕೀರ್ತನೆ 10:12, 14), ಪಾದಗಳನ್ನು (ಯೆಶಾಯ 60:13), ಮುಖ, ಕಣ್ಣುಗಳು, ಮತ್ತು ಕಿವಿಗಳನ್ನು ಹೊಂದಿರುವವನೆಂದು (ಕೀರ್ತನೆ 34:15, 16) ಬಣ್ಣಿಸಲ್ಪಟ್ಟಿದ್ದಾನೆ. ಮನುಷ್ಯನು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟಿದ್ದಾನೆಂಬ ಅರ್ಥ ಬರುವಂತೆ ಈ ಪದಗುಚ್ಛಗಳನ್ನು ವ್ಯಾಖ್ಯಾನಿಸಲಾಗಿರುತ್ತದೆ; ಆದರೆ ಅವುಗಳು ದೇವರ ಕುರಿತಾದ ಸಾಂಕೇತಿಕ ಬಣ್ಣನೆಗಳಾಗಿದ್ದು ಅವುಗಳನ್ನು ಅಕ್ಷರಶಃವಾಗಿ ಭಾವಿಸಿಕೊಳ್ಳಕೂಡದು. ಅಂತಹ ಒಂದು ಅರ್ಥನಿರೂಪಣೆಯು ದೇವರ ಸ್ವಭಾವವದ ಕುರಿತು ಮೂಲಭೂತವಾಗಿ ಅಪಾರ್ಥಮಾಡಿಕೊಂಡಂತಾಗಿರುತ್ತದೆ, ಆತನು ಆತ್ಮನಾಗಿದ್ದಾನೆಯೇ ಹೊರತು ಶರೀರಲ್ಲ

(ಯೋಹಾನ 4:24; ನೋಡಿರಿ ಲೂಕ 24:39). ಈ ಕಾರಣದಿಂದಲೇ ಒಬ್ಬ ಕೀರ್ತನೆಗಾರನು ಹೀಗೆ ಬರೆದನು, "ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ? ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ? ಮೇಲಣ ಲೋಕಕ್ಕೆ ಏರಿಹೋದರೆ ಅಲ್ಲಿ ನೀನಿರುತ್ತೀ; ಪಾತಾಳಕ್ಕೆ ಹೋಗಿ ಮಲಗಿಕೊಂಡೇನಂದರೆ ಅಲ್ಲಿಯೂ ನೀನಿರುವಿ" (ಕೀರ್ತನೆ 139:7, 8).

ದೇವರ ಆತ್ಮೀಕ ಸ್ವಭಾವವು ಮನುಷ್ಯನ ಶಾರೀರಿಕ ಸ್ವಭಾವಕ್ಕೆ ತದ್ವಿರುದ್ಧವಾಗಿ ನಿಲ್ಲುತ್ತದೆ. "ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು" ಎಂಬ ಹೇಳಿಕೆಯು ದೇವರ ಆತ್ಮೀಕ ಸ್ವಭಾವವನ್ನು (ಮಾನವನಲ್ಲಿ ಪ್ರತಿಕೃತಿಯಾಗಿರುತ್ತದೆ) ಸೂಚಿಸುತ್ತದೆ, ಆದರೆ **ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು** ಎಂಬುದು ಮಾನವನ ಶಾರೀರಿಕ ಸ್ವಭಾವವನ್ನು ಕುರಿತು ಒತ್ತಿ ಹೇಳುತ್ತದೆ. ಈ ವಾಕ್ಯಭಾಗದಲ್ಲಿ "ಮನುಷ್ಯ" ಎಂಬುದಕ್ಕಿರುವ ಪದವು אָדָם (*ಆದಾಮ*), ಇದು "ಮಾನವ ಜನಾಂಗ" ಎಂಬ ಅರ್ಥವಿರುವಂಥ ಇಬ್ರಿಯ ಜೈವಿಕ ಪದ ಬಳಕೆಯಾಗಿರುತ್ತದೆ ಮತ್ತು ಅನಂತರದಲ್ಲಿ "ಆದಾಮ" ಎಂಬ ವೈಯಕ್ತಿಕ ಹೆಸರಾಗಿ ಮಾರ್ಪಟ್ಟಿತು (2:20; 3:17, 21). ಹೇಗೂ, ಇಲ್ಲಿ, ಮಾತ್ರವಲ್ಲದೆ ಆದಿಕಾಂಡ 5:1, 2ರಲ್ಲಿ ಸಹ, *ಆದಾಮ* ಎಂಬುದು ಮೂಲತಃ "ಗಂಡುಹೆಣ್ಣು" ಎಂಬುದನ್ನು ಒಳಗೊಂಡಿತ್ತು, ಯಾಕೆಂದರೆ ಇಬ್ಬರೂ ದೇವರು ಸ್ವರೂಪ ಮತ್ತು ಹೋಲಿಕೆಯಲ್ಲಿ ಸೃಷ್ಟಿಸಲ್ಪಟ್ಟಿದ್ದರು. ಪುರುಷ ಮತ್ತು ಸ್ತ್ರೀಯರು ದೈಹಿಕವಾಗಿ ಮತ್ತು ಲೈಂಗಿಕವಾಗಿ ಒಬ್ಬರಿಗಿಂತ ಒಬ್ಬರು ಭಿನ್ನವಾಗಿದ್ದಾರಾದ್ದರಿಂದ, ಗಂಡುಹೆಣ್ಣಿನಲ್ಲಿರುವ (*ಆದಾಮ*, "ಮಾನವಜನಾಂಗ") ದೇವರ ಸ್ವರೂಪ ಎಂಬುದು ಶಾರೀರಿಕ ಸ್ವಭಾವ ಅಥವಾ ರೂಪಕ್ಕಿಂತಲೂ ಬೇರೆಯಾದ ಸಂಗತಿಯೊಂದನ್ನು ಸೂಚಿಸತಕ್ಕದ್ದಾಗಿದೆ. ಬದಲಾಗಿ, ಅದು ದೇವರು ಉಂಟು ಮಾಡಿದ ಬೇರೆ ಎಲ್ಲಾ ಜೀವಿಗಳಿಗೆ ತದ್ವಿರುದ್ಧವಾಗಿ, ಮಾನವನು ಮಾತ್ರವೇ ತನ್ನ ಸೃಷ್ಟಿಕರ್ತನೊಂದಿಗೆ ಪಾಲುಗಾರನಾಗಿರುವ ನೈತಿಕವಾದ ಸೂಕ್ಷ್ಮ ಸಂವೇದನೆ, ಒಂದು ಆತ್ಮೀಕ ಜೀವಿತ, ಮತ್ತು ಬುದ್ಧಿಯ ಗುಣಗಳನ್ನು ಸೂಚಿಸುತ್ತದೆ.

**ವಚನ 28. ದೇವರು** ಮಾನವನನ್ನು ಆತನ ಸ್ವರೂಪದಲ್ಲಿ ಗಂಡುಹೆಣ್ಣಾಗಿ ನಿರ್ಮಿಸಿದ ವೇಳೆ, ಆತನು **ಅವರನ್ನು ಆಶೀರ್ವದಿಸಿದನು** ಮತ್ತು **ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ** ಎಂದು ಆದೇಶಿಸಿದನು. ಈ ಕೃತ್ಯದಲ್ಲಿ, ದೇವರು ಮಾನವರ ಮೇಲೆ ತನ್ನ ಆಶೀರ್ವಾದವನ್ನು ಸುರಿಸಿದ್ದು ಮಾತ್ರವೇ ಅಲ್ಲ, ಆದರೆ ಆತನು ಅವರಿಗೆ ಸಂತಾನಾಭಿವೃದ್ಧಿಗೊಂಡು ಭೂಮಿಯನ್ನು ತುಂಬಿಕೊಳ್ಳುವ ಮೂಲಕ ತಮ್ಮ ಸಾಮರ್ಥ್ಯವನ್ನು ನೆರವೇರಿಸುವಂತೆ ಶಕ್ತಿಯನ್ನು ಸಹ ಕೊಟ್ಟನು, 1:22ರಲ್ಲಿ ಪಕ್ಷಿಗಳಿಗೂ ಜಲಚರಿಗಳಿಗೂ ಅದೇ ರೀತಿಯಾಗಿ ಆಶೀವರ್ದಿಸಿದ್ದನು. ಸಂತಾನೋತ್ಪತ್ತಿಯನ್ನೊಳಗೊಂಡ, ಲೈಂಗಿಕ ಸಾಮಿಪ್ಯವನ್ನು ಗಂಡು ಮತ್ತು ಹೆಣ್ಣಿಗೆ ಅನುಗ್ರಹಿಸಿದ್ದು ಒಂದು ಆಕಸ್ಮಿಕವಾಗಲಿ ಅಥವಾ ಕೇವಲ ಒಂದು ಜೀವವಿಜ್ಞಾನದ ವಿದ್ಯಾಮಾನವಾಗಲಿ ಆಗಿರುವದಿಲ್ಲ. ಅಲ್ಲದೆ ಅದು ಏದೆನ್ ತೋಟದಲ್ಲಿ ಪಾಪಕ್ಕೆ ನಡಿಸಿದ ಸಂಗತಿಯಾಗಲಿ ಅಥವಾ ಪಾಪಕ್ಕೆ ದಂಡನೆಯ ರೂಪದಲ್ಲಿ ಬಂದ ಸಂಗತಿಯಾಗಲಿ ಸಹ ಆಗಿರುವದಿಲ್ಲ.

ಮಾನವರಲ್ಲಿ ದೇವರು ನಿರ್ಮಿಸಿರುವ ಕಾಮಪ್ರಚೋದನೆಯನ್ನು ಆತ್ಮೀಕವಲ್ಲದ್ದು, ತುಚ್ಛವಾದದ್ದು, ಅಥವಾ ಕೆಟ್ಟದ್ದು ಎಂದು ಚಿತ್ರಿಸುವದಕ್ಕೆ ಮಾಡಲ್ಪಡುವ ಯಾವದೇ ಪ್ರಯತ್ನವು ಬೈಬಲಿನ ಉಪದೇಶಕ್ಕೆ ವಿರುದ್ಧವಾಗಿರುತ್ತದೆ. ಅದು ತಾನು ಸೃಷ್ಟಿಸಿದ್ದೆಲ್ಲವನ್ನು ಕುರಿತು ಅವಲೋಕಿಸುವ ವೇಳೆ ದೇವರು "ಬಹು ಒಳ್ಳೇದು" (1:31) ಎಂದು ಘೋಷಿಸಿದ ಆತನ ಸೃಷ್ಟಿಯ ಭಾಗವಾಗಿರುತ್ತದೆ. ಯಾವುದು ಪಾಪಕರವೋ ಅದು ಕಾಮ ಅಲ್ಲ, ಆದರೆ ಅದರ

ದುರುಪಯೋಗವೇ ಆಗಿರುತ್ತದೆ; ಮತ್ತು ಒಬ್ಬ ವ್ಯಕ್ತಿಯ ತನ್ನ ಮತ್ತೊಬ್ಬ ಸಂಗಾತಿಯನ್ನು ತನ್ನ ಸ್ವಾರ್ಥ ಕಾಮಾಭಿಲಾಷೆಯನ್ನು ತೀರಿಸಿಕೊಳ್ಳಲು ಒಂದು ಕಾಮದ ವಸ್ತುವಾಗಿ ಬಳಸಿಕೊಳ್ಳುವಾಗ, ದಾಂಪತ್ಯದಲ್ಲಿಯೂ ಇದು ಸತ್ಯವಾಗಿರಬಲ್ಲದು. ಲೈಂಗಿಕ ಗುರುತು ಮತ್ತು ಅದರ ಕ್ರಿಯೆಯು ದೇವರ ಸ್ವಭಾವ ಅಥವಾ ಕೆಲಸದ ಭಾಗಗಳಾಗಿರುವದಿಲ್ಲವಾದರೂ, ಸಂತಾನೋತ್ಪತ್ತಿಯು ದಾಂಪತ್ಯದ ದೈವಿಕ ಉದ್ದೇಶವಾಗಿ ಮತ್ತು ತನ್ನ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟ ಪುರುಷ ಮತ್ತು ಸ್ತ್ರೀಯರ ವಿಷಯದಲ್ಲಿ ದೇವರ ಚಿತ್ತವಾಗಿ ಒಂದು ಸಕಾರಾತ್ಮಕ ವಿಧದಲ್ಲಿ ಮುಂದಿಡಲ್ಪಟ್ಟಿರುತ್ತದೆ.

"ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು" ಇರಿ ಎಂಬ ದೇವರ ಆಜ್ಞೆಯು ಪ್ರಾಚೀನ ಫಲವತ್ತತೆಯ ಪಾಷಂಡಮತಗಳಿಗೆ ಸ್ಪಷ್ಟವಾಗಿ ತದ್ವಿರುದ್ಧವಾಗಿರುತ್ತದೆ. ಈ ಭ್ರಷ್ಟಗೊಂಡ ಧಾರ್ಮಿಕ ಆಚಾರಗಳು, ಕೀಳುಮಟ್ಟಕ್ಕೀಳಿಸುವಂತಹ ವೇಶ್ಯಾವಾಟಿಕೆಯ ಕೃತ್ಯಗಳನ್ನೊಳಗೊಂಡವುಗಳಾಗಿ, ಮಾನವರಲ್ಲಿ, ಪ್ರಾಣಿಗಳಲ್ಲಿ, ಮತ್ತು ಬೆಳೆಗಳೊಳಗೆ ಫಲವತ್ತತೆಯನ್ನು ತರುವದಕ್ಕಾಗಿ ದೇವರುಗಳನ್ನು ಸಂಭೋಗ ನಡಿಸುವಂತೆ ಪ್ರೋತ್ಸಾಹಿಸುವವುಗಳಾಗಿದ್ದವು. ದೇವರು ಆದೇಶಿಸಿದ್ದು ಮತ್ತು ಆಶೀರ್ವದಿಸಿದ್ದು ಅಂತಹ ಪಾಷಂಡ ಮತಗಳಲ್ಲಿ ಪಾಲ್ಗೊಳ್ಳುವದನ್ನು ಅನಾವಶ್ಯಕಗೊಳಿಸಿದ್ದು ಮಾತ್ರವೇ ಅಲ್ಲ, ಆದರೆ ಏಕ ಸತ್ಯ ಸೃಷ್ಟಿಕರ್ತನು ಮತ್ತು ಜೀವವನ್ನು ಪೋಷಣೆ ಮಾಡುವಾತನಿಂದ ವಿಮುಖರಾಗಿ ಮನುಷ್ಯನಲ್ಲಿರುವ ದೇವರ ಸ್ವರೂಪಕ್ಕೆ ಕಳಂಕ ತರುವಂತೆ ಕೀಳಾದ ವಿಗ್ರಹಾರಾಧನೆಯ ಆಚಾರಗಳ ಕಡೆಗೆ ತಿರುಗಿಕೊಳ್ಳುವಂತಹ ಅಂತಿಮವಾದ ಅಪನಂಬಿಕೆ ಮತ್ತು ಪಾಪಗಳನ್ನು ಸಹ ಅನಾವಶ್ಯಕಗೊಳಿಸಿತ್ತು. ಅಂತಹ ತುಚ್ಛವಾದ ಆಚಾರಗಳಿಗೆ ತದ್ವಿರುದ್ಧವಾಗಿ, ಒಬ್ಬ ಪುರುಷ ಮತ್ತು ಸ್ತ್ರೀಯ ನಡುವಿನ ಮದುವೆಯು ಆರಂಭದಿಂದಲೇ ದೇವರು ಮಾನವರಿಗೆ ನೀಡಿದ ವರದಾನವಾಗಿತ್ತು; ಮತ್ತು ಅದು ಅವರಿಗೆ ಮತ್ತು ಅವರ ತಲೆಮಾರಿನವರಿಗೆ ಒಂದು ವಿಶೇಷವಾದ ಆಶೀರ್ವಾದವಾಗಿ ಬಂದಿಯು.

ಆಶೀರ್ವಾದದ ಭಾವನೆಯನ್ನು ಹಗುರವಾಗಿ ಪರಿಗಣಿಸಿಕೊಳ್ಳಕೂಡದು. ಇದು ಆದಿಕಾಂಡ ಮುಖ್ಯ ಚರ್ಚೆಯಾಂಶಗಳಲ್ಲೊಂದು ಆಗಿರುತ್ತದೆ. ಪ್ರಾಥಮಿಕವಾಗಿ, ಆಶೀರ್ವಾದವು ತಲೆಮಾರಿಗೆ ಸಂಬಂಧಿಸಿದ್ದಾಗಿತ್ತು, ಭೂಮಿಯನ್ನು ತುಂಬಿಕೊಳ್ಳುವ ಸಂತಾನೋತ್ಪತ್ತಿಗೆ ಸಂಬಂಧಿಸಿದ್ದಾಗಿತ್ತು; ಆದರೆ ಈಗಾಗಲೇ ಮಾನವನ "ಸಂತಾನ" ಆಶೀರ್ವಾದದೊಂದಿಗೆ ಜೋಡಿಸಲ್ಪಟ್ಟಿತ್ತು. ಪ್ರತಿಯಾಗಿ, ಈ ಭಾವನೆಯು ಆದಿಕಾಂಡದ ಪುಸ್ತಕದ ಉಳಿದ ಭಾಗದುದ್ದಕ್ಕೂ ಕಥಾನಿರೂಪಣೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರುತ್ತದೆ. ಹಲವಾರು ವ್ಯಕ್ತಿಗಳಿಗೆ ಆಶೀರ್ವಾದವು ಕೊಡಲ್ಪಟ್ಟಿತು - ಅವರಿಗೋಸ್ಕರ ಮಾತ್ರವೇ ಅಲ್ಲ, ಆದರೆ ಬದಲಾಗಿ ಇಡೀ ಲೋಕಕ್ಕಾಗಿ ದೇವರ ಒಳ್ಳೇ ದಾನಗಳ ಕಾಲುವೆಯಾಗಿ ಇರುವದಕ್ಕಾಗಿಯೇ ಆಗಿತ್ತು.

ಸಂತಾನೋತ್ಪತ್ತಿಯ ಮೂಲಕವಾಗಿ ಭೂಮಿಯನ್ನು ತುಂಬಿಕೊಳ್ಳುವದರ ಜೊತೆಗೆ, ಪುರುಷ ಮತ್ತು ಸ್ತ್ರೀಯರಿಗೆ ದೇವರು ನೀಡಿದ ಎರಡನೆಯ ಆದೇಶವು **ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನಮಾಡಿರಿ** ಎಂಬುದಾಗಿತ್ತು (ನೋಡಿರಿ 1:26). "ವಶಪಡಿಸಿಕೊಳ್ಳಿರಿ" ಎಂಬುದನ್ನು ಅನುವಾದಿಸಿರುವ ಮೊದಲನೆಯ ಪದವು כָּבַשׁ *(ಕಬಾಶ್)* ಎಂಬುದು, ಅದು ಭೂಮಿಯನ್ನು ಸೂಚಿಸುತ್ತದೆ ಮತ್ತು ನಡೆಯಬೇಕಾಗಿದ್ದ

ವಶಪಡಿಸಿಕೊಳ್ಳುವಿಕೆಯಲ್ಲಿ ಶಕ್ತಿ ಮತ್ತು ವಿರೋಧಗಳು ಅಡಕವಾಗಿರುತ್ತವೆಂಬುದನ್ನು ತಿಳಿಸುತ್ತದೆ.[18]

*ಕಬಾಶ್* ಎಂಬುದು ಈ ವಿಧದಲ್ಲಿ ಬೈಬಲಿನ ಹಲವಾರು ವಾಕ್ಯಭಾಗಗಳಲ್ಲಿ ಬಳಸಲ್ಪಟ್ಟಿದೆ. ಉದಾಹರಣೆಗೆ, ತನ್ನ ಹೆಂಡತಿಯಾದ ರಾಣಿ ಎಸ್ತೇರಳ ಮೇಲೆ ಹಾಮಾನನು ದಾಳಿಯನ್ನು (ಅತ್ಯಾಚಾರ) ಮಾಡಲಿದ್ದಾನೆಂಬುದಾಗಿ ಅಹಷ್ವೇರೋಷ್ ಅರಸನು ಭಾವಿಸಿದನು (ಎಸ್ತೇರಳು 7:8). ಈ ಪದವು ಮಿಲಿಟರಿ ಜಯವನ್ನು ಮತ್ತು ಕಾನಾನ್ಯರ ಪಟ್ಟಣಗಳನ್ನು ಅಧೀನಪಡಿಸಿಕೊಳ್ಳುವದನ್ನು ಸಹ ಸೂಚಿಸುತ್ತದೆ (ಅರಣ್ಯಕಾಂಡ 32:22; ಯೆಹೋಶುವ 18:1). ಅದರ ಜೊತೆಗೆ, ಅದು ದಾಸತ್ವಕ್ಕೊಳಪಡಿಸಲ್ಪಡುತ್ತಿದ್ದ ಯೆಹೂದಿ ಜನರನ್ನು ಬಣ್ಣಿಸುತ್ತದೆ (2 ಪೂರ್ವಕಾಲವೃತ್ತಾಂತ 28:10; ನೆಹಮೀಯ 5:5; ಯೆರೆಮೀಯ 34:11).

*ಕಬಾಶ್* ಕ್ರಿಯಾಪದವು ಕೆಲವು ಸಾರಿ ಮಾನವ ಸಂಬಂಧಗಳಲ್ಲಿ ಒತ್ತಾಯಗೊಳಿಸುವಿಕೆಯನ್ನು ಒಳಗೊಂಡಿರುತ್ತದೆಯಾದರೂ, ಆದಿಕಾಂಡ 1ನೇ ಅಧ್ಯಾಯದ ಸನ್ನಿವೇಶವು ಜನರನ್ನು ಸ್ವಾಧೀನಪಡಿಸಿಕೊಳ್ಳುವದನ್ನಲ್ಲ, ಆದರೆ ದೇಶವನ್ನು ಸ್ವಾಧೀನಪಡಿಸಿಕೊಳ್ಳುವದನ್ನು ಒಳಗೊಂಡಿದೆ. ಆದಿಕಾಂಡ 1:28ರಲ್ಲಿನ ಸೂಚ್ಯಾರ್ಥವು ಭೂಮಿಯು ಮನುಷ್ಯನ ಚಿತ್ತಕ್ಕೆ ಸುಲಭವಾಗಿ ಪ್ರತಿಕ್ರಿಯಿಸುವದಿಲ್ಲ ಎಂಬಂತೆ ಕಾಣಿಸುತ್ತದೆ; ಆತನು ತನ್ನ ಶಕ್ತಿಯ ಮೂಲಕ ಸೃಷ್ಟಿಯನ್ನು ತನಗೆ ಅಧೀನಪಡಿಸಿಕೊಳ್ಳಬೇಕಾಗುವದು. Victor P. Hamiltonನು ಯೋಚಿಸಿದ್ದೇನೆಂದರೆ ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವದು "ವಸತಿ ಸ್ಥಾಪಿಸಿಕೊಳ್ಳುವಿಕೆ ಮತ್ತು ಕೃಷಿಯ" ಕುರಿತಾಗಿದೆ, ಅದು 2:5, 15ರಲ್ಲಿ ಭೂಮಿಯನ್ನು ವ್ಯವಸಾಯ ಮಾಡಬೇಕೆಂಬ ವಿಚಾರದೊಂದಿಗೆ ಸಮಾನಾರ್ಥವುಳ್ಳದ್ದಾಗಿದೆ.[19]

ಮಾನವರಿಗೆ ದೇವರು ನೀಡಿದ ಬುದ್ಧಿವಾದದ ಮುಂದಿನ ಭಾಗವು ಏನೆಂದರೆ ಆತನು "ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ದೊರೆತನಮಾಡಬೇಕು" ಎಂಬುದೆ. ಆದಿಕಾಂಡ 1:28ರಲ್ಲಿ ಈ ಎಲ್ಲಾ ಜೀವಿಗಳ ಮೇಲೆ ಮನುಷ್ಯನ ದೊರೆತನಕ್ಕೆ ಅನ್ವಯವಾಗುವ ಪದವು רָדָה *(ರದಾಹ)*, ಅದು ಸಾಮಾನ್ಯವಾಗಿ "ದೈವಿಕ ದೊರೆತನಕ್ಕಿಂತಲೂ ಮಾನವ ದೊರೆತನ"[20] ಕುರಿತಾಗಿ ಬಳಸಲ್ಪಡುತ್ತದೆ. ಇದರ ಒಂದು ಉದಾಹರಣೆಯನ್ನು ಕೀರ್ತನೆ 110:2ರಲ್ಲಿ ಕಾಣಬಹುದು, ಅಲ್ಲಿ ಯೆಹೋವನು ಚೀಯೋನಿನ ಅರಸನಿಗೆ ಆತನ ವೈರಿಗಳ ಮಧ್ಯದಲ್ಲಿ ದೊರೆತನ *(ರದಾಹ)* ಮಾಡು ಎಂದು ಪ್ರಬೋಧಿಸುತ್ತಾನೆ. ಈ ಪದವು ಆಕೆಯ ಸೆರೆಯಾಳಾಗಿರುವ ವೈರಿಗಳ ಮೇಲೆ ಇಸ್ರಾಯೇಲ್ಯ ನಡಿಸುವ ದೊರೆತನವನ್ನು ಸಹ ಸೂಚಿಸುತ್ತದೆ (ಯೆಶಾಯ 14:2) ಮತ್ತು ಬೇರೆ ಜನಾಂಗಗಳನ್ನು ಸ್ವಾಧೀನಪಡಿಸಿಕೊಂಡು ತಮ್ಮ ದಬ್ಬಾಳಿಕೆಯ ಆಳ್ವಿಕೆಗೆ ಒಳಪಡಿಸಿಕೊಳ್ಳುವ ಅನ್ಯಜನಾಂಗಗಳ ದೊರೆತನವನ್ನು ಸಹ ಸೂಚಿಸುತ್ತದೆ (ಯೆಶಾಯ 14:6).

*ರದಾಹ* ಎಂಬುದು ಜನಗಳ ಮೇಲಿನ ಆಳ್ವಿಕೆ ಮತ್ತು ದೊರೆತನಗಳನ್ನು ಒಳಗೊಂಡಿರುವಂಥ ರಾಜವಂಶೀಯ ಪದವಾಗಿರುತ್ತದೆ; ಹೇಗೂ, ದೇವರ ಜನರು ಅಂತಹ ಅಧಿಕಾರ ಚಲಾವಣೆಯಲ್ಲಿ ಕಠೋರವಾಗಿರಬಾರದಿತ್ತು. ಯಾಜಕಕಾಂಡ 25:43ರಲ್ಲಿ, ಯಜಮಾನನಿಗೆ ಆತನ ದಾಸನ ಮೇಲೆ ಕಠಿಣತೆಯಿಂದ ದೊರೆತನ *(ರದಾಹ)* ನಡಿಸುವದನ್ನು ಸ್ಪಷ್ಟವಾಗಿ ನಿಷೇಧಿಸಲಾಗಿರುತ್ತದೆ. ಸೊಲೊಮೋನನು, ಕನಿಷ್ಠ ತನ್ನ ಆರಂಭಿಕ ಆಳ್ವಿಕೆಯಲ್ಲಿ, ಇಸ್ರಾಯೇಲಿನ ಸುತ್ತಲಲ್ಲಿದ್ದ ಸಾಮಂತ ರಾಜ್ಯಗಳ ಮೇಲೆ ಸಮಾಧಾನದಿಂದ ದೊರೆತನ *(ರದಾಹ)* ನಡಿಸಿದನು (1 ಅರಸು 4:24). ರಾಜ್ಯಭಾರ ನಡಿಸುವ ಅರಸನು ತನ್ನ ಆಳ್ವಿಕೆಯನ್ನು (*ರದಾಹ*) ನೀತಿ ಮತ್ತು ನ್ಯಾಯಗಳಿಂದ ನಡಿಸಬೇಕು, ಕಷ್ಟದಲ್ಲಿರುವವರನ್ನು ಹಾಗೂ

ಕುಗ್ಗಿದವರನ್ನು ಬಿಡಿಸಬೇಕು, ದೀನದರಿದ್ರರ ಮೇಲೆ ಕನಿಕರ ಹೊಂದಿರುವವನು ಮತ್ತು ಅವರ ಪ್ರಾಣಗಳನ್ನು ರಕ್ಷಿಸುವವನಾಗಿರಬೇಕು, ಅಸಹಾಯಕರನ್ನು ಬಲಾತ್ಕಾರಗಳಿಗೆ ತಪ್ಪಿಸಿ ಕಾಪಾಡಬೇಕು, ಮತ್ತು ತನ್ನ ಅಧಿಕಾರದಡಿಯಲ್ಲಿರುವವರಿಗೆ ಸಮಾಧಾನವನ್ನುಂಟು ಮಾಡುವವನಾಗಬೇಕೆಂಬುದಾಗಿ ಕೀರ್ತನೆಗಾರನು ಪ್ರಾರ್ಥಿಸುತ್ತಾನೆ (ಕೀರ್ತನೆ 72:1-3, 7, 8, 12-14).

ದೇವರು ಆದಿಯಲ್ಲಿ ಮನುಷ್ಯರಿಗೆ ಒಪ್ಪಿಸಿದ ದೊರೆತನವು *(ರದಾಹ)* ಈ ವಿಧವಾದದ್ದೇ ಎಂಬುದು ಸ್ಪಷ್ಟವಾಗಿರುತ್ತದೆ. ಇದು ಮಾನವರು ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮಾಡುವದನ್ನು ಕಾನೂನುಬದ್ಧಗೊಳಿಸುತ್ತದೆ, ಆದರೆ ದೇವರ ಸುಂದರವಾದ ಪ್ರಪಂಚವನ್ನು ದುರುಪಯೋಗಪಡಿಸಿಕೊಳ್ಳುವದಕ್ಕೆ ಇದು ಯಾವದೇ ಪರವಾನಿಗೆಯನ್ನು ನೀಡುವದಿಲ್ಲ. ತಾನು ನಿಸರ್ಗ ಮತ್ತು ಪ್ರಾಣಿ ಜಗತ್ತಿನ ಮೇಲೆ ಅಧಿಕಾರಿಯಾಗಿ ನೇಮಿಸಲ್ಪಟ್ಟಿದ್ದಾನಾದರೂ, ಆತನು ದೇವರ ಅಧಿಕಾರದ ಅಡಿಯಲ್ಲಿದ್ದಾನೆ ಮತ್ತು ಅವುಗಳ ಹಿತದ ಬಗ್ಗೆ ಕಾಳಜಿಯುಳ್ಳವನಾಗಿ ತನ್ನ ದೊರೆತನವನ್ನು ನಡಿಸತಕ್ಕದ್ದು, ಹೊರತು ಕಠೋರವಾದ ಮತ್ತು ತನ್ನಿಷ್ಟದಂತೆ ದುರುಪಯೋಗ ಮಾಡಿಕೊಳ್ಳುವದಕ್ಕಲ್ಲ ಎಂಬುದನ್ನು ಮನುಷ್ಯನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. ಮನುಷ್ಯನು ಭೂಮಿಯ ಮೇಲೆ ಮತ್ತು ಅದರಲ್ಲಿನ ಜೀವಿಗಳ ಮೇಲೆ ದೊರೆತನ ಮಾಡುವ ರೀತಿಯಲ್ಲಿ ದೇವರ (ಸ್ವರೂಪದ) ಪ್ರಯೋಜನಕರವಾದ ಗುಣವನ್ನು ಪ್ರತಿಫಲಿಸತಕ್ಕದ್ದು. ಮನುಷ್ಯನು ಭೂಮಿಯ ಮೇಲಿನ ಪ್ರಾಣಿಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಆದೇಶವನ್ನು ದೇವರು ನೀಡಿದ್ದನು, ಆದರೆ ಆತನು ಅವುಗಳ ಮೇಲೆ ಒಂದು ಜವಾಬ್ದಾರಿಯುತ ಹಾಗೂ ಕನಿಕರವುಳ್ಳ ರೀತಿಯಲ್ಲಿ, ತನ್ನ ಯಜಮಾನನ ಸ್ವತ್ತನ್ನು ನಿರ್ವಹಿಸುವ ಒಬ್ಬ ನಂಬಿಗಸ್ತ ಮನೆವಾರ್ತೆಯವನಂತೆ ಆಳ್ವಿಕೆಯನ್ನು ಮಾಡತಕ್ಕದ್ದು.

## ಮಾನವರಿಗಾಗಿ ಮತ್ತು ಪ್ರಾಣಿಗಳಿಗಾಗಿ ಆಹಾರದ ಏರ್ಪಾಡುಗಳನ್ನು ಮಾಡಿದ್ದು (1:29, 30)

**[29]ಮತ್ತು ದೇವರು - ಇಗೋ, ಸಮಸ್ತಭೂಮಿಯ ಮೇಲೆ ಬೀಜವುಳ್ಳ ಎಲ್ಲಾ ಪೈರುಗಳನ್ನೂ ಬೀಜವುಳ್ಳ ಎಲ್ಲಾ ಹಣ್ಣಿನ ಮರಗಳನ್ನೂ ನಿಮಗೆ ಆಹಾರಕ್ಕಾಗಿ ಕೊಟ್ಟಿದ್ದೇನೆ. [30]ಇದಲ್ಲದೆ ಭೂಮಿಯ ಮೇಲೆ ತಿರುಗಾಡುವ ಮೃಗಗಳು, ಆಕಾಶದಲ್ಲಿ ಹಾರಾಡುವ ಪಕ್ಷಿಗಳು, ನೆಲದಲ್ಲಿ ಹರಿದಾಡುವ ಕ್ರಿಮಿಕೀಟಗಳು ಎಂಬ ಜೀವಿಗಳಿಗೆ ಎಲ್ಲಾ ಹುಲ್ಲುಸೊಪ್ಪುಗಳನ್ನು ಆಹಾರಕ್ಕಾಗಿ ಕೊಟ್ಟಿದ್ದೇನೆ ಎಂದು ಹೇಳಿದನು; ಅದು ಹಾಗೆಯೇ ಆಯಿತು.**

**ವಚನಗಳು 29, 30.** ದೇವರು ತನ್ನೆಲ್ಲಾ ಜೀವಿಗಳಿಗೋಸ್ಕರ **ಆಹಾರಕ್ಕಾಗಿ ಬೀಜವುಳ್ಳ ಎಲ್ಲಾ ಪೈರುಗಳನ್ನು** ಮತ್ತು ಫಲ-ಬಿಡುವ **ಮರಗಳನ್ನೂ** ಅವುಗಳ ಪ್ರಯೋಜನಾರ್ಥವಾಗಿ ಉಂಟು ಮಾಡುವ ಮೂಲಕ ಏರ್ಪಾಡುಗಳನ್ನು ಮಾಡಿದನು ಎಂಬುದನ್ನು ದೃಢೀಕರಿಸುವ ಮೂಲಕ ಲೇಖಕನು ಸೃಷ್ಟಿಯ ಚರಿತ್ರೆಯನ್ನು ಮುಂದುವರೆಸುತ್ತಾನೆ. ಈ ಹೇಳಿಕೆಯು ವೈಶಿಷ್ಟ್ಯವಾದ ಮೆಸಪೊಟಾಮ್ಯದ ಅಭಿಪ್ರಾಯಕ್ಕೆ ಸ್ಪಷ್ಟವಾಗಿ ತದ್ವಿರುದ್ಧವಾಗಿರುತ್ತದೆ, ಆ ಅಭಿಪ್ರಾಯವು "ದೇವರುಗಳ ಸೇವೆಗೋಸ್ಕರ"[21] ಸೃಷ್ಟಿಸಲ್ಪಟ್ಟವನು ಎಂಬುದಾಗಿ ಮನುಷ್ಯನನ್ನು ಪ್ರತಿನಿಧಿಸುವದಾಗಿದೆ, ಅಂದರೆ ದೇವರುಗಳಿಗೆ ಆಹಾರವನ್ನು ಒದಗಿಸುವದಕ್ಕಾಗಿ ಸೃಷ್ಟಿಸಲ್ಪಟ್ಟವನು ಎಂಬುದೆ. ಇದು ಗಿಲ್ಗಾಮೆಶ್ ಪುರಾಣಕಾವ್ಯದಲ್ಲಿ ಸ್ಪಷ್ಟವಾಗಿರುತ್ತದೆ

ಯಾಕೆಂದರೆ, ದೇವರುಗಳು ಮಾನವರನ್ನು ನಾಶಗೊಳಿಸಲು ಪ್ರಳಯವನ್ನು ಕಳುಹಿಸಿದ ಮೇಲೆ, ಅವುಗಳಿಗೆ ಆಹಾರವನ್ನು ಒದಗಿಸಲು ಯಾರೂ ಇರಲಿಲ್ಲ. ಉತ್ನಾಪಿಸ್ಟಿಮನು (ನೋಹನಿಗೆ ಸಮಾನವಾದ ಬಾಬೆಲಿನವನು) ಹಡಗಿನಿಂದ ಹೊರಗೆ ಬಂದು ಒಂದು ಯಜ್ಞವನ್ನು ಅರ್ಪಿಸಿದನು, ದೇವರುಗಳು ಎಷ್ಟೊಂದು ಹಸಿವೆಗೊಂಡಿದ್ದರೆಂದರೆ ಅವುಗಳು ಆ ಯಜ್ಞವನ್ನು "ನೊಣಗಳ ರೀತಿಯಲ್ಲಿ ಗುಂಪಾಗಿ ಸುತ್ತುವರೆದಿದ್ದರು."[22]

ದೇವರು ಮಾನವ ಮತ್ತು ಪ್ರಾಣಿಗಳಿಗೋಸ್ಕರ **ಎಲ್ಲಾ ಹಣ್ಣಿನ ಮರಗಳನ್ನೂ ನಿಮಗೆ ಆಹಾರಕ್ಕಾಗಿ** ಕೊಟ್ಟನು ಎಂಬ ಹೇಳಿಕೆಯ ಅರ್ಥವು ಸಕಲ ಪ್ರಾಣಿಗಳು ಗಿಡಗಳಲ್ಲಿನ ಆಹಾರವನ್ನು ತಿನ್ನಬೇಕೆಂದು ನಿರ್ಬಂಧಿಸಲ್ಪಟ್ಟಿದ್ದವು ಎಂದಲ್ಲ, ಅದಕ್ಕಿಂತಲೂ ಹೆಚ್ಚಾಗಿ ಅದರರ್ಥವು "ಎಲ್ಲಾ ಗಿಡಗಳು ಎಲ್ಲರಿಗೂ ಸಮಾನವಾಗಿ ತಿನ್ನಬಹುದಾದ ಗಿಡಗಳಾಗಿದ್ದವು. ಇದೊಂದು ಸಾಮಾಣ್ಯೀಕರಣವಾಗಿದ್ದು, ಎಲ್ಲಾ ಜೀವವು ನೇರವಾಗಿ ಅಥವಾ ಪರೋಕ್ಷವಾಗಿ ಹಸಿರು ಪೈರುಗಳ ಮೇಲೆ ಅವಲಂಭಿತವಾಗಿರುತ್ತದೆ ಎಂಬುದೆ, ಮತ್ತು ವಚನದ ಕಳಕಳಿಯು ಎಲ್ಲರೂ ದೇವರಿಂದಲೇ ಆಹಾರವನ್ನು ಹೊಂದಿಕೊಳ್ಳುವರು ಎಂಬುದನ್ನು ತೋರಿಸಿ ಕೊಡುವದೇ ಆಗಿರುತ್ತದೆ."[23] ಖಂಡಿತವಾಗಿಯೂ, ಪ್ರಳಯದ ನಂತರವಷ್ಟೇ ಮಾಂಸ ಸೇವನೆಯನ್ನು ವಿಶೇಷವಾಗಿ ಅಧಿಕೃತಗೊಳಿಸಲಾಗಿತ್ತು (9:2-4). ಹೇಗೂ, ಆ ಕಾಲಕ್ಕೆ ಮುನ್ನ ದೇವರು ಮಾಂಸ ಸೇವನೆಯನ್ನು ನಿಷೇಧಿಸಿರಲಿಲ್ಲ. ಅಲ್ಲದೆ ಆದಾಮ ಮತ್ತು ಹವ್ವಳರು ತೋಟದಲ್ಲಿ ಪಾಪ ಮಾಡಿದಾಗ ಅವರಿಗೆ ದೇವರು ಚರ್ಮದ ಉಡುಪುಗಳನ್ನು ಮಾಡಿ ಕೊಟ್ಟನು ಎಂಬುದನ್ನು ಗಮನಿಸತಕ್ಕದ್ದು (3:21). ಸ್ವಾಭಾವಿಕವಾಗಿಯೇ ಆ ಘಟನೆಯಿಂದ ಒಂದು ಪ್ರಶ್ನೆಯು ಉದ್ಭವವಾಗುತ್ತದೆ: "ದೇವರು ಮೊದಲ ದಂಪತಿಗೆ ತಿನ್ನುವದಕ್ಕಾಗಿ ಪ್ರಾಣಿ(ಗಳ) ಯಾವದೇ ಮಾಂಸವನ್ನು ಕೊಟ್ಟನೋ?" ಪ್ರಶ್ನೆಯು ಉತ್ತರಿಸಲ್ಪಡದೆ ಉಳಿಯತಕ್ಕದ್ದಾದರೂ, ಅದರ ಒಂದು ನಿಜವಾದ ಸಾಧ್ಯತೆಯ ಕುರಿತು ವಾಕ್ಯವು ಅನುಮತಿಸುವದಾಗಿದೆ.

ಹೆಚ್ಚುಕಡಿಮೆ ಮಾನವರ ಆರಂಭ ಕಾಲದಿಂದಲೇ, ದೇವರ ಅನುಮೋದನೆಯೊಂದಿಗೆ ಆತನಿಗಾಗಿ ಯಜ್ಞಗಳು ಅರ್ಪಿಸಲ್ಪಡುತ್ತಿದ್ದವೆಂಬುದು ಪ್ರಸ್ತಾಪಿಸಲಾಗಿರುತ್ತದೆ (4:4). ಪುನಃ, ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದಡಿಯಲ್ಲಿದ್ದ ಆಚಾರದ ರೀತಿಯಲ್ಲಿಯೇ, ಇದು ಯೆಹೋವನ ಯಜ್ಞವೇದಿಯ ಮೇಲೆ ಅರ್ಪಿಸಲಾಗಿದ್ದ ಪ್ರಾಣಿಯ ಭಾಗವೊಂದನ್ನು ಆರಾಧಕನು ಸೇವಿಸುತ್ತಿದ್ದನೆಂಬುದಕ್ಕೆ ಒಂದು ಸೂಚ್ಯಾರ್ಥವಾಗಿರುತ್ತದೋ? ಪ್ರಳಯಕ್ಕೆ ಮುಂಚೆ ಸಹ, ದೇವರು ನಾವೆಯೊಳಗೆ ಕರೆದುಕೊಂಡು ಬರಬೇಕಾಗಿದ್ದ "ಶುದ್ಧ" ಮತ್ತು "ಅಶುದ್ಧ" ಪ್ರಾಣಿಗಳ ನಡುವೆ ವ್ಯತ್ಯಾಸವನ್ನು ಮಾಡುವಂತೆ ನೋಹನಿಗೆ ಅಪ್ಪಣೆ ಕೊಟ್ಟನು (7:2). ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದಡಿಯಲ್ಲಿದ್ದ ಹಾಗೆ, ಪ್ರಳಯದ ಮುಂಚೆ ಮನುಷ್ಯರು "ಶುದ್ಧ" ಪ್ರಾಣಿಗಳನ್ನು ಮಾತ್ರವೇ ಸೇವಿಸಬೇಕಾಗಿತ್ತು ಮತ್ತು ದೇವರಿಗೆ ಅರ್ಪಿಸಬೇಕಾಗಿತ್ತು ಎಂಬುದನ್ನು ಇದು ಸೂಚಿಸುತ್ತದೋ? ಶಾಸ್ತ್ರದಲ್ಲಿ ಯಾವದೇ ಸ್ಪಷ್ಟವಾದ ಪುರಾವೆಯು ಇಲ್ಲದೆ, ಈ ಪ್ರಶ್ನೆಗಳಿಗೆ ಯಾವ ಖಚಿತವಾದ ಉತ್ತರವನ್ನೂ ಕೊಡುವದಕ್ಕಾಗುವದಿಲ್ಲ. ಒಂದು ಊಹೆಯ ಅಂಶವು ಉಳಿಯತಕ್ಕದ್ದು; ಆದರೆ ಈ ವಾಕ್ಯಭಾಗಗಳು ಸೂಚಿಸುವಂತೆ ಕಾಣುವದೇನೆಂದರೆ, ಪಾಪವು ಲೋಕದೊಳಗೆ ಪ್ರವೇಶಿಸಿದ ಬಳಿಕ, ದೇವರು ಪ್ರಾಣಿಗಳನ್ನು ಕೊಲ್ಲುವ, ಸಮರ್ಪಿಸುವದರ, ಮತ್ತು ಪ್ರಾಣಿ ಯಜ್ಞಗಳನ್ನು ತಿನ್ನುವ ಸಾಧ್ಯತೆಯ ಕುರಿತಾಗಿ ತನ್ನ ಜನರಿಗೆ ಕೆಲವೊಂದು ಉಪದೇಶಗಳನ್ನು ನೀಡಿದನು ಎಂಬುದೆ. ಈ ಸಂಗತಿಗಳ ಕುರಿತಾದ ಏಕೈಕ ನಿಖರವಾದ ಮಾಹಿತಿಯು ಎಂದರೆ ಪ್ರಳಯದ ನಂತರದಲ್ಲಿ ಬರುವ

ಶಾಸ್ತ್ರಗಳಲ್ಲಿ ದಾಖಲಿಸಲ್ಪಟ್ಟಿರುವಂಥದ್ದೇ.

## ಸೃಷ್ಟಿಯ ಕುರಿತು ದೇವರು ಮೌಲ್ಯ ನಿರ್ಣಯಿಸಿದ್ದು (1:31)

**[31]ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು. ಸಾಯಂಕಾಲವೂ ಪ್ರಾತಃಕಾಲವೂ ಆಗಿ ಆರನೆಯ ದಿನವಾಯಿತು.**

**ವಚನ 31.** ದೇವರ ಶ್ಲಾಘನೆಯ ಸೂತ್ರವು ಆದಿಕಾಂಡ 1:4, 10, 12, 18, 21, 25ರಲ್ಲಿ ವ್ಯಕ್ತಪಡಿಸಲ್ಪಟ್ಟಿದೆ; ಆದರೆ **ಆರನೆಯ ದಿನವು** ಮುಕ್ತಾಯವಾದ ವೇಳೆ, ಆತನ ಮಹಿಮೆಕರವಾದ ಸೃಷ್ಟಿಯ ಪರಿಪೂರ್ಣತೆಯನ್ನು ಕುರಿತು ಒತ್ತಿ ಹೇಳುವದಕ್ಕಾಗಿ ಅದು ಸ್ವಲ್ಪ ಮಟ್ಟಿಗೆ ತಿದ್ದುಪಡಿಗೊಳಿಸಲ್ಪಟ್ಟಿತು. ಇದಕ್ಕೆ ಮುನ್ನ, ಆತನು ನಿರ್ದಿಷ್ಟವಾದ ಸಂಗತಿಗಳಿಗೆ "ಒಳ್ಳೇದು" ಎಂಬ ಪದವನ್ನು ಅನ್ವಯಗೊಳಿಸಿದ್ದನು; ಆದರೆ ಈಗ ಸಾರ್ವಭೌಮ ಸೃಷ್ಟಿಕರ್ತನು ಸ್ವಲ್ಪ ಹಿಂದೆ ಸರಿದು **ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು**. ಉತ್ಸಾಹಗೊಂಡವನಾಗಿ, ಅದೆಲ್ಲವನ್ನು ಕೇವಲ "ಒಳ್ಳೇದು" ಎಂದಷ್ಟೆ ಅಲ್ಲ, ಆದರೆ **ಬಹು ಒಳ್ಳೇದಾಗಿತ್ತು** ಎಂದು ಘೋಷಿಸಿದನು.

ಮಾನವರ (ಆದಾಮ, ಗಂಡು ಮತ್ತು ಹೆಣ್ಣು ಸೇರಿದಂತೆ) ಸೃಷ್ಟಿಯ ನಂತರವಷ್ಟೇ ದೇವರು ಗುಣಾತ್ಮಕವಾದ "ಬಹು ಒಳ್ಳೇದು" ಎಂಬ ಮೌಲ್ಯಮಾಪನವನ್ನು ಮಾಡಿದನು. ಮಾನವರು ದೇವರು ಉಂಟು ಮಾಡಿದ ಎಲ್ಲದಕ್ಕೂ ತುತ್ತತುದಿಯಲ್ಲಿ ನಿಲ್ಲುತ್ತದೆ ಯಾಕೆಂದರೆ ಅವರು ಮಾತ್ರವೇ ಸೃಷ್ಟಿಕರ್ತನ ಸ್ವರೂಪದಲ್ಲಿರುತ್ತಾರೆ ಮತ್ತು ಭೂಮಿಯ ಮೇಲೆ ಆತನ ಪ್ರತಿನಿಧಿಗಳಾಗಿದ್ದಾರೆ (1:26-28). "ಬಹು ಒಳ್ಳೇದು" ಎಂಬ ಮೌಲ್ಯ ನಿರ್ಣಯದೊಳಗೆ ಮನುಷ್ಯನನ್ನು ಸೇರ್ಪಡೆಗೊಳಿಸಿದ್ದು ಮಾನವರ ಕುರಿತಾಗಿ, ಮೂಲತಃ ಉಂಟು ಮಾಡಲ್ಪಟ್ಟ ರೀತಿಯಲ್ಲಿ ಒಂದು ಅತ್ಯಂಥ ಉನ್ನತವಾದ ಅಭಿಪ್ರಾಯವನ್ನು ಮುಂದಿಡುತ್ತದೆ, ಮತ್ತು ಇದು ಪ್ರಾಚೀನ ಮೆಸಪೋತಾಮ್ಯದಲ್ಲಿ ಮನುಷ್ಯನ ಕುರಿತಾಗಿದ್ದ ಕೀಳಾದ ಅಭಿಪ್ರಾಯಕ್ಕೆ ಸುಸ್ಪಷ್ಟವಾಗಿ ವ್ಯತೀರಿಕ್ತವಾಗಿರುತ್ತದೆ.

ಬಾಬೆಲಿನ ಪುರಾಣಕಾವ್ಯದಲ್ಲಿ, ದೇವರುಗಳ ರಾಜನಾದ ಮರ್ದುಕನು, "ಒಬ್ಬ ಕ್ರೂರ" ಮನುಷ್ಯನನ್ನು ಉಂಟು ಮಾಡುವದಕ್ಕೆ ದೃಢನಿಶ್ಚಯ ಮಾಡಿಕೊಂಡು ಹೀಗೆ ಹೇಳಿದನು, "ಮನುಷ್ಯನದು ಆತನ ಹೆಸರಾಗಿರುವದು, ನಿಜವಾಗಿಯೂ, ಕ್ರೂರ-ಮಾನವನನ್ನು ನಾನು ಸೃಷ್ಟಿಸುವೆನು." ಈ ಚರಿತ್ರೆಯಲ್ಲಿ, ಮಾನವನು ಒಬ್ಬ "ಕ್ರೂರ"ನಾಗಿ ಉಂಟು ಮಾಡಲ್ಪಟ್ಟನೆಂದು ಹೇಳಲಾಗುತ್ತದೆ ಯಾಕೆಂದರೆ ಆತನನನ್ನು ಕಿಂಗುವಿನ ರಕ್ತದಿಂದ ಉಂಟು ಮಾಡಲಾಗಿತ್ತು, ಕಿಂಗು ಎಂಬುವನು ಎಲ್ಲಾ ದೇವರುಗಳಲ್ಲಿಯೇ ಅತಿ ಕೆಟ್ಟವನಾಗಿದ್ದನು.[24] ಪ್ರಾಚೀನ ಮೆಸಪೋತಾಮ್ಯದ ಸಾಹಿತ್ಯ ಮತ್ತು ಆದಿಕಾಂಡದ ನಡುವಿನ ವ್ಯತ್ಯಾಸವು ಸ್ಪಷ್ಟವಾಗಿದೆ: ಮೊದಲನೆಯದ್ದರಲ್ಲಿ, ಮಾನವನು ಕ್ರೂರ ದೇವರಾದ ಕಿಂಗುವಿನಿಂದ ಬಂದವನಾಗಿ ಕ್ರೂರ ಜೀವಿಯಾಗಿದ್ದನು, ಈ ಕಿಂಗು ಮರ್ದುಕನ ನಾಯಕತ್ವದಲ್ಲಿ ನಡೆದ ಇತರ ದೇವರುಗಳ ಸಂಗಡದ ಯುದ್ಧದಲ್ಲಿ ನಾಶಗೊಂಡನು. ಎರಡನೆಯದ್ದರಲ್ಲಿ, ಮಾನವನು - ದೇವರ ಸ್ವರೂಪದಲ್ಲಿ ಮಾಡಲ್ಪಟ್ಟವನಾಗಿ - ಕರ್ತನು "ಬಹು ಒಳ್ಳೇದು" ಎಂದೆಣಿಸಿದ ಸೃಷ್ಟಿಯ ಭಾಗವಾಗಿದ್ದನು, ಮತ್ತು ಆತನು ಪರಿಶುದ್ಧ ಹಾಗೂ ಪ್ರೀತಿಸ್ವರೂಪ ದೇವರಿಂದ ಸೃಷ್ಟಿಸಲ್ಪಟ್ಟಿದ್ದನು, ಆ ದೇವರು ಆತನನ್ನು ಕೇವಲ ಆಶೀರ್ವದಿಸಬೇಕೆಂದು ಮತ್ತು ಆತನೊಂದಿಗೆ ಸಕಲ ಒಳ್ಳೇ ಸಂಗತಿಗಳನ್ನು ಹಂಚಿಕೊಳ್ಳಬೇಕೆಂದು ಬಯಸಿದ್ದನಷ್ಟೆ. ಸೃಷ್ಟಿಯ

ಆರು ದಿನಗಳ ಕುರಿತಾಗಿ ಆದಿಕಾಂಡದ ಕಥೆ ಇದೇ ಆಗಿದೆ.

# ಅನ್ವಯಿಸುವಿಕೆ

## ಸೃಷ್ಟಿಕರ್ತನಾದ ದೇವರು (ಅಧ್ಯಾಯ 1)

*ಆದಿಕಾಂಡ ಪುಸ್ತಕವು ದೇವರನ್ನು ಸೃಷ್ಟಿಕರ್ತನೆಂದು ಸಾರುವ ಮೂಲಕ ನಂಬಿಕೆಗೆ ಒಂದು ತಳಹದಿಯನ್ನು ಒದಗಿಸುತ್ತದೆ.* ಧರ್ಮದ ತತ್ವಜ್ಞಾನದ ಕುರಿತಾದ ಇತರ ಪುಸ್ತಕಗಳು ಮಾಡುವ ಹಾಗೆ, ಇದು ದೇವರಿದ್ದಾನೆಂಬುದರ ಕುರಿತು ನಿರಾಧಾರವಾದ ವಾದಗಳೊಂದಿಗೆ ಆರಂಭವಾಗುವದಿಲ್ಲ. ಅಲ್ಲದೆ ದೇವರು ಇದ್ದಾನೆಂಬುದಕ್ಕೆ ಅಥವಾ ಆತನು ಲೋಕವನ್ನು ಹಾಗೂ ಅದರಲ್ಲಿನ ಸಕಲವನ್ನು ಉಂಟು ಮಾಡಿದವನು ಎಂಬುದನ್ನು ಸಾಭಿತುಪಡಿಸುವದಕ್ಕೆ ಒಬ್ಬನು ಬಳಸಬಹುದಾದ ವೈಜ್ಞಾನಿಕ ಅಂಶಗಳ ಸಂಗ್ರಹವನ್ನಾಗಲಿ ಅಥವಾ ಪರೀಕ್ಷಾಪ್ರಯೋಗಗಳನ್ನಾಗಲಿ ಸಹ ಮುಂದಿಡುವದಿಲ್ಲ. ಮಧ್ಯಪ್ರಾಚ್ಯದಲ್ಲೆಲ್ಲಾ ವ್ಯಾಪಕವಾಗಿದ್ದಂಥ ಕಲ್ಪನಾತ್ಮಕವಾದ ಬಹುದೇವತ್ವದ ಪುರಾಣ ಕುರಿತಾಗಿ ಏಕಾಏಕಿ ಆಕ್ರಮಣವನ್ನು ಮಾಡುವ ಮೂಲಕವಾಗಿ ಬೈಬಲ್ ಆರಂಭಗೊಳ್ಳುವದಿಲ್ಲ. ಅದು ಆಕಾಶವನ್ನು, ಭೂಮಿಯನ್ನು, ಮತ್ತು ಸಕಲ ಜೀವವುಳ್ಳ ಸಂಗತಿಗಳನ್ನು - ವಿಶೇಷವಾಗಿ ಮಾನವನನ್ನು - ಉಂಟು ಮಾಡಿದ ಏಕ ಸಾರ್ವಭೌಮ ದೇವರಲ್ಲಿನ ನಂಬಿಕೆಯನ್ನು ಸಾರುವ ಮೂಲಕ ಅದು ಆರಂಭಗೊಳ್ಳುತ್ತದೆ ಯಾಕೆಂದರೆ ಆತನು ತನ್ನ ಸೃಷ್ಟಿಯನ್ನು ಕೇವಲ ಆಶೀರ್ವದಿಸಬೇಕೆಂದು ಬಯಸುವಂತಹ ಒಬ್ಬ ಒಳ್ಳೇ ದೇವರಾಗಿದ್ದಾನೆ.

ಕೆಲವರು ಈ ಅರ್ಥೈಸುವ ದಾರಿಯನ್ನು ಒಂದು ದುರ್ಬಲತೆಯಾಗಿ ಕಾಣಬಹುದು ಯಾಕೆಂದರೆ ಅದು ನಂಬಿಕೆಯನ್ನು ಎಲ್ಲದಕ್ಕಿಂತ ಮುಂದೆ ಇಡುವದಾಗಿದ್ದು ತರ್ಕ ಹಾಗೂ ವೈಜ್ಞಾನಿಕ ತಿಳುವಳಿಕೆಯನ್ನು ತಿರಸ್ಕರಿಸುತ್ತದೆ. ಹೇಗೂ, ವಾಸ್ತವಿಕದಲ್ಲಿ, ಅದು ಮಾನವ ತರ್ಕದಲ್ಲಿನ ಅಂಧ ನಂಬಿಕೆಯನ್ನು ಹಾಗೂ ವಿಜ್ಞಾನದ ಬೆಂಬಲಕ್ಕೆ ನಿಲ್ಲುವ ಆದರೆ ದೇವರು ಅಥವಾ ಸೃಷ್ಟಿಯ ಕುರಿತಾಗಿ ಖಚಿತವಾದ ಸತ್ಯದ ಕಡೆಗೆ ಎಂದಿಗೂ ತಲುಪುವದಕ್ಕಾಗದ ನಿಸರ್ಗವಾದದ ಪೂರ್ವಕಲ್ಪನೆಯನ್ನಷ್ಟೇ ಹೊರಗಿಡುತ್ತದೆ. ಸರಳವಾಗಿ ಹೇಳುವದಾದರೆ, ಆರಂಭದಲ್ಲಿ, ಸೃಷ್ಟಿಯ ಕಾರ್ಯವು ಸಂಭವಿಸಿದ ವೇಳೆಯಲ್ಲಿ ಮಾನವ ವೀಕ್ಷಕರು ಇರಲಿಲ್ಲವಾದ್ದರಿಂದ, ದೇವರು ಸೃಷ್ಟಿಗೆ ಜವಾಬ್ದಾರನು ಎಂಬುದನ್ನಾಗಲಿ ಅಥವಾ ಎಲ್ಲವೂ ಆಕಸ್ಮಿಕವಾಗಿ ಸಂಭವಿಸಿತು ಎಂಬುದನ್ನ ಸಾಭಿತುಪಡಿಸುವದಕ್ಕೆ ಸಾಧ್ಯವಿಲ್ಲ. ಒಬ್ಬ ಸಾಕ್ಷಿಯು ಅಲ್ಲಿರುತ್ತಿದ್ದಾಗ್ಯೂ, ಸೃಷ್ಟಿಯನ್ನು ಒಂದು ವೈಜ್ಞಾನಿಕ ಪುರಾವೆಯಾಗಿ ಪುನರಾವರ್ತಿಸುವದಕ್ಕೆ ಅವಕಾಶವೇ ಇರುವದಿಲ್ಲ. ಆದದರಿಂದ, ಸೃಷ್ಟಿ ಮತ್ತು ಆರಂಭಗಳು ನಂಬಿಕೆಯ ವರ್ಗದಲ್ಲಿರತಕ್ಕದ್ದು.

*ದೇವರು ಸೃಷ್ಟಿಕರ್ತನೆಂದು ಆತನಲ್ಲಿ ನಂಬಿಕೆಯನ್ನಿಡುವದು ಅಂಧ ಆಕಸ್ಮಿಕದಲ್ಲಿ ನಂಬಿಕೆಯಿಡುವದಕ್ಕಿಂತ ಹೆಚ್ಚು ಉತ್ತಮವಾದದ್ದು.* "ಆದಿಯಲ್ಲಿ *ದೇವರು* ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದನು" (1:1; ಒತ್ತಿ ಹೇಳಿದ್ದು ನನ್ನದು) ಎಂಬ ಹೇಳಿಕೆಯು, ಯಾವದೇ ಪುರಾವೆಯೂ ಇಲ್ಲದ ಒಂದು ನಂಬಿಕೆಯ ಅರಿಕೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಕಾರಣಕ್ಕಾಗಿ, ಕೆಲವರು ಅಪಹಾಸ್ಯ ಮಾಡಿ "ದೇವರು ಸೃಷ್ಟಿಕರ್ತನೆಂಬ ನಿಮ್ಮ ನಂಬಿಕೆಯು ಯಾವದೇ ಪುರಾವೆಯಿಲ್ಲದೆ ಕತ್ತಲೆಯೊಳಗೆ ಜಿಗಿಯುವಂತಿರುತ್ತದಷ್ಟೆ; ಆದ್ದರಿಂದ ನಾನು ಅದಕ್ಕೆ ಬದಲಾಗಿ ನನ್ನ ಭರವಸವನ್ನು ವಿಜ್ಞಾನದಲ್ಲಿ, ಅಂದರೆ,

ಪ್ರದರ್ಶಿಸಲ್ಪಟ್ಟು ಸಾಭಿತುಪಡಿಸುವದಕ್ಕೆ ಸಾಧ್ಯವಿರುವಂಥದ್ದರ ಮೇಲೆ ಇಡುವೆನು" ಎಂದು ಹೇಳುವರು. ಹೇಗೂ, ದೇವರು ಸೃಷ್ಟಿಕರ್ತನೆಂಬುದನ್ನು ಒಬ್ಬನು ತಿರಸ್ಕರಿಸುವದಾದರೆ, ಇರಬಹುದಾದ ಏಕೈಕ ಸಂಭಾವ್ಯವಾದ ಹೇಳಿಕೆಯು "ಆದಿಯಲ್ಲಿ *ವಿಧಿ*ಯು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿತು" ಎಂದಷ್ಟೇ ಇರಬಲ್ಲದು. ಇವೆರಡೂ *ನಂಬಿಕೆ*ಯ ಹೇಳಿಕೆಗಳಾಗಿವೆ; ಇವೆರಡರೊಳಗೆ ಒಂದನ್ನೂ ಸಾಭಿತುಪಡಿಸುವದಕ್ಕಾಗಲಿ ಅಥವಾ ವೈಜ್ಞಾನಿಕವಾಗಿ ನಿರಾಧಾರವೆಂದು ಅಲ್ಲಗಳೆಯುವದಕ್ಕಾಗಲಿ ಆಗುವದಿಲ್ಲ. ಆದದರಿಂದ, ಇದು ನಂಬಿಕೆ Vs ಜ್ಞಾನದ (ವಿಜ್ಞಾನ) ಆಗಿರುವದಿಲ್ಲ; ಬದಲಾಗಿ, ಇಲ್ಲಿ ಪ್ರಶ್ನೆಯು ಏನೆಂದರೆ "ನಿಮಗೆ ಯಾವ ವಿಧವಾದ ನಂಬಿಕೆಯು ಇರಲಿದೆ?" ಯಾವುದು ನಂಬುವದಕ್ಕೆ ಹೆಚ್ಚು ತಾರ್ಕಿಕ ಹಾಗೂ ನ್ಯಾಯಸಮ್ಮತವಾದದ್ದು: ಅಸ್ತವ್ಯಸ್ತತೆಯೊಳಗಿಂದ ಆಕಸ್ಮಿಕವಾಗಿ ಕ್ರಮವು, ನಿರ್ಜೀವವಾದ್ದರಿಂದ ಜೀವವಾದದ್ದು ಉಂಟಾಯಿತು, ಮತ್ತು ಮಾನವ ಮನಸ್ಸಾಕ್ಷಿಯು ಮನಸ್ಸಾಕ್ಷಿಯಿಲ್ಲದ ವಸ್ತುವಿನಿಂದ ಬಂದಿತು ಎಂಬುದೋ - ಅಥವಾ ಜಟಿಲವಾದ ವಿಶ್ವವನ್ನು ಒಬ್ಬ ಸೃಷ್ಟಿಕರ್ತನು ವಿನ್ಯಾಶಿಸಿದನು ಮತ್ತು ಅದರಲ್ಲಿನ ಜೀವದ ವಿಧಗಳನ್ನುಂಟು ಮಾಡಿದನು ಎಂಬುದೋ? ಅವಿಶ್ವಾಸಿಗಿರುವ ಸಮಸ್ಯೆಯು ಏನೆಂದರೆ ಅಂತಹ ಜೀವೋತ್ಪತ್ತಿಯ ಯಾವದೇ ಘಟನೆಯು ವೈಜ್ಞಾನಿಕ ಪರೀಕ್ಷಾಪ್ರಯೋಗಗಳಿಂದ ಎಂದಿಗೂ ತೋರ್ಪಡಿಸಲ್ಪಟ್ಟಿರುವದಿಲ್ಲ ಅಥವಾ ನಿಸರ್ಗದಲ್ಲಿ ಗಮನಿಸಲ್ಪಟ್ಟಿರುವದಿಲ್ಲ, ಅದು ಇರುವದಕ್ಕೂ ಸಾಧ್ಯವಿಲ್ಲ. ಆದದರಿಂದ, *ವಿಧಿ*ಯ ಮೇಲೆ ನಂಬಿಕೆಯನ್ನು ಇಡುವವನೇ ವಾಸ್ತವಿಕದಲ್ಲಿ ಕತ್ತಲೆಯೊಳಗೆ ಅಂಧ ನಂಬಿಕೆಯಿಂದ ಜಿಗಿಯುವವನಾಗಿರುತ್ತಾನೆ, ತಿಳಿದು ಬಂದಿರುವ ವೈಜ್ಞಾನಿಕ ಸತ್ಯಕ್ಕೆ ವಿರುದ್ಧವಾದ ಊಹಾಪೋಹದಲ್ಲಿ ಭರವಸವಿಡುವವನಾಗಿರುವನು.

*ನಿಸರ್ಗವಾದಿ ನಂಬಿಕೆಯು ಒಂದು ದುರ್ಬಲವಾದ ಅಸ್ತಿವಾರದ ಮೇಲೆ ಆಧಾರವಾಗಿರುತ್ತದೆ.* *ವಿಧಿ*ಯ ಮೇಲಿನ ನಂಬಿಕೆಯ ಅವೈಜ್ಞಾನಿಕ ಸ್ವಭಾವವು ಈ ಕೆಳಗಿನದ್ದರಲ್ಲಿ ದೃಷ್ಟಾಂತಗೊಳಿಸಲ್ಪಟ್ಟಿದೆ: ಒಬ್ಬ ವ್ಯಕ್ತಿಯ ಬಳಿಯಲ್ಲಿ ಲಕ್ಷಾಂತರ ಮರಳಿನ ತುಂಡುಗಳಿಂದ ತುಂಬಿರುವ ಒಂದು ಬಕೆಟ್ ಇರುವದಾದರೆ, ಅದು ಆಕಸ್ಮಿಕವಾಗಿ ಇಡೀ ಸ್ವತಂತ್ರದ ಘೋಷಣೆಯನ್ನು ಅಕ್ಷರಗಳಲ್ಲಿ ಬಣ್ಣಿಸುವಂತೆ ಬೀಳುವ ಮುನ್ನ ಎಷ್ಟೊಂದು ಸಾರಿ ಅದು ನೆಲದ ಮೇಲೆ ಬೀಳಬೇಕಾಗಿರುತ್ತದೆ? ಪ್ರಶ್ನೆಯನ್ನು ಕೇಳುವದು ಅದಕ್ಕೆ ಉತ್ತರವನ್ನು ಕೊಟ್ಟ ಹಾಗಿರುತ್ತದೆ ಯಾಕೆಂದರೆ ಅದು ಎಂದಿಗಾದರೂ ಸಂಭವಿಸುವದೆಂದು ಯಾವನೂ ಗಂಭೀರವಾಗಿ ಯೋಚಿಸಲಾರನು, ಯುಗಾಂತ್ಯದ ತನಕ ಪ್ರಯತ್ನಿಸುತ್ತಿದ್ದರೂ ಅದು ಸಂಭವಿಸಲಾರದು. ಅಂತಹ ಸಂಗತಿಯು ನಡೆಯುವದಕ್ಕೆ ವಿರುದ್ಧವಾಗಿರುವ ಸಾಧ್ಯತೆಗಳು ಎಷ್ಟೊಂದು ಅಸಂಖ್ಯೆವಾಗಿವೆಯೆಂದರೆ ಅಂಕೆಯ ಬಳಿಕ ಸೊನ್ನೆಗಳನ್ನು ಬರೆಯುವದಕ್ಕೆ ಸಂಕ್ಷೆಪಿಸಿಲ್ಲದಂತಹ ಒಂದು ನಿಘಂಟಿನ ಗಾತ್ರದ ಪುಸ್ತಕವು ಅಗತ್ಯ ಬೀಳುವದು. ಅಂತಹ ಒಂದು ಘಟನೆಯು ಎಂದಿಗಾದರೂ ಸಂಭವಿಸಬಲ್ಲದೆಂದು ಯಾವನೂ ಎದುರುನೋಡಲಾರನು; ಆದರೆ ನಿಸರ್ಗಿಕ ವಿಜ್ಞಾನದ ಹೆಸರಿನಲ್ಲಿ, ವಿಶ್ವದಲ್ಲಿ, ನಮ್ಮ ಸೌರ ವ್ಯವಸ್ಥೆಯಲ್ಲಿ, ಮತ್ತು ನಮ್ಮ ಭೂಮಿಯಲ್ಲಿನ ಕ್ರಮ ಮತ್ತು ವಿನ್ಯಾಸವು - ಅದರ ಜಟಿಲವಾದ ಜೀವ ವಿಧಗಳಿಂದ ಕೂಡಿದ್ದಾಗಿ - ಕೇವಲ ಶುದ್ಧ *ವಿಧಿ*ಯಿಂದ ಆದದ್ದು ಎಂಬುದಾಗಿ ನಮಗೆ ಹೇಳಲಾಗಿರುತ್ತದೆ. ಈ ಅಂಧ ನಂಬಿಕೆ ಅರ್ಥವಿಲ್ಲದ್ದಾಗಿದೆ ಯಾಕೆಂದರೆ ನಾವು ನಮ್ಮ ಇಂದ್ರಿಯಗಳಿಂದ ಜೀವನದಲ್ಲಿ ನೋಡುವ ಮತ್ತು ಅನುಭವಿಸುವ ಎಲ್ಲದಕ್ಕೂ ತದ್ವಿರುದ್ಧವಾಗಿರುತ್ತದೆ.

ಒಂದು ಗುಜರಿ ವಸ್ತುಗಳಿರುವ ಸ್ಥಳದಲ್ಲಿ ಆಕಸ್ಮಾತ್ತಾಗಿ ಸ್ಪೋಟವೊಂದು ಸಂಭವಿಸಿದರೆ,

ಮತ್ತು ಹೊಗೆಯೆಲ್ಲಾ ಹೊರಟು ಹೋದ ಬಳಿಕ, ಇಗೋ, ಗುಜರಿಯ ತುಕಡಿಗಳ ಹಾಗೂ ತುಂಡುಗಳ ಬದಲಾಗಿ, ಒಬ್ಬನು ಅಲ್ಲಿ ಒಂದು ಪರಿಪೂರ್ಣವಾದ ಕಂಪ್ಯೂಟರ್ ಅಥವಾ ಕಂಪ್ಯೂಟರ್ ಪರದೆಯನ್ನು ಕಂಡರೆ ಹೇಗಿರುತ್ತದೆ? ಇನ್ನಷ್ಟು ಸೂಕ್ಷ್ಮವಾಗಿ ಪರೀಶಿಲನೆ ಮಾಡಿದಾಗ, ಅದರಲ್ಲಿ ಬೃಹತ್ ಮೊತ್ತದ ಹಾರ್ಡ್ ಡ್ರೈವ್ ಮತ್ತು ಮೆಮರಿ, ಜೊತೆಗೆ ಆಪರೇಟಿಂಗ್ ಸಿಸ್ಟಮ್ ಮತ್ತು ಹಲವಾರು ಸಂಕೀರ್ಣವಾದ ಕಾರ್ಯಕ್ರಮಗಳು ಇರುವದು ಕಂಡು ಹಿಡಿಯಲ್ಪಟ್ಟರೆ ಹೇಗಿರುತ್ತದೆ? ಅದನ್ನು ವೀಕ್ಷಿಸಿದವನು ಗುಜರಿಯ ಸ್ಥಳದ ಯಜಮಾನನನ್ನು "ಕಂಪ್ಯೂಟರ್ ಎಲ್ಲಿಂದ ಬಂದಿತು? ಅದನ್ನು ಯಾರು ಮಾಡಿದರು? ಅದು ಅಲ್ಲಿಗೆ ಹೇಗೆ ಬಂದಿತು?" ಎಂಬುದಾಗಿ ಕೇಳುವದಾದರೆ, ಯಜಮಾನನು "ಅದು ಇಲ್ಲಿಗೆ ಹೇಗೆ ಬಂದಿತೆಂದು ನನಗೆ ತಿಳಿಯದು. ಅದನ್ನು ಯಾರಾದರೊಬ್ಬರು ಮಾಡಿದರೆಂಬುದಕ್ಕೆ ನನಗೆ ಯಾವದೇ ಪುರಾವೆಯು ಕಾಣಿಸುವದಿಲ್ಲ. ಅದು ಬಹುಶಃ ಕೇವಲ ಆಕಸ್ಮಿಕವಾಗಿ ಸಂಭವಿಸಿರಬಹುದು" ಎಂದು ಹೇಳಿದರೆ ಆ ವ್ಯಕ್ತಿಯು ಆತನನ್ನು ನಂಬುವದಕ್ಕೆ ಒಲವು ತೋರುವದಿಲ್ಲವೆಂಬುದು ನಿಶ್ಚಯ. ಮತ್ತೊಂದಾವರ್ತಿ, ತಾರ್ಕಿಕ ಬುದ್ಧಿಯ ಯಾವ ವ್ಯಕ್ತಿಯೂ ಅಂಥಹ ಸಂಗತಿಯು ಸಂಭವಿಸಬಲ್ಲದು, ಲೋಕದಲ್ಲಿರುವ ಎಲ್ಲಾ ಗುಜರಿ ವಸ್ತುಗಳ ಸ್ಥಳಗಳಲ್ಲಿ ಸ್ಫೋಟಗಳು ಸಂಭವಿಸಿದಾಗ್ಯೂ, ಅದು ಸಂಭವಿಸಬಲ್ಲದೆಂದು ನಂಬಲಾರನು. ಅತ್ಯಾಧುನಿಕವಾದ ಕ್ರಮವು ನಿಯಂತ್ರಣದಲ್ಲಿಲ್ಲದ ಅವ್ಯವಸ್ಥೆಯೊಳಗಿಂದ ಎಂದಿಗೂ ಬರುವದಕ್ಕೆ ಸಾಧ್ಯವಿಲ್ಲ. ಬದಲಾಗಿ, ಅದು ಬುದ್ಧಿವಂತಿಕೆಯಿಂದಾ ವಿನ್ಯಾಸ ಮತ್ತು ಜಾಗರೂಕವಾದ ನಿರ್ಮಿಸುವಿಕೆಯಿಂದ ಬರುತ್ತದೆ. ಅದು ಒಂದು ಕಂಪ್ಯೂಟರ್ ಮತ್ತು ಅದರ ಕಾರ್ಯಕ್ರಮಗಳು ವಿಷಯದಲ್ಲಾಗಿರಬಹುದು ಅಥವಾ ಆಕಾಶ ಮತ್ತು ಭೂಮಿ, ಅದರ ವೈವಿಧ್ಯವಾದ ಸಕಲ ಜೀವರಾಶಿಯ ವಿಷಯದಲ್ಲಾಗಿರಬಹುದು ಇದು ಸತ್ಯವಾಗಿರುತ್ತದೆ.

ಕೀರ್ತನೆಗಾರನು ಹೀಗೆ ಚಿಂತನೆಯನ್ನು ವ್ಯಕ್ತಪಡಿಸುತ್ತಾನೆ, "ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ" (ಕೀರ್ತನೆ 139:14); ಹೇಗೂ, 1990ರ ದಶಕಗಳ ತನಕವೂ ಈ ಹೇಳಿಕೆಯು ಎಷ್ಟೊಂದು ಸತ್ಯವೆಂಬುದನ್ನು ಯಾರೊಬ್ಬರೂ ಕಲ್ಪನೆ ಮಾಡಿಕೊಂಡಿರಲಿಲ್ಲ, ಆಗ ವಿಜ್ಞಾನಿಗಳು ಅಂತಿಮವಾಗಿ ಮಾನವ ಜೀವಕೋಶಗಳ ಮೂರು ಬಿಲಿಯನ್ ಅನುವಂಶೀಕ ಸಂಕೇತಭಾಷೆಗಳ ನಕ್ಷೆಯನ್ನು ರಚಿಸುವದಕ್ಕೆ ಶಕ್ತರಾಗಿದ್ದರು. ಮಾನವ ಜೀವಿತವು ತಾಯಿಯ ಗರ್ಭದೊಳಗೆ ಒಂದು ಫಲವತ್ತಾದ ಜೀವಕೋಶದಿಂದ ಆರಂಭಗೊಳ್ಳುತ್ತದೆ. ಜೀವಕೋಶದ ಸಂಕೀರ್ಣತೆ ಮತ್ತು ಪ್ರತಿಯೊಂದು ಕೋಶದಲ್ಲಿರುವ ಗ್ರಹಿಸಲಾಗದಷ್ಟು ಮಾಹಿತಿಯನ್ನು ಕಂಡು, ಮೈಕ್ರೋಸಾಫ್ಟ್ ಕಂಪನಿಯ ಸ್ಥಾಪಕನಾದ ಬಿಲ್ ಗೇಟ್ಸ್ ಈ ರೀತಿಯ ಹೇಳಿಕೆಯನ್ನು ಕೊಡುವಂತೆ ನಡಿಸಲ್ಪಟ್ಟನು, "ಡಿಎನ್ಎ ಒಂದು ಸಾಫ್ಟವೆರ್ ಕಾರ್ಯಕ್ರಮವಿದ್ದಂತೆ, ನಾವು ಸರ್ವಕಾಲಕ್ಕೂ ರಚಿಸಿದ ಯಾವದೇ ಕಾರ್ಯಕ್ರಮಕ್ಕಿಂತಲೂ ಎಷ್ಟೋ ಅಧಿಕವಾಗಿ ಸಂಕೀರ್ಣವಾದದ್ದಷ್ಟೆ."[25] ಖಂಡಿತವಾಗಿಯೂ, ಒಂದು ಸಂಕೀರ್ಣವಾದ ಕಂಪ್ಯೂಟರ್ ಕಾರ್ಯಕ್ರಮವು ಒಬ್ಬ ನುರಿತ ಕಾರ್ಯಕ್ರಮ ರೂಪಿಸುವವನು ಬುದ್ಧಿವಂತಿಕೆಯಿಂದ ರಚಿಸದೆಯೇ ಆಕಸ್ಮಿಕವಾಗಿ ಸಂಭವಿಸುವದೆಂದು ಯಾರೊಬ್ಬರೂ ಅಭಿಪ್ರಾಯ ಪಡಲಾರರು, ಆದಾಗ್ಯೂ ಸಂಕೀರ್ಣವಾದ ಕೋಶವು ಹಾಗೆಯೇ ತನ್ನಷ್ಟಕ್ಕೆ ತಾನೇ ಆಕಸ್ಮಿಕವಾಗಿ ಸಂಭವಿಸಿತೆಂದು ನಂಬುವವರು ಅದೆಲ್ಲಾ ಹೇಗೆ ಸಂಭವಿಸಿತೆಂಬುದಕ್ಕೆ ಯಾವ ವಿವರಣೆಯನ್ನಾದರೂ ಕೊಡುವದಕ್ಕೆ ಅಶಕ್ತರಾಗಿರುತ್ತಾರೆ. ವಾಸ್ತವಿಕದಲ್ಲಿ, ವಿಜ್ಞಾನಿಗಳು ಜೀವವು ಇರುವಿಕೆ ಮತ್ತು ಕೋಶದಲ್ಲಿರುವ ಡಿಎನ್ಎದ ಸಂಕೀರ್ಣತೆಯ ಕುರಿತು ವಿವರಿಸಬಲ್ಲ ಒಂದು ಸ್ವಾಭಾವಿಕವಾದ ಕಾರಣವನ್ನು ಐದು

ದಶಕಗಳಿಂದ ಹುಡುಕುತ್ತಿದ್ದಾರಾದರೂ, ಅಂತಹ ಯಾವದೇ ಜೀವ-ಮೂಲದ ಊಹೆಯ ಕುರಿತು ಪುರಾವೆಯನ್ನು ಒದಗಿಸುವದಕ್ಕೆ ಇದುವರೆಗೂ ವಿಫಲರಾಗಿರುತ್ತಾರೆ.[26] ಅವರು ಒಂದು ದಿನ "ಆದಿಯಲ್ಲಿ *ವಿಧಿಯು* ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿತು" ಎಂಬುದು ಸಾಭಿತುಪಡಿಸಲ್ಪಡುವದು ಎಂಬುದಾಗಿ ನಿರೀಕ್ಷೆಗೆ ವಿರುದ್ಧವಾಗಿ ನಿರೀಕ್ಷೆಯನ್ನಿಟ್ಟುಕೊಳ್ಳುವದನ್ನು ಮುಂದುವರೆಸಿರುತ್ತಾರೆ. ಒಬ್ಬ ಸೃಷ್ಟಿಕರ್ತನು ಇದ್ದಾನೆಂಬುದರಲ್ಲಿ ಅವರಿಗಿರುವ ಅಪನಂಬಿಕೆಗೆ ಕಾರಣವು ಜೀವದ ಸ್ವಭಾವ ಹಾಗೂ ಅದರ ಮೂಲದ ಕುರಿತು ಪುರಾವೆಯ ಕೊರತೆಯಿದೆ ಎಂಬುದಲ್ಲ; ಬದಲಾಗಿ, ಅದು "ನೋಡಲಾರದವರಷ್ಟು ಕುರುಡರು ಬೇರೆ ಯಾರೂ ಇಲ್ಲ" ಎಂಬ ಹಳೆಯ ಗಾದೆಗೆ ದೃಷ್ಟಾಂತವಾಗುವಂತೆ ಕಾಣಿಸುತ್ತದೆ.

## ದೇವರು ಮತ್ತು ಆದಿಯಲ್ಲಿನ ಉದ್ದೇಶಗಳು (ಅಧ್ಯಾಯ 1)

*ದೇವರು ಸೃಷ್ಟಿಯ ಮುಂಚೆಯೇ ಕ್ರಿಸ್ತನಲ್ಲಿ ಒಂದು ಉದ್ದೇಶವನ್ನು ಹೊಂದಿದ್ದನು.* ಆದಿಕಾಂಡದ ಲೇಖಕನು "ಆದಿಯಲ್ಲಿ" ಎಂಬ ಮಾತುಗಳನ್ನು ಬರೆದ ವೇಳೆ, "ಆದಿ"ಯ ಮುಂಚೆ ತಂದೆಯಾದ ದೇವರನ್ನು ಹೊರತುಪಡಿಸಿ ಬೇರೆ ಏನೂ ಅಸ್ತಿತ್ವದಲ್ಲಿರಲಿಲ್ಲ ಎಂಬುದು ಆತನ ತಾತ್ಪರ್ಯವಾಗಿರಲಿಲ್ಲ. ಯೇಸುವು, ಶಿಲುಬೆಯ ನೆರಳಲ್ಲಿ, ತಂದೆಗೆ ಪ್ರಾರ್ಥನೆ ಮಾಡಿದನು ಮತ್ತು ಹೀಗೆ ಹೇಳುವ ಮೂಲಕ ಮುಕ್ತಾಯಗೊಳಿಸಿದನು, "ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿದಿ" (ಯೋಹಾನ 17:24). ಇದು ನಿತ್ಯತ್ವದ ಕಡೆಗೆ ಪುನಃ ಸಾಗುವ ಸಂಗತಿಯೊಂದನ್ನು ಪ್ರಕಟಗೊಳಿಸುತ್ತದೆ - ಪುನಃ "ಆದಿಯಲ್ಲಿ" ಎಂಬ ಪದಗುಚ್ಛಕ್ಕೆ ನಡಿಸುತ್ತದೆ. ಕ್ರೈಸ್ತರನ್ನು ಸೂಚಿಸಿ ಬರೆಯುವ ವೇಳೆ, ಅಪೊಸ್ತಲನಾದ ಪೌಲನು ಹೀಗೆ ಹೇಳಿದನು, "[ದೇವರು] ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ [ನಿಮ್ಮನ್ನು] ಆರಿಸಿಕೊಂಡನು" (ಎಫೆಸ 1:4); ಆದದರಿಂದ, ಆದಿಯ ಮುಂಚೆ, ಒಂದು ಜಡವಾದ ಸ್ಥಿತಿಗಿಂತಲೂ ಬೇರೆಯಾದ ಸಂಗತಿಯೊಂದು ಅಸ್ತಿತ್ವದಲ್ಲಿತ್ತು. ಒಂದು ನಿರ್ಣಯವು ಮಾಡಲ್ಪಟ್ಟಿತು, ಮತ್ತು ಅದರಲ್ಲಿ ದೇವರ ಚಿತ್ತವು ತೊಡಗಿಸಿಕೊಂಡಿತ್ತು ಮತ್ತು ಯೇಸು ಕ್ರಿಸ್ತನ ಮುಖಾಂತರವಾಗಿ ನಮ್ಮ ಪರವಾಗಿ ಯೋಚಿಸಲ್ಪಟ್ಟದ್ದಾಗಿತ್ತು.

*ದೇವರು ಕ್ರಿಸ್ತನ ಶಿಲುಬೆಯ ಮೂಲಕವಾಗಿ ತನ್ನ ಪ್ರೀತಿ ಮತ್ತು ಉದ್ದೇಶವನ್ನು ವ್ಯಕ್ತಪಡಿಸಬೇಕೆಂದು ಸೃಷ್ಟಿಯ ಮುಂಚೆಯೇ ಯೋಜನೆ ಮಾಡಿದ್ದನು.* ದೇವರು ಪುರುಷನನ್ನು ಮತ್ತು ಸ್ತ್ರೀಯನ್ನು ಉಂಟು ಮಾಡಿ ಅವರಿಗೆ ಸ್ವತಂತ್ರ ಚಿತ್ತವನ್ನು ಕೊಡುವದಕ್ಕೆ ಮುನ್ನ, ಅವರು ಕ್ರಮೇಣದಲ್ಲಿ ಖಂಡಿತವಾಗಿಯೂ ಕೆಟ್ಟ ನಿರ್ಣಯಗಳನ್ನು ಮಾಡುವರು ಮತ್ತು ಪಾಪ ಮಾಡುವರು ಎಂಬುದನ್ನು ಬಲ್ಲವನಾಗಿದ್ದನು; ಆದದರಿಂದ, ಅಂತಿಮವಾಗಿ ಅವರಿಗೆ ಕ್ಷಮಾಪಣೆ ಮತ್ತು ಒಬ್ಬ ರಕ್ಷಕನ ಅಗತ್ಯ ಬೀಳುವದೆಂದು ಬಲ್ಲವನಾಗಿದ್ದನು. ಕೆಲವು ಸಾರಿ ಜನರು ಹೀಗೆ ಕೇಳುತ್ತಾರೆ, "ಮಾನವರು ಅನಿವಾರ್ಯವಾಗಿ ಪಾಪವನ್ನು ಮಾಡುವರು, ತಮಗೆ ಮತ್ತು ಇತರರಿಗೆ ನೋವುಂಟು ಮಾಡುವರು, ಹಾಗೂ ಅಂತಿಮವಾಗಿ ಆತನ ಹೃದಯಕ್ಕೆ ವೇದನೆಯನ್ನುಂಟು ಮಾಡುವರು ಎಂಬುದು ದೇವರಿಗೆ ಗೊತ್ತಿದ್ದರೆ, ಆತನು ಮಾನವರನ್ನು ಏಕೆ ಸ್ವತಂತ್ರ ಚಿತ್ತವಿಲ್ಲದೆ ಏಕೆ ಸೃಷ್ಟಿಸಲಿಲ್ಲ?"

ಅದೇ ಪ್ರಶ್ನೆಯನ್ನು ಮಾನವರ ಕುರಿತು ಕೇಳಬಹುದಾಗಿದೆ: ಗಂಡಂದಿರು ಮತ್ತು ಹೆಂಡತಿಯರಿಗೆ ತಾವು ಲೋಕದಲ್ಲಿ ಬರಮಾಡುವ ಚಿಕ್ಕ ಕೂಸುಗಳು ಮುಂದೊಂದು ದಿನ ತಮಗೆ ಅವಿಧೇಯವಾಗುವದು ಮತ್ತು ಅವರ ಹೃದಯಗಳಿಗೆ ವೇದನೆಯನ್ನು ಸಹ ಉಂಟು

ಮಾಡುವರೆಂದು ತಿಳಿದಿದ್ದಲ್ಲಿ, ಜನರು ಏಕೆ ಮಕ್ಕಳನ್ನು ಹುಟ್ಟಿಸುತ್ತಲೇ ಇದ್ದಾರೆ? ದೇವರಿಗೆ ಅಥವಾ ಮಾನವರಿಗೆ ಅವಿಧೇಯರಾಗದಂತಹ ಮಕ್ಕಳ ಬದಲಾಗಿ ಪರ್ಯಾಯವಾಗಿ ನಿರ್ಮಿಸಬಹುದಾದ ಸಂಭಾವ್ಯವೆಂದರೆ ಎಂದಿಗೂ ಗುಣಗುಟ್ಟದೆ ತಮಗೆ ಕೊಡುವ ಆಜ್ಞೆಗಳಿಗೆ ಯಾವಾಗಲೂ ವಿಧೇಯರಾಗುವಂತೆ ಕಾರ್ಯಕ್ರಮಗೊಳಿಸಿ ಬಿಟ್ಟು ಬಿಡಬಹುದಾಗ ಯಂತ್ರಮಾನವರನ್ನು ಸೃಷ್ಟಿಸುವದೇ ಆಗಿರುತ್ತದೆ. ಅಂತಹ ಒಂದು ಬರಡಾದ, ಭಾವವಿಲ್ಲದ ಜಗತ್ತಿನಲ್ಲಿ ಯಾರೂ ಜೀವಿಸುವದಕ್ಕೆ ಬಯಸುವದಿಲ್ಲ, ಮತ್ತು ದೇವರು ಬಹುಶಃ ಅಂತಹ ಸೃಷ್ಟಿಯ ಸಾಧ್ಯತೆಯನ್ನು ಕುರಿತು ಎಂದಿಗೂ ಯೋಚನೆಯನ್ನೇ ಮಾಡಿರಲಿಕ್ಕಿಲ್ಲ. ಆತನು ತನ್ನ ಸ್ವರೂಪದಲ್ಲಿ ರೂಪಿಸಲ್ಪಟ್ಟಿರುವ ಮತ್ತು ಸ್ವತಂತ್ರ ಚಿತ್ತವುಳ್ಳ ಮಾನವ ಜೀವಿಗಳನ್ನೊಳಗೊಂಡ ಒಂದು ಜಗತ್ತನ್ನು ಆತನು ಸೃಷ್ಟಿಸಿದನು (1:26, 27).

ಮಾನವರು ಪಾಪ ಮಾಡುವರು ಮತ್ತು ಅವರಿಗೆ ಒಬ್ಬ ರಕ್ಷಕನ ಅಗತ್ಯವಾಗುವದು ಎಂದು ದೇವರು ಸೃಷ್ಟಿಯ ಮುಂಚೆಯೇ ಬಲ್ಲವನಾಗಿದ್ದನು. ಕಾಲವು ಪರಿಪೂರ್ಣವಾದಾಗ, ಆತನು ತನ್ನ ಮಗನನ್ನು ಶಿಲುಬೆಯ ಮೇಲೆ ಮರಣಿಸುವ ಮೂಲಕ ನಮ್ಮ ಪಾಪಗಳಿಗಾಗಿರುವ ದಂಡನೆಗಾಗಿ ಈಡು ಕೊಡುವಂತೆ ಲೋಕದಲ್ಲಿ ಕಳುಹಿಸುವ ಮೂಲಕ ತನ್ನ ಪ್ರೀತಿಯ ಅಂತಿಮವಾದ ಪ್ರದರ್ಶನವನ್ನು ಮಾಡಿ ತೋರಿಸಲು ಉದ್ದೇಶಿಸಿದನು (ಯೋಹಾನ 3:16). ಪೇತ್ರನು ಯೇಸುವಿನ ಮರಣ ಹಾಗೂ ಪುನರುತ್ಥಾನಗಳನ್ನು ಕಣ್ಣಾರೆ ಕಂಡ ಬಳಿಕ, ದೇವರು ನಜರೇತಿನ ಯೇಸುವನ್ನು ಅವರ ಮುಂದೆ ನಡಿಸಲ್ಪಟ್ಟ ಪ್ರಶ್ನಾತೀತವಾದ ಅದ್ಭುತಗಳಿಂದ, ಮಹತ್ಕಾರ್ಯಗಳಿಂದ, ಮತ್ತು ಸೂಚಕಕಾರ್ಯಗಳಿಂದ ಅವರಿಗೆ ಪ್ರಮಾಣೀಕರಿಸಿದ್ದನು ಎಂಬುದಾಗಿ ಪೇತ್ರನು ಯೆಹೂದ್ಯರಿಗೆ ಪಂಚಾಶತ್ತಮ ದಿನದಂದು ಜ್ಞಾಪಕಗೊಳಿಸಿದನು. ಬಳಿಕ ಆತನು ಯೇಸುವಿನ ಶಿಲುಬೆಯ ಮರಣವು ವಾಸ್ತವಿಕದಲ್ಲಿ "ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್‍ಜ್ಞಾನಕ್ಕೂ ಅನುಸಾರವಾಗಿ" ಸಂಭವಿಸಿತು ಎಂಬುದಾಗಿ ಹೇಳಿದನು, ಮತ್ತು ಆತನ ಪುನರುತ್ಥಾನಕ್ಕೆ ಹಾಗೂ ಪರಲೋಕಾರೋಹಣಕ್ಕೆ ಇತರ ಅಪೊಸ್ತಲರು ಸಾಕ್ಷಿಗಳಾಗಿರುತ್ತಾರೆ, ಅಲ್ಲಿ ಈಗ ಆತನು "ಒಡೆಯನಾಗಿಯೂ ಕ್ರಿಸ್ತನಾಗಿಯೂ" ಆಳ್ವಿಕೆ ಮಾಡುತ್ತಾನೆ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:22-24, 32-36).

ದೇವರು ಕೊಲೆಗಾರರನ್ನು ಅವರ ಚಿತ್ತಕ್ಕೆ ವಿರುದ್ಧವಾಗಿ ಯೇಸುವನ್ನು ಕೊಲ್ಲುವಂತೆ ಒತ್ತಾಯಿಸಿದನೆಂಬುದು ಇದರ ಅರ್ಥವಲ್ಲ. ದುಷ್ಟರು ತನ್ನ ಮಗನನ್ನು ತಿರಸ್ಕರಿಸುವರು ಎಂಬುದನ್ನು ದೇವರು ಮೊದಲೇ ಬಲ್ಲವನಾಗಿದ್ದನು ಎಂಬುದಷ್ಟೆ ಅದರರ್ಥ. ಯೇಸುವಿನ ಮರಣವು ಒಂದು ದುರಂತಕರ ಆಕಸ್ಮಿಕ ಅಥವಾ ಒಂದು ದುರಾದೃಷ್ಟಕರವಾದ ತಪ್ಪು ಆಗಿರಲಿಲ್ಲ; ಬದಲಾಗಿ, ಅದು ಸ್ವಭಾವದಲ್ಲಿ ಯಜ್ಞದಿಂದ ಕೂಡಿತ್ತು ಮತ್ತು ಅದು "ಆತನು ಜಗದುತ್ಪತ್ತಿಗೆ ಮೊದಲೇ ಗೊತ್ತು ಮಾಡಲ್ಪಟ್ಟಿತ್ತು ['ನೇಮಿಸಲ್ಪಟ್ಟಿತ್ತು'; NRSV]" (1 ಪೇತ್ರ 1:20). ಅದೇ ರೀತಿಯಲ್ಲಿಯೇ, ಪೌಲನು ಬರೆದದ್ದೇನೆಂದರೆ ದೇವರು "ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು. ಆತನು ಅನಾದಿಕಾಲದಲ್ಲಿ ಆ ಕೃಪೆಯನ್ನು ಕ್ರಿಸ್ತ ಯೇಸುವಿನಲ್ಲಿ ನಮಗೆ ಅನುಗ್ರಹಿಸಿದನು" (2 ತಿಮೊಥೆ 1:9, 10). ಸ್ಪಷ್ಟವಾಗಿರುವಂತೆ, ಜಗದುತ್ಪತ್ತಿಗೆ ಮುನ್ನ - ಅನಾದಿ ಕಾಲದಿಂದಲೂ - ಏನೋ ಒಂದು ಅಸ್ತಿತ್ವದಲ್ಲಿತ್ತು ಮತ್ತು ಆ ಏನೋ ಎಂಬುದು ಒಂದು ತಟಸ್ಥ ಅಥವಾ ವ್ಯಕ್ತಿತ್ವವಿಲ್ಲದ್ದು ಆಗಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಒಬ್ಬ ರಕ್ಷಕನ, ಅಂದರೆ ತನ್ನ ಮಗನಾದ ಯೇಸು ಕ್ರಿಸ್ತನ ಮೂಲಕವಾಗಿ ತನ್ನ ಹೇರಳವಾದ ಪ್ರೀತಿ ಮತ್ತು ಕೃಪೆಗಳನ್ನು ಸುರಿಸಬೇಕೆಂಬುದು ದೇವರ ವೈಯಕ್ತಿಕ ಉದ್ದೇಶ ಆಗಿತ್ತು

(ಯೋಹಾನ 3:16). ಮನುಷ್ಯನಿಗೆ ಯೇಸುವನ್ನು ಕರ್ತನೆಂದು ಅಂಗೀಕರಿಸಿಕೊಳ್ಳುವ ಇಲ್ಲವೆ ಆತನನ್ನು ತಿರಸ್ಕರಿಸುವ ಸ್ವತಂತ್ರ ಚಿತ್ತವು ಕೊಡಲ್ಪಟ್ಟಿದೆ. ನಾವು ಸುವಾರ್ತೆಯ ಸಂದೇಶವನ್ನು ನಂಬುವ ಮೂಲಕ, ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡುವ ಮೂಲಕ, ಕ್ರಿಸ್ತನು ದೇವರ ಕುಮಾರನೆಂದು ಆತನಲ್ಲಿ ನಮ್ಮ ನಂಬಿಕೆಯನ್ನು ಅರಿಕೆ ಮಾಡಿ ಆತನ ವಿಮೋಚಿಸಲ್ಪಟ್ಟ ರಕ್ತದೊಳಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರಾಗಿ ಆತನನ್ನು ನಮ್ಮ ರಕ್ಷಕನಾಗಿ ಧರಿಸಿಕೊಳ್ಳುವ ಮೂಲಕವಾಗಿ ರಕ್ಷಣೆಯನ್ನು ಹೊಂದಬಹುದು (ರೋಮಾ 10:9-13; ಗಲಾತ್ಯ 3:27; 1 ಪೇತ್ರ 1:18, 19).

*ಒಬ್ಬ ವೈಯಕ್ತಿಕ ದೇವರು ಮಾತ್ರವೇ ಮಾನವರಿಗೆ ಉದ್ದೇಶವನ್ನು ಮತ್ತು ಅರ್ಥವನ್ನು ಒದಗಿಸಬಲ್ಲನು.* ಸುವಾರ್ತೆಯಲ್ಲಿನ ಶುಭವಾರ್ತೆಯ ಒಂದು ಭಾಗವೆಂದರೆ ದೇವರು ಒಂದು ವೈಯಕ್ತಿಕವಲ್ಲದ ಶಕ್ತಿಯಲ್ಲ ಎಂಬುದೆ: ಆತನು ಗ್ರೀಕ್ ತತ್ವಜ್ಞಾನದ ಕದಲಲಾರದ ಚಲನೆಗಾರನೂ ಅಲ್ಲ ಅಥವಾ ಮಾನವರಿಗೋಸ್ಕರ ಅಭಿಲಾಷೆ, ಭಾವಗಳು, ಕಳಕಳಿ, ಪ್ರೀತಿ, ಅಥವಾ ಉದ್ದೇಶಗಳಿಲ್ಲದ ಮಿಕ್ಕ ಎಲ್ಲಾ ಕಾರಣಗಳ ಮತ್ತು ಪರಿಣಾಮಗಳ ಕಾರಣನಾಗಲಿ ಸಹ ಅಲ್ಲ. ಜೀವವುಳ್ಳ ಅಥವಾ ನಿರ್ಜೀವವಾದದ್ದಾಗಿರಲಿ ದೇವರೆಂದು ಗುರುತಿಸಲ್ಪಡುವಂತೆ, ಆತನು ಪೂರ್ವಾತ್ಯದ ಸರ್ವದೇವತಾರಾಧನೆಯ ಧರ್ಮಗಳಲ್ಲಿನ ವೈಯಕ್ತಿಕವಲ್ಲದ ಎಲ್ಲವೂ ಅಲ್ಲ. ಬದಲಾಗಿ, ಆತನು ಸಕಲ ಸಂಗತಿಗಳನ್ನು ಮತ್ತು ಜೀವಿಗಳನ್ನು - ವಿಶೇಷವಾಗಿ, ಆತನ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟ ಮಾನವನನ್ನು - ಸೃಷ್ಟಿಸಿರುವ ಒಬ್ಬ ವೈಯಕ್ತಿಕ ದೇವರಾಗಿದ್ದಾನೆ. ಕೆಲವು ಜನರು ಎಷ್ಟೇ ಪ್ರೀತಿ ಯೋಗ್ಯರಲ್ಲದೆ ಇರಬಹುದಾದರೂ, ಆತನು ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರೀತಿಸುತ್ತಾನೆ. ಒಬ್ಬ ವೈಯಕ್ತಿಕ ದೇವರು ಮಾತ್ರವೇ ಮನುಷ್ಯನ ವ್ಯಕ್ತಿತ್ವವನ್ನು ವಿವರಿಸಬಲ್ಲನು ಮತ್ತು ತನ್ನ ದೈವಿಕ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟ ಜೀವಿಯಾಗಿ ಆತನಿಗೆ ಘನತೆಯನ್ನು ಕೊಡಬಲ್ಲನು. ಪ್ರತಿಯಾಗಿ ಇದು, ಮಾನವ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಒಂದು ತಳಹದಿಯನ್ನು ಒದಗಿಸುತ್ತದೆ ಮತ್ತು ಇತರರು ಸಹ ದೇವರ ಸ್ವರೂಪದಲ್ಲಿರುವದರಿಂದ ಅವರನ್ನು ಪ್ರೀತಿ ಹಾಗೂ ಗೌರವದಿಂದ ಕಾಣುವ ಅಗತ್ಯತೆಯನ್ನು ಒದಗಿಸುತ್ತದೆ.

ಸೃಷ್ಟಿಗೆ ಒಂದು ಉದ್ದೇಶವಿರುತ್ತದೆ, ಮತ್ತು ಮಾನವ ಜನಾಂಗವು ಚಲಿಸುತ್ತಿದೆ - ಒಂದು ಗುರಿಯ ಕಡೆಗೆ ಸಾಗುತ್ತಿದೆ. ದೇವರು ಒಂದು ಸಮಸ್ತವನ್ನು ಕ್ರಿಸ್ತನಲ್ಲಿ ಒಂದುಗೂಡಿಸುವನು (ಎಫೆಸ 1:10). ನಮಗೆ ನೇಮಕವಾದ ಗಮ್ಯತೆಯು ಕರ್ತನ ನ್ಯಾಯತೀರ್ಪಿನ ಸಿಂಹಾಸನದ ಮುಂದೆ ಕಾಣಿಸಿಕೊಳ್ಳುವದಾಗಿದೆ, ಅಲ್ಲಿ ಪ್ರತಿಯೊಬ್ಬನಿಗೆ "ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವನು" (2 ಕೊರಿಂಥ 5:10).

*ಮಾನವರನ್ನು ರಕ್ಷಿಸಬೇಕೆಂಬ ದೇವರು ಉದ್ದೇಶವು ಮಾನವನ ಸ್ವತಂತ್ರ ಚಿತ್ತದ ಪ್ರತಿಕ್ರಿಯೆಯ ಮೇಲೆ ಅನುಗುಣವಾಗಿ ರೂಪಿಸಲ್ಪಟ್ಟಿದೆ.* ರಕ್ಷಣೆಯು ಷರತ್ತುರಹಿತವಾಗಿ ಪೂರ್ವನೇಮಕಗೊಂಡಿರುವದಿಲ್ಲ. ದೇವರು "ಯಾವನಾದರೂ ನಾಶವಾಗುವದರಲ್ಲಿ ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದಾನೆ" (2 ಪೇತ್ರ 3:9). "ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಆತನ ಚಿತ್ತವಾಗಿದೆ" ಎಂಬುದು, ವಿಶೇಷವಾಗಿ, ನಮ್ಮ ಪಾಪಗಳಿಗೋಸ್ಕರ ಏಕೈಕ ಈಡು ಯೇಸುವೇ ಎಂಬ ಸತ್ಯದ ಪರಿಜ್ಞಾನಕ್ಕೆ ಬರಬೇಕೆಂಬುದು ಆತನ ಬಯಕೆಯಾಗಿದೆ (1 ತಿಮೊಥೆ 2:4-6). ಕ್ರಿಸ್ತನು ಎಲ್ಲರನ್ನೂ ತನ್ನ ಬಳಿಗೆ ಬರುವಂತೆ ಸನ್ನೆ ಮಾಡುತ್ತಾನೆ (ಮತ್ತಾಯ 11:28), ಹಾಗೆ

ಮಾಡುವಂತೆ ಆತನು ಯಾರೊಬ್ಬನನ್ನೂ ಒತ್ತಾಯಿಸುವದಿಲ್ಲ. ಸುವಾರ್ತೆಯನ್ನು ಆಲಿಸುವ ಪ್ರತಿಯೊಬ್ಬನು ಕರ್ತನಲ್ಲಿ ನಂಬಿಕೆಯಿಡುವವನಾಗಿ ಪ್ರತಿಕ್ರಿಯಿಸುವ ಮತ್ತು ಕ್ರಿಸ್ತನಲ್ಲಿ ಒಂದು ನೂತನ ಸೃಷ್ಟಿಯಾಗುವದಕ್ಕಾಗಿ ಆತನ ಚಿತ್ತಕ್ಕೆ ವಿಧೇಯನಾಗುವದಕ್ಕೆ ಒಂದು ಸದವಕಾಶವನ್ನು ಹೊಂದಿದ್ದಾನೆ (ಮಾರ್ಕ 16:16; ಯೋಹಾನ 3:3-5; ಅಪೊಸ್ತಲರ ಕೃತ್ಯಗಳು 2:38-40; 2 ಕೊರಿಂಥ 5:17).

## ಮನುಷ್ಯನಲ್ಲಿ ದೇವರ ಸ್ವರೂಪವಿರುವದಕ್ಕೆ ಪುರಾವೆ (1:26-28)

ದೈವಶಾಸ್ತ್ರಜ್ಞರು ಮನುಷ್ಯನಲ್ಲಿರುವ ದೇವರ ಸ್ವರೂಪದ ಲಕ್ಷಣ ನಿರೂಪಿಸುವದಕ್ಕೆ ಎರಡು ಸಾವಿರ ವರ್ಷಗಳಿಂದಲೂ ಕಷ್ಟಪಟ್ಟಿರುತ್ತಾರೆ, ಆದರೆ ಎಲ್ಲರಿಗೂ ಸಮ್ಮತವಾಗಬಲ್ಲ ಸಾರ್ವತ್ರಿಕ ಅರ್ಥನಿರೂಪಣೆಯೊಂದಕ್ಕೆ ತಲುಪಲು ಯಶಸ್ವಿಯಾಗಿರುವದಿಲ್ಲ. ಈ ಲೋಕದಲ್ಲಿ ಮಾನವು ವಿಶಿಷ್ಟ ಜೀವಿಯಾಗಿದ್ದಾನೆ, ಮತ್ತು ಆತನಿಗಿರುವ ಗುಣಾತ್ಮಕ ವ್ಯತ್ಯಾಸಗಳು ಆತನನ್ನು ದೇವರ ಸ್ವರೂಪದಲ್ಲಿ ಮಾಡಲ್ಪಟ್ಟವನಾಗಿ ಪ್ರಾಣಿಗಳಿಂದ ಪ್ರತ್ಯೇಕಗೊಳಿಸುತ್ತವೆ.

*ಭೂಮಿಯ ಮೇಲೆ ಮತ್ತು ಪ್ರಾಣಿ ಜಗತ್ತಿನ ಮೇಲೆಲ್ಲಾ ಮನುಷ್ಯನಿಗೆ ಮಾತ್ರವೇ ದೊರೆತನ (ಆಳ್ವಿಕೆ) ಇರುತ್ತದೆ.* ದೇವರು ಮನುಷ್ಯನನ್ನು ಉಂಟು ಮಾಡಿದಾಗ, ಆತನು ಅವನಿಗೆ ಪ್ರಾಣಿಗಳ ಮೇಲೆ ದೊರೆತನವನ್ನು ಕೊಟ್ಟನು, ಆದರೆ ಆತನು ಒಂದು ಪವಿತ್ರ ಭರವಸದ ಒಬ್ಬ ಮನೆವಾರ್ತೆಯವನಂತೆ ದೇವರ ಅಡಿಯಲ್ಲಿದ್ದಾನೆ. ಮನುಷ್ಯನು ಎರಡು ಜಗತ್ತುಗಳ ಮಧ್ಯದಲ್ಲಿ ಜೀವಿಸುವನು: ಶಾರೀರಿಕ ಮತ್ತು ಆತ್ಮೀಕ. ಪ್ರಾಣಿಗಳ ರೀತಿಯಲ್ಲಿ, ಆತನಿಗೆ ಒಂದು ಮಣ್ಣಿನಿಂದ ಮಾಡಲ್ಪಟ್ಟಿರುವ ಮತ್ತು ಪೋಷಣೆ ಮಾಡತಕ್ಕ ಶಾರೀರಿಕ ದೇಹವಿರುತ್ತದೆ. ಆತನಿಗೆ ಸಹ ಗಾಳಿ, ನೀರು, ಮತ್ತು ಪೌಷ್ಠಿಕಾಂಶಗಳು ಅಗತ್ಯವಿರುತ್ತದೆ; ಆದರೆ ಈತನು ದೇವರ ಸ್ವರವನ್ನು ಕೇಳಿಸಿಕೊಳ್ಳಬಲ್ಲ ಮತ್ತು ತನ್ನ ಕುರಿತಾಗಿರುವ ದೇವರ ಯೋಚನೆಗಳನ್ನು ಚಿಂತಿಸಬಲ್ಲ ಏಕೈಕ ಜೀವಿಯಾಗಿದ್ದಾನೆ (ನೋಡಿರಿ ಕೀರ್ತನೆ 8:3-9).

ಆದದರಿಂದ, ಪ್ರಾಣಿಗಳ ಮೇಲೆ ಮಾನವನಿಗಿರುವ ದೊರೆತನವು ಶಾರೀರಿಕ್ಕಿಂತಲೂ ಆತ್ಮೀಕವಾದದ್ದಾಗಿದೆ. ಅದು ಗುಣಕ್ಕೆ ಸಂಬಂಧಿಸಿದ್ದಾಗಿದೆಯೇ ಹೊರತು, ಪ್ರಮಾಣಕ್ಕೆ ಸಂಬಂಧಿಸಿದ್ದಲ್ಲ. ಮನುಷ್ಯನಿಗೆ ಒಂದು ನೀಲಿ ತಿಮಿಂಗಲಕ್ಕಿಂತಲೂ ದೊಡ್ಡದಾದ ಮೆದಳು ಇರುವದಿಲ್ಲ. ಆತನು ಒಂದು ಸಿಂಹದಷ್ಟು ಬಲಿಷ್ಠನಾಗಲಿ ಅಥವಾ ಚಿರತೆಯಷ್ಟು ವೇಗಿಯಾಗಲಿ ಆಗಿರುವದಿಲ್ಲ. ಆತನ ಕಣ್ಣಿನ ದೃಷ್ಟಿಯು ಹದ್ದಿನ ದೃಷ್ಟಿಗೆ ಸರಿಸಾಟಿಯಾಗಲಾರದು. ಮನುಷ್ಯನು ಪ್ರಾಣಿಗಳ ಮೇಲೆ ಹೊಂದಿರುವ ಸರ್ವೋನ್ನತೆಯು ಪ್ರಮಾಣೀಕರಿಸಲ್ಪಡುವಂತಹ ಶಾರೀರಿಕ ಕ್ಷೇತ್ರದ ಸಂಗತಿಯಲ್ಲ; ಬದಲಾಗಿ, ಅದು ಪ್ರತಿಯೊಬ್ಬ ವ್ಯಕ್ತಿಯಲ್ಲಿ ದೇವರು ನಿರ್ಮಿಸಿರುವ ಒಂದು ರೀತಿಯ ಆತ್ಮೀಕ ಗುಣವಾಗಿರತಕ್ಕದ್ದು.

*ಮಾನವನು ಮಾತ್ರವೇ ತನ್ನನ್ನು ಮೀರಿಸಿಕೊಳ್ಳಬಲ್ಲನು.* ಪ್ರಾಣಿಗಳು ಯೋಚಿಸಬಲ್ಲವು, ಆದರೆ ಮಾನವನು ತನ್ನನ್ನು ಮೀರಿ ಮೇಲೆದ್ದು ಯೋಚಿಸುವ ಕುರಿತಾಗಿ ಆಲೋಚಿಸಬಲ್ಲನು. ಆತನು ಶ್ರೇಷ್ಠವಾದ ಪ್ರಶ್ನೆಗಳನ್ನು ಕೇಳಬಲ್ಲನು: "ನಾನು ಯಾರು?"; "ನಾನು ಎಲ್ಲಿಂದ ಬಂದೆನು?"; "ನಾನು ಇಲ್ಲಿ ಏಕೆ ಇರುವೆನು?" ಮನುಷ್ಯನಿಗೆ ಮಾತ್ರವೇ ಗುರುತಿನ ಬಿಕ್ಕಟ್ಟು ಇರುತ್ತದೆ ಮತ್ತು ತನ್ನ ಮೂಲಗಳನ್ನು ಮತ್ತು ಜೀವನದಲ್ಲಿನ ಉದ್ದೇಶವನ್ನು ಕಂಡು ಹಿಡಿಯುವದಕ್ಕೆ ಪ್ರಯತ್ನಿಸುವನು. ಪ್ರಾಣಿಗಳು ಈ ವಿಷಯಗಳೊಂದಿಗೆ ಹೋರಾಟವನ್ನು ಅನುಭವಿಸುವದಿಲ್ಲ. ಅವುಗಳು ಕೇವಲ ಒಂದು ದಿನವನ್ನು ದಾಟಿ ಮತ್ತೊಂದು ದಿನದೊಳಕ್ಕೆ ಸಾಗುತ್ತವಷ್ಟೆ.

ಮನುಷ್ಯನಿಗೆ ಮಾತ್ರವೇ ಅನುಭವದಿಂದ ಕಲಿತುಕೊಳ್ಳುವ, ಜ್ಞಾನವನ್ನು ಸಂಪಾದಿಸಿಕೊಳ್ಳುವ, ಮತ್ತು ಮುಂದಿನ ಪೀಳಿಗೆಗಳಿಗೆ ಹೇಳಿ ಕೊಡುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಗತಕಾಲವು (ಇತಿಹಾಸ) ಪ್ರಾಮುಖ್ಯವಾಗಿರುವ ಏಕೈಕ ಜೀವಿಯು ಮಾನವನು ಮಾತ್ರವೇ ಆಗಿದ್ದಾನೆ. ಆತನು ಗತಕಾಲದಿಂದ ದತ್ತಾಂಶವನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾನೆ ಮತ್ತು ಪ್ರತಿಯೊಂದು ಪೀಳಿಗೆಯು ಹಿಂದಿನ ಪೀಳಿಗೆಗಿಂತಲೂ ಅಧಿಕ ಜ್ಞಾನವುಳ್ಳದ್ದಾಗುವಂತೆ ಅದನ್ನು ಹಸ್ತಾಂತರಿಸುತ್ತಾನೆ. ಮಾನವನು ಮೌಖಿಕವಾಗಿ ಮತ್ತು ಲಿಖಿತರೂಪ ಎರಡರಲ್ಲೂ ಜ್ಞಾನವನ್ನು ಸಂರಕ್ಷಿಸಿಡಬಲ್ಲನು, ಹೀಗೆ ಆತನ ಮಕ್ಕಳು ಹಾಗೂ ಮೊಮ್ಮಕ್ಕಳು ಎಲ್ಲವನ್ನೂ ಹೊಸದಾಗಿ ಕಂಡುಕೊಳ್ಳುವ ಅಗತ್ಯ ಬೀಳುವದಿಲ್ಲ.

*ಮಾನವನು ಮಾತ್ರವೇ ಜೀವನದ ಶಾರೀರಿಕ ಸಂಗತಿಗಳೊಂದಿಗೆ ನೆಮ್ಮದಿಯಿಲ್ಲದವನಾಗಿರುತ್ತಾನೆ.* ಭಾಗಶಃ ಇದು ಸತ್ಯವಾಗಿರಬಹುದು, ಯಾಕೆಂದರೆ ದೇವರು "ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ" (ಪ್ರಸಂಗಿ 3:11). (1) ಮನುಷ್ಯನು ತನ್ನಲ್ಲಿರುವ ಭೌತಿಕ ವಸ್ತುಗಳಿಂದ ಎಂದಿಗೂ ತೃಪ್ತಿಗೊಳ್ಳುವದಿಲ್ಲ. ಇನ್ನೊಂದು ಕಡೆ, ಪ್ರಾಣಿಗಳು ಜೀವನದ ಸರಳವಾದ ಅವಶ್ಯಕತೆಗಳಲ್ಲಿಯೇ ತೃಪ್ತಿಯಾಗಿರುತ್ತವೆ. (2) ಮನುಷ್ಯನು ತಾನು ಯಾರು, ತಾನು ಹೇಗೆ ಕಾಣಿಸುತ್ತಾನೆ, ತಾನೇನು ಬಲ್ಲನು, ತಾನೇನು ಅನುಭವಿಸುತ್ತಾನೆ, ಅಥವಾ ತಾನು ಯಾವ ಸಾಧನೆಗಳನ್ನು ಮಾಡುತ್ತಾನೆ ಎಂಬುದರ ಕುರಿತು ಎಂದಿಗೂ ತೃಪ್ತನಾಗಿರುವದಿಲ್ಲ. ಯಾವಾಗಲೂ ಹೊಸದನ್ನು ನೋಡಬೇಕು, ಆಲಿಸಬೇಕು, ಅಥವಾ ಅನುಭವಿಸಬೇಕೆಂಬಂತಹ ಬಯಕೆಗಳು ಪ್ರಾಣಿಗಳಿರುವದಿಲ್ಲ. ತಮ್ಮ ಸುತ್ತಲಿನ ಮಿಕ್ಕ ಪ್ರಾಣಿಗಳಿಗಿಂತಲೂ ತಾವು ಹೆಚ್ಚು ಯಶಸ್ವಿಯಾಗಿರಬೇಕೆಂಬ ಪ್ರಚೋದನೆಯನ್ನು ಸಹ ಅವುಗಳು ಹೊಂದಿರುವದಿಲ್ಲ. ಅವುಗಳು ಸರಳವಾದ, ವಿಶೇಷ ಘಟನೆಗಳಿಲ್ಲದ ಜೀವಿತಗಳಲ್ಲಿ ಸಂತೃಪ್ತವಾಗಿರುತ್ತವೆ, ಅಂತಹ ಜೀವಿತಗಳು ಮನುಷ್ಯರಿಗೆ ನಿರುತ್ಸಾಹಕರವಾಗಿರುತ್ತವಷ್ಟೆ. (3) ಮನುಷ್ಯನಿಗೆ ನೂತನ ಎಲ್ಲೆಗಳ ಕಡೆಗೆ ಸಾಗುವಂತೆ ಮಾಡುವ ಸಾಹಕರವಾದ ಮನೋಭಾವವು ಮನುಷ್ಯನಿಗಿರುತ್ತದೆ. ಆ ಮುಂದಿನ ನದಿಯ ಆಚೆಯಲ್ಲಿ, ಪರ್ವತ ಶ್ರೇಣಿಯ ಆಚೆ, ಅಥವಾ ಸಾಗರದಾಚೆ ಏನಿರುತ್ತದೆಂಬುದನ್ನು ಆತನು ಯಾವಾಗಲೂ ಕಂಡು ಹಿಡಿಯಲೇ ಬೇಕು ಎಂಬ ಹಂಬಲವಿರುತ್ತದೆ; ಆದರೆ ಅದು ಅಲ್ಲಿಗೇ ಮುಗಿಯುವದಿಲ್ಲ. ಆತನು ಚಂದ್ರನಲ್ಲಿ ಏನಿದೆ, ಇತರ ಗ್ರಹಗಳಲ್ಲಿ, ಮತ್ತು ದೂರದ ನಕ್ಷತ್ರಪುಂಜಗಳಲ್ಲಿ ಏನಿದೆ ಎಂಬುದನ್ನು ತಿಳಿಯಲು ಇಚ್ಛೆಸುತ್ತಾನೆ. ಪ್ರಾಣಿಗಳಿಗೆ ಅಂತಹ ಸಂಗತಿಗಳ ಬಗ್ಗೆ ಚಿಂತೆಯೇ ಇರುವದಿಲ್ಲ; ಅವುಗಳಿಗೆ ಬೇರೆ ಖಂಡಗಳು, ದೇಶಗಳು, ಅಥವಾ ಜಗತ್ತುಗಳ ಬಗ್ಗೆ ಪರಿಕಲ್ಪನೆ ಮಾಡಿಕೊಳ್ಳಲು ಸಾಮರ್ಥ್ಯವು ಇರುವದಿಲ್ಲ. ತನಗೆ ಅರಿವಿಲ್ಲದೆಯೇ, ಮನುಷ್ಯನು ಸಂಪೂರ್ಣಗೊಳಿಸಬೇಕು ಮತ್ತು ಪರಿಪೂರ್ಣತೆ ಸಾಧಿಸಬೇಕೆಂಬ ಆಕಾಂಕ್ಷೆಗೆ ಬಿದ್ದವನಾಗಿ, ತನ್ನಲ್ಲಿರುವ ದೇವರ ಸ್ವರೂಪಕ್ಕೆ ಸಾಕ್ಷಿತನ್ನು ಒದಗಿಸುತ್ತಾನೆ. ಮನುಷ್ಯನು ಕಾಲಕ್ಕಾಗಿ ಮತ್ತು ಪರಿಮಿತವಾಗಿರುವದಕ್ಕಾಗಿ ನಿರ್ಮಿಸಲ್ಪಡಲಿಲ್ಲ; ಬದಲಾಗಿ, ಆತನು ನಿತ್ಯತ್ವಕ್ಕಾಗಿ ನಿರ್ಮಿಸಲ್ಪಟ್ಟನು ಮತ್ತು ಅದು ಅಪರಿಮಿತವಾದಕ್ಕಾಗಿ ನಿರ್ಮಿಸಲ್ಪಟ್ಟನು: ದೇವರು. Augustineನು ಹೀಗೆ ಬರೆದನು, "ನೀನು ನಮ್ಮನ್ನು ನಿನಗೋಸ್ಕರ ರೂಪಿಸಿದಿ, ಮತ್ತು ನಮ್ಮ ಹೃದಯಗಳು ನಿನ್ನಲ್ಲಿ ವಿಶ್ರಮಿಸುವ ತನಕ ನೆಮ್ಮದಿಯಿಂದ ಇರುವದಿಲ್ಲ."[27]

*ಮನುಷ್ಯನು ಮಾತ್ರವೇ ಕರ್ತವ್ಯ ಪ್ರಜ್ಞೆಯಿರುವ ಒಬ್ಬ ನೈತಿಕ ಜೀವಿಯಾಗಿರುವನು.* ಆತನು ತಪ್ಪು ಮತ್ತು ಸರಿಗಳೊಂದಿಗೆ ತೊಳಲಾಡುತ್ತಾನೆ, ಮತ್ತು ಆತನು ಅಪರಾಧ

ಮನಸ್ಸಾಕ್ಷಿಯನ್ನು ಹೋಗಲಾಡಿಸಿಕೊಳ್ಳಲು ಹೋರಾಟ ಅನುಭವಿಸುತ್ತಾನೆ (ಯೋಹಾನ 8:7-11; ರೋಮಾ 2:12-16; 1 ಕೊರಿಂಥ 8:7-13; 1 ತಿಮೊಥೆ 1:19; 3:9; 4:2; 1 ಪೇತ್ರ 3:16-21). ಒಂದು ಮಗುವು ಜನಿಸಿದಾಗ, ಹೊಸದಾಗಿ ಜನಿಸಿರುವ ಕೂಸು ಮುಂದೊಂದು ದಿನ ಏನಾಗುವನು ಅಥವಾ ಏನು ಮಾಡುವನು ಎಂಬುದನ್ನು ತಂದೆತಾಯಿಗಳು ಬಲ್ಲವರಾಗಿರುವದಿಲ್ಲ. ಪ್ರತಿಯೊಂದು ಮಗುವು "ನನ್ನ ಜೀವಿತದೊಂದಿಗೆ ನಾನೇನು ಮಾಡಬೇಕು?" ಎಂಬಂತಹ ಪ್ರಶ್ನೆಗಳೊಂದಿಗೆ ಬೆಳೆಯುತ್ತದೆ. ಪ್ರಾಣಿಗಳು ಹುಟ್ಟರಿವಿನಂತೆ ನಡೆದುಕೊಳ್ಳುತ್ತವೆ; ಅವುಗಳಿಗೆ ದೈವವಿಧಿಯು ಕೊಡಲ್ಪಟ್ಟಿರುತ್ತದೆ ಮತ್ತು ಅದನ್ನು ನಂಬಿಗಸ್ತಿಕೆಯಿಂದ ನೆರವೇರಿಸುತ್ತವೆ. ಒಂದು ಬೆಕ್ಕು ಜನಿಸಿದಾಗ, ಅದು ಬೆಳೆದು ಏನಾಗುವದು ಮತ್ತು ಏನು ಮಾಡುವದೆಂದು ನಮಗೆ ಗೊತ್ತಿರುತ್ತದೆ: ಅದೊಂದು ಬೆಕ್ಕಾಗಿರಲಿದೆ ಮತ್ತು ಸ್ವಾಭಾವಿಕವಾಗಿ ಬೆಕ್ಕುಗಳು ಏನು ಮಾಡುತ್ತವೋ ಅದನ್ನೇ ಅದು ಮಾಡುವದು. Hamletನ ಗಾಢಚಿಂತನೆ ಕೇವಲ ಮನುಷ್ಯನಿಗೆ ಮಾತ್ರವೇ ಸಮಯೋಚಿತವಾಗಿರುತ್ತದೆ: "ಇರುವದೋ ಅಥವಾ ಬೇಡವೋ? ಅದೇ ಪ್ರಶ್ನೆಯಾಗಿದೆ."[28] ಮನುಷ್ಯನಿಗೆ ಮಾತ್ರವೇ ತನ್ನ ಜೀವಿತವು ಯಾವ ದಿಕ್ಕಿನೆಡೆಗೆ ಸಾಗಬೇಕೇಂದು, ತಾನು ಯಾವ ವಿಧವಾದ ಜೀವಿತವನ್ನು ನಡಿಸಲು ಬಯಸುತ್ತಾನೆ ಎಂಬುದನ್ನು ನಿರ್ಣಯಿಸಿಕೊಳ್ಳುವ ಸಾಮರ್ಥ್ಯವು ಇರುತ್ತದೆ. ಮನುಷ್ಯನು ಉದಾತ್ತನಾಗಿ, ಪ್ರೀತಿಸುವವನಾಗಿ, ಮತ್ತು ನೀತಿವಂತನಾಗಿ ಇರುವದಕ್ಕೆ ನಿರ್ಣಯಿಸಿಕೊಳ್ಳಬಲ್ಲನು; ಅಥವಾ ಆತನು ಅಗೌರವಕರವಾದವನಾಗಿ, ಸ್ವಾರ್ಥಿಯಾಗಿ, ಮತ್ತು ಕೆಟ್ಟವನಾಗಿ ಜೀವಿಸುವದಕ್ಕೆ ನಿರ್ಣಯಿಸಿಕೊಳ್ಳಬಲ್ಲನು. ಈ ವಿಧವಾದ ಆಯ್ಕೆಗಳು ಪ್ರಾಣಿಗಳಿಗೆ ಐಚ್ಛಿಕವಾಗಿರುವದಿಲ್ಲ ಯಾಕೆಂದರೆ ಅವುಗಳು ನೈತಿಕ ಜೀವಿಗಳಲ್ಲ.

ಮಾನವನಿಗೆ ಮಾತ್ರವೇ ಆತನನ್ನು ಕಲೆ, ಚಿತ್ರಕಲಾಕೃತಿ, ಕಾವ್ಯ, ಮತ್ತು ಪ್ರತಿಮೆಗಳ ನಿರ್ಮಾಣದಂಥವುಗಳನ್ನು ಮಾಡುವಂತೆ ನಡಿಸುವ ಸದಭಿರುಚಿಯ ಸ್ವಭಾವವು ಇರುತ್ತದೆ. ಮಾನವರು ಮಾತ್ರವೇ ತನ್ನ ಜೀವನೋಪಾಯಕ್ಕೆ ಯಾವದೇ ಬೆಲೆಯಿಲ್ಲದಂತಹ ಕಾರ್ಯವೊಂದಕ್ಕಾಗಿ ವಾರಗಳು ಅಥವಾ ತಿಂಗಳುಗಳ ವರೆಗೆ ಕೆಲಸ ಮಾಡುವಂತಹ ಜೀವಿಗಳಾಗಿದ್ದಾರೆ. ಸೃಜನಾತ್ಮಕತೆಯು ಸದಭಿರುಚಿಯ ವಿಕಾಸವಾದಿ ಮಾದರಿಗೆ ತದ್ವಿರುದ್ಧವಾಗಿರುತ್ತದೆ, ಇದು ಲಕ್ಷಾಂತರ ವರ್ಷಗಳ ಕಾಲದಲ್ಲಿ, ಆತನಿಗೆ ಬದುಕುಳಿಯುವದಕ್ಕೆ ಸಹಾಯ ಮಾಡುವಂತಹ ಕುಶಲತೆಗಳನ್ನು ಅಭಿವೃದ್ಧಿಪಡಿಸಿಕೊಂಡ ಮತ್ತು ಆತನ ಜೀವನೋಪಾಯಕ್ಕೆ ಕೊಡುಗೆಯನ್ನು ನೀಡದಂತಹ ಗುಣಸ್ವಭಾವಗಳನ್ನು ಬಿಟ್ಟು ಬಿಟ್ಟಂತಹ ಮಾದರಿಯಾಗಿರುತ್ತದೆ. ಇದು ಮನುಷ್ಯನಿಗೆ ಸಂಭವಿಸಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ; ಆತನ ಸದಭಿರುಚಿಯ ಒಲವುಗಳು ಬಿಟ್ಟು ಬಿಡಲ್ಪಡುವದರ ಬದಲಾಗಿ ಕಾಲವು ಕಳೆದಂತೆ ಇನ್ನಷ್ಟು ಹೆಚ್ಚು ಎದ್ದುಕಾಣುವಂತಾಗಿರುತ್ತವೆ. ಯಾವ ಪ್ರಾಣಿಗಳಿಗೂ ಸದಭಿರುಚಿಯ ವಿಷಯಗಳ ಬಗ್ಗೆ ಚಿಂತೆಯಿರುವದಿಲ್ಲ ಯಾಕೆಂದರೆ ಇವುಗಳು ಒಂದು ಪ್ರಾಣಿಯ ಹಿತಕ್ಕೋಸ್ಕರ ಯಾವ ಕೊಡುಗೆಯನ್ನೂ ನೀಡುವದಿಲ್ಲ. ಒಂದು ಪಕ್ಷಿಯು ನೂಲುಹುರಿಯಿಂದ ಚಂದವಾದ ದಾರಗಳನ್ನು ಎತ್ತಿಕೊಳ್ಳುತ್ತದೆ ಯಾಕೆಂದರೆ ಅವುಗಳು ಒಂದು ಗೂಡನ್ನು ಹೆಣೆಯುವದಕ್ಕೆ ಪ್ರಯೋಜನಕರವಾಗಿರುತ್ತವೆ. ಬೀವರ್ ಎಂಬ ಉಭಯಚರ ಪ್ರಾಣಿಯೊಂದು ಹುಟ್ಟರಿವಿನಿಂದ ತನ್ನ ಅಡ್ಡಗಟ್ಟೆಯನ್ನು ಬಲವಾಗಿ ಮತ್ತು ಕಾರ್ಯನಿರ್ವಹಿಸುವದಾಗಿ ಇರುವಂತೆ ಕಟ್ಟುತ್ತದೆ. ಸಮರೂಪತೆ ಮತ್ತು ವಿನ್ಯಾಸಗಳನ್ನೊಳಗೊಂಡ ಒಂದು ಸುಂದರವಾದ ಜಗತ್ತನ್ನು ಉಂಟು ಮಾಡಿರುವ ದೇವರು, ಮನುಷ್ಯನನ್ನು ಸಹ ಉಂಟು ಮಾಡಿ, ತನ್ನ ಸುತ್ತಲು ಬಣ್ಣಗಳು,

ರೂಪಗಳು, ಆಕಾರಗಳು, ಮತ್ತು ಕ್ರಮ ಜೋಡಣೆಗಳಲ್ಲಿ ಸಮತೋಲನವಿರುವಂತಹ ಸೌಂದರ್ಯ ಮತ್ತು ಸಮರೂಪತೆಯನ್ನು ನಿರ್ಮಿಸಿಕೊಳ್ಳಬೇಕೆಂಬ ಬಯಕೆಯನ್ನು ಅವನಲ್ಲಿಟ್ಟನು. ಈ ಆಶೀರ್ವಾದದಲ್ಲಿ ಮನುಷ್ಯನು ತನ್ನ ಅಂತಿಮ ಸಾರ್ಥಕತೆಯನ್ನು ದೇವರಲ್ಲಿ ಕಂಡುಕೊಳ್ಳುವದರ ಬದಲಾಗಿ ಸೌಂದರ್ಯದಲ್ಲಿ ಕಂಡುಕೊಳ್ಳಲು ಮುಂದಾಗಬಹುದಾದ ಒಂದು ಅಪಾಯವು ಸಹ ಇರುತ್ತದೆ. ಅನಿವಾರ್ಯವಾಗಿ, ಆ ಬಲೆಯಲ್ಲಿ ಸಿಕ್ಕಿಕೊಳ್ಳುವವನು, ಸಂತೋಷ ಮತ್ತು ಸಾರ್ಥಕತೆಗಳನ್ನು ಕಂಡುಕೊಳ್ಳುವದರ ಬದಲಾಗಿ ಹತಾಶೆ ಮತ್ತು ವ್ಯರ್ಥತ್ವಗಳನ್ನು ಅನುಭವಿಸುವನು, ಬಹಳ ಕಾಲದ ಹಿಂದೆ "ಪ್ರಸಂಗಿ"ಗೆ ಅದೇ ಅನುಭವವಾಗಿತ್ತು (ಪ್ರಸಂಗಿ 1:1, 8; 2:1–11).

*ಮನುಷ್ಯನಿಗೆ ಮಾತ್ರವೇ ಸಮಾಧಿಯ ಆಚೆಯಲ್ಲಿ ಒಂದು ಭವಿಷ್ಯ ಜೀವಿತವಿರುವ ಭಾವನೆಯೊಂದು ಇರುತ್ತದೆ.* ಚಿಂಪಾಂಜಿ ಮತ್ತು ಆನೆಗಳಂತಹ ಪ್ರಾಣಿಗಳು ತಮ್ಮವರಲ್ಲಿ ಸತ್ತವರನ್ನು ಹೂಣಿಡುವವು ಎಂಬುದಾಗಿ ಹೇಳಿಕೊಳ್ಳುವ ಉಪಖ್ಯಾನ ರೂಪದ ವರದಿಗಳ ಹೊರತಾಗಿಯೂ, ಅಂತಹ ಕಥನಗಳಿಗೆ ಸಾಧಕವಾಗಿರುವ ಆಧಾರಗಳಿಗೆ ಯಾವದೇ ವೈಜ್ಞಾನಿಕ ಪ್ರಮಾಣೀಕರಣವು ಇನ್ನೂ ಸಿಕ್ಕಿರುವದಿಲ್ಲ. ಪ್ರಾಣಿಗಳು ಮರಣವನ್ನು ಎದುರಿಸುವವು ಮತ್ತು, ಸ್ವಲ್ಪ ಮಟ್ಟಿಗೆ, ಅದರ ನಿಮಿತ್ತ ಭಯಗೊಂಡು ಶೋಕಿಸುವಂತೆ ಕಾಣಿಸಬಹುದಾದರೂ, ಅವುಗಳು ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವದಿಲ್ಲ. ಮನುಷ್ಯನಲ್ಲಿರುವ ಯಾವದೋ ಒಂದು ಸಂಗತಿಯು ಮರಣ ಪವಿತ್ರತೆಯನ್ನು ಸೂಚಿಸುತ್ತದೆ. ಆತನು ಅದನ್ನು ಅಮೂಲ್ಯವೆಂದು ಕಾಣುತ್ತಾನೆ, ಆದರೆ ಅದನ್ನು ಒಂದು ಅಂತ್ಯವೆಂಬಂತೆ ಕಾಣುವದಿಲ್ಲ; ಆತನು ಅದನ್ನು ದಾಟಿ ಬದುಕುಳಿಯಲು ಅಪೇಕ್ಷಿಸುತ್ತಾನೆ (2 ಸಮುವೇಲ 12:19–23; ಕೀರ್ತನೆ 23:4–6). ಪ್ರಾಚೀನ ಸಮಾಜಗಳಲ್ಲಿ, ಮುಂದಿನ ಜಗತ್ತಿನಲ್ಲಿ ಏನಾದರೂ ಪ್ರಯೋಜನ ಅಥವಾ ಬೆಲೆಯಿರಬಹುದೆಂದು ನಂಬಿದ್ದರಿಂದ ಮರಣಿಸಿದ ತಮ್ಮ ಬಂಧುಗಳ ಶವದ ಜೊತೆಯಲ್ಲಿ ಅಮೂಲ್ಯ ವಸ್ತುಗಳನ್ನು ಸಹ ಹೂಣಿಡುತ್ತಿದ್ದರು. ದೇವರು ಮನುಷ್ಯನ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆಂಬುದಕ್ಕೆ ಇದು ಸಾಕ್ಷಿಯಾಗುತ್ತದೆ (ಪ್ರಸಂಗಿ 3:11).

ದೇವರು ಮನುಷ್ಯನನ್ನು ವಿಶಿಷ್ಟವಾಗಿ ನಿರ್ಮಿಸಿದನು. ಈ ವಿಶಿಷ್ಟತೆಯ ಆಶೀರ್ವಾದದೊಂದಿಗೆ ಸೃಷ್ಟಿಕರ್ತನಿಗೆ ಸೇವೆ ಮಾಡುವ ಮತ್ತು ಆತನನ್ನು ಸ್ತುತಿಸುವ ಒಂದು ವಿಶೇಷವಾದ ಜವಾಬ್ದಾರಿಯು ಜೋಡಿಸಲ್ಪಟ್ಟಿದೆ.

---

ಅಡಿಟಿಪ್ಪಣಿಗಳು

[1]ಸ್ವಲ್ಪ ಮಟ್ಟಿನ ಆವೃತ್ತಿಗಳು 1ನೇ ವಚನವನ್ನು ಒಂದು ಅಧೀನಸಂಬಂಧ ಪರಿಚ್ಛೇದವಾಗಿ ಕಾಣುತ್ತವೆ (NAB; NEB; NJPSV; NRSV; TEV). ಹೆಚ್ಚಿನ ಮಾಹಿತಿಗಾಗಿ, ನೋಡಿರಿ Victor P. Hamilton, *The Book of Genesis: 1—17*, The New International Commentary on the Old Testament (Grand Rapids, Mich.: Wm. B. Eerdmans Publishing Co., 1990), 103–8. [2]Terence E. Fretheim, "The Book of Genesis," in *The New Interpreter's Bible*, vol. 1, ed. Leander E. Keck (Nashville: Abingdon Press, 1994), 342. [3]W. H. Schmidt, "ברא," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 1:255. [4]*The Creation Epic* 4.1–146. [5]R. Laird Harris, "תְּהוֹם," in *Theological Wordbook of the Old Testament*, ed. R. Laird Harris, Gleason L. Archer, Jr., and Bruce K. Waltke (Chicago: Moody Press, 1980) (hereafter cited as *TWOT*), 2:966. [6]Francis Brown, S. R.

Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 956. [7]J. Barton Payne, "רָקִיעַ," in *TWOT*, 2:862. [8]*The Creation Epic* 4.137–140. [9]H. L. Ginsberg, trans., "Poems about Baal and Anath," in *Ancient Near Eastern Texts Relating to the Old Testament*, 3d ed., ed. James B. Pritchard (Princeton, N.J.: Princeton University Press, 1969), 129–42. [10]ಬೆತ್-ಶೆಮೆಶ್ ಎಂಬುದರ ಅರ್ಥವು "ಸೂರ್ಯ-ದೇವಾಲಯ" (Brown, Driver, and Briggs, 112). ಅಲ್ಲದೆ, ಯಾಕೋಬ ಎಂಬ ಹೆಸರು "ಚಂದ್ರ" ಎಂಬುದಕ್ಕಿರುವ ಅದೇ ಪದದ ಮೂಲ ಪದದಿಂದ ಬರುತ್ತದೆ. (Hamilton, 127–28, n. 4.)

[11]Brown, Driver, and Briggs, 1056. [12]Ibid., 1072. [13]John T. Willis, *Genesis*, The Living Word Commentary (Austin, Tex.: Sweet Publishing Co., 1979), 87. [14]H. C. Leupold, *Exposition of Genesis*, vol. 1 (n.p.: Wartburg Press, 1942; reprint, Grand Rapids, Mich.: Baker Book House, 1953), 86–87. [15]ಉದಾಹರಣೆಗೆ, ನೋಡಿರಿ ಮತ್ತಾಯ 3:16, 17; 28:19; ಯೋಹಾನ 1:1-3; 10:30-33; 20:28; ಅಪೊಸ್ತಲರ ಕೃತ್ಯಗಳು 5:3, 4; ರೋಮಾ 8:9-17, 26-29; 2 ಕೊರಿಂಥ 13:14; ಎಫೆಸ 3:16-19; ಫಿಲಿಪ್ಪಿ 2:5-11; ಕೊಲೊಸ್ಸೆ 1:15-17; ಇಬ್ರಿ 1:1-3; ಯೂದನು 20, 21; ಪ್ರಕಟನೆ 5:8-14. [16]ಯೋಬ 1:6 ಮತ್ತು 2:1ರಲ್ಲಿನ "ದೇವಪುತ್ರರು" ಆತನ ಮುಂದೆ ತೋರ್ಪಡಿಸಿಕೊಂಡ ದೇವದೂತರಾಗಿರುತ್ತಾರೆ, ಅವರೊಳಗೆ ಸೈತಾನನು ಸಹ ಇದ್ದನು. [17]John E. Hartley, "צֶלֶם," in *TWOT*, 2:767. [18]John N. Oswalt, "כָּבַשׁ," in *TWOT*, 1:430. [19]Hamilton, 139–40. [20]William White, "רָדָה," in *TWOT*, 2:833.

[21]*The Creation Epic* 6.8, 36. [22]*The Epic of Gilgamesh* 11.161. [23]Derek Kidner, *Genesis: An Introduction and Commentary*, The Tyndale Old Testament Commentaries (Downers Grove, Ill.: Inter-Varsity Press, 1967), 52. [24]*The Creation Epic* 6.29–33. [25]L. D. Virgilio, *DNA vs. Evolution: The Little Code That Confirms the End of Evolution* (Bloomington, Ind.: Author House, 2009), 107. [26]Lee Strobel, *The Case for a Creator* (Grand Rapids, Mich.: Zondervan, 2004), 226. [27]Augustine *Confessions* 1.1.1. [28]William Shakespeare *Hamlet* 3.1.55.